ಕರ್ಮವೀರ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ

ಸಂಸ್ಥಾಪಕರು— ಪ್ರವರ್ತಕರು:
ರಂ. ರಾ. ದಿವಾಕರ

★

ಹೊಟ್ಟೆ ಹೊರೆದುಕೊಳ್ಳುವ ಚಿಂತೆಯೆ ಹೆಚ್ಚಿದಾಗ ಉದಾತ್ತ ಚಿಂತನೆಗೆ ಅವಕಾಶ ದುರ್ಲಭ.

— ರೂಸೋ

★

ಕುಡುಕತನದಂಥ ಪಾತಕ ಜಗತ್ತಿನಲ್ಲಿ ಬೇರೊಂದಿಲ್ಲ: ಅದು ಮಾನವ ಜಾತಿಯನ್ನು ನಾಶಗೊಳಿಸಿದಷ್ಟು, ಮಾನವ ಸತ್ವವನ್ನು ಕೆಡಿಸಿದಷ್ಟು ಉಳಿದೆಲ್ಲ ಪಾತಕಗಳು ಸೇರಿದರೂ ಕೆಡಿಸುವದಿಲ್ಲ.


—ಬೇಕನ್

★

ಉಳಿದೆಲ್ಲ ವಿಕಾರಗಳು ಅಪರೂಪಕ್ಕೊಮ್ಮೆಯಾದರೂ ಒಳಿತುಮಾಡುವದುಂಟು. ಆದರೆ ಅಹಂಕಾರ ದಸಿಗೂಡಿಸಿತೆಂದರೆ ಒಡನೆ ಎಲ್ಲವೂ ತಪ್ಪುದಾರಿ ಹಿಡಿಯುತ್ತದೆ.

— ರಸ್ಕಿನ್

★



ಪಂ ಜವಾಹರಲಾಲ ನೆಹರೂ

★

ಭಾರತೀಯರ ಹೃದಯ ಸಮ್ರಾಟ ಪಂ. ಜವಾಹರರಿಗೆ ಮೊನ್ನೆ ಸೋಮವಾರ ೬೦ ವರ್ಷ ತುಂಬಿತು. ಭಾರತದಲ್ಲೆಲ್ಲ ಅವರ ಜನ್ಮೋತ್ಸವ ಆಚರಿಸಲ್ಪಟ್ಟಿತು.

ನೆರವಿಯ ನಡುವೆ ಏಕಾಕಿ-ನೆಹರೂ

—ಪುಟ ೫

ಕಳ್ಳನ ಕೈಫಿಯತ್ತು

—ಪುಟ ೨

ಕಳ್ಳನ ಕೈಫಿಯತ್ತು

[ಚೋರಶಿಖಾಮಣಿ ಪ್ರಣೀತ]

ಬಡವನು ಹೊಟ್ಟೆಗಿಲ್ಲದೆ, ಇಲ್ಲವೆ ಬೇರಾವ ಕಾರಣದಿಂದ ಇನ್ನೊಬ್ಬನ ಸೊತ್ತನ್ನು ಕದಿಯುವದು ಕಳವು, ಅದರ ಮೇಲೆ ಏರಿಹೋಗಿ ಕಸಿಯುವದು ದರೋಡೆ ಎನ್ನುವದು ಪರೋಕ್ಷ ಎಂದು ಸಾಮಾನ್ಯವಾಗಿ ತಿಳಿಯಲ್ಪಡುವದು. ಅದೇ ಒಂದು ಸಮಾಜವು ಇನ್ನೊಂದು ಸಮಾಜವನ್ನು ಹಿಂಸಾಚಿ(?) ಅದಕ್ಕೆ ಸಲ್ಲಬೇಕಾದ ಅಧಿಕಾರ, ರಾಜಕೀಯ, ಸಾಮಾಜಿಕ ಸೌಲಭ್ಯಗಳನ್ನು ತಾನೇ ಅಪಹರಿಸುವದು ಕಳವು ದರೋಡೆ ತಂತ್ರ್ಯಕ್ಕಿಂತ ಭಿನ್ನವಾಗಿರದಿದ್ದರೂ ಅದಕ್ಕೆ ಮುಂದುವರಿದ ಸಮಾಜದ ಪ್ರಗತಿ ಎಂದು ಹೇಳಲಾಗುವದು. ಅದೇ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ತನ್ನ ಪ್ರಭುತ್ವ ಹೇರಿ ಅದರ ಸ್ವಾತಂತ್ರ್ಯ ಸಂಪತ್ತನ್ನು ತನ್ನ ಲಾಭಕ್ಕಾಗಿ ಹೀರಿಕೊಳ್ಳುವದು ಸಾಮ್ರಾಜ್ಯವಾದವೆನಿಸುವದು. ಅದೇ ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಮೇಲೆ ದಾಳಿ ಮಾಡಿ ಅದನ್ನು ಸುಲಿದರೆ ಅದು ಬಲಾಢ್ಯ ರಾಷ್ಟ್ರದ ಪ್ರಚಂಡ ವಿಜಯವೆನಿಸುವದು. ಮೇಲಿನ ಮೂರು ಕೃತಿಗಳಲ್ಲಿಯ ಪರಿಣಾಮದಲ್ಲಿ ಯಾವ ಭೇದವೂ ಇಲ್ಲ. ಕೃತಿಯ ಸ್ವರೂಪವೂ ಉದ್ದೇಶವೂ ಒಂದೇ. ಆದರೆ ಸಾಧನಗಳ ವ್ಯಾಪ್ತಿ ಒಂದಕ್ಕಿಂತ ಒಂದರಲ್ಲಿ ಹೆಚ್ಚು ವಿಸ್ತಾರವಾಗುತ್ತ ಹೋಗುವದೇ ಅವುಗಳ ವೈಶಿಷ್ಟ್ಯ. ಇದರಿಂದ ಕಳವು ದರೋಡೆಗಳೆಂದರೆ ಸ್ವಭಾವತಃ ಹೀನ ಕೃತ್ಯಗಳಾಗಿರದೆ ಅವುಗಳನ್ನು ಮಾಡುವವನ ಯೋಗ್ಯತೆಯಿಂದ ಅವು ನಿರ್ಣಯಿಸಲ್ಪಡುವದು ಕಂಡುಬರದಿರದು. ಮನುಷ್ಯ ಕೃತಿಯಲ್ಲಿ ಕೂಡ ಒಂದೇ ತನ್ನರವ್ಯಕ್ತಿಗೆ(?) ಪ್ರತ್ಯೇಕವಾಗಿ ಕೊಡುವ ಬೇರೆ ಬೇರೆ ಶಿಕ್ಷೆಗಳನ್ನು ಹೇಳುವದನ್ನು ನೋಡಿದರೆ ಮೇಲಿನ ಮಾತಿಗೆ ಬೇರೆ ಆಧಾರ ಬೇಡ. ಆದುದರಿಂದಲೇ ಕಳವು ಒಂದು ದೋಷವಲ್ಲವೆಂದು ಹೇಳಬಹುದು.

ನಮ್ಮಲ್ಲಿಯ ನಾನಾ ವರ್ಗಗಳು

ಹೊಟ್ಟೆಗಿಲ್ಲದ್ದಕ್ಕೆ ಜೀವನಾಧಾರಕ್ಕಾಗಿ ಬೇರೆ ಉಪಾಯಗಾಣದೆ ಕಳ್ಳತನಕ್ಕಿಳಿದ ಜನರು ಗತಿ ತಂದ ಒಂದೆರಡಿಗಿದ್ದರೆ ಅದೊಂದು ಅನುವಂಶಿಕವಾಗಿ ಬಂದ ಕಾಲಧರ್ಮವೆಂದು ಶ್ರದ್ಧೆಯಿಂದ ಅದರಲ್ಲಿ ತೊಡಗಿದವರೂ ಇನ್ನೊಂದರೆಗೆ ಇರುವರು. ಇದು ಸಾಮಾನ್ಯ ಕಳ್ಳರ ಗತಿ ಯಾದರೆ ತನ್ನಲ್ಲಿ ಧನಕನಕಸಮೃದ್ಧಿಯಾಗಿದ್ದು ಸಮಾಜದಲ್ಲಿ ಮಹತ್ವದ ಸ್ಥಾನಪಡೆದಿರುವವರು, ಲೋಭದ ತೃಪ್ತಿಗಾಗಿ ಕಳ್ಳಪೇಟೆಗಿಳಿದವರು, ಕೀರ್ತಿ ಪ್ರತಿಷ್ಠೆಗಳಿಗಾಗಿ ಸತ್ತವರ, ಊರಲ್ಲಿಲ್ಲದವರ ಮತಗಳನ್ನು ಕದ್ದು ಸಮಾಜ ಮುಖಂಡರಾಗುವವರು, ಅನ್ಯರ ವಿಚಾರಗಳನ್ನು ಕದ್ದು ತಮ್ಮದೆಂದು ಜಗತ್ತಿಗೆ ಸಾರಿ ಹೇಳುವ ಕವಿ ಪುಂಗವರು, ಆಸೆಯ ಮೃಗಜಲದ ಬೆನ್ನು ಹತ್ತಲು ಅಜ್ಞ ಜನರನ್ನು ಪ್ರೇರೇಪಿಸಿ ಅವರ ಹಣವನ್ನು ಸೂರೆಗೊಳ್ಳುವ ವಕೀಲಪ್ಪಂದವು, ಸಾಲ್ಯಾಕ(?) ದಿಂದ ಪಥ್ಯವನ್ನು ಬುಚ್ಚಿ ಹಾಕಿ ನಾಲ್ಕು ರೂಪಾಯಿ ಸಿಗುನಗುತ್ತಲೇ ರೋಗಿಯ ಕಿಸೆಯಿಂದ ಕಿತ್ತುಕೊಳ್ಳುವ ಡಾಕ್ಟರರ ತಂಡವು, ತನ್ನ ಕರ್ತವ್ಯ ಮಾಡಲು ಸರಕಾರದಿಂದ ಸಂಬಳ ಪಡೆದರೂ ಅದನ್ನು ಸರಿಯಾಗಿ ಮಾಡದಿರುವದಕ್ಕೆ ಮುಚ್ಚಂಜೆಯಲ್ಲಿ ಮನೆ ಮುಟ್ಟಿ ಬಂದು ಹಣ ಕಿಸೆಗಿರಿಸಿ ಜನ ಹೋಗುವಂತೆ ಮಾಡುವ ತಂತ್ರ ಹೂಡುವ ಅಧಿಕಾರಿ ವರ್ಗ, ರಹಸ್ಯವಾಗಿದ್ದ ವಿಷಯಗಳನ್ನು ಕದ್ದು ಜಗತ್ತಿಗೆ ಸಾರಿ ದುಡ್ಡು ಕಿತ್ತುವ ಪತ್ರಿಕಾಕರ್ತನು, ಬೊಟ್ಟಿ ಜಾಹಿರಾತು ಕೊಟ್ಟು ಹಣ್ಣುಸಿಕ್ಕಿದ(?) ನಿಪುಣವಾಗಿ ಸಂಬಳಿಗೆ ಹುಟ್ಟಿಸಿ ಜನರಿಂದ ಧನ ಸುಲಿಯುವ ಉತ್ಪಾದಕ ವರ್ಗ, ಭವಿಷ್ಯದ ಸುಖ್ಯ(?) ತಲೆಗೇರಿಸಿ ದುಡ್ಡು ದಕ್ಷಿಣೆ ಕಿತ್ತುವ ಜ್ಯೋತಿಷಿಗಳ ಗುಂಪು, ಯೋಗ್ಯತೆ ಇಲ್ಲದೆ ತಾನು ಅಧಿಕಾರಸ್ಥಾನ ವಹಿಸಲು ಅನರ್ಹನೆಂದು ಗೊತ್ತಿದ್ದರೂ ಯೋಗ್ಯತಾ ಸಂಪನ್ನ ವ್ಯಕ್ತಿಗಳ(?) ಅನುಯಾಯಿಗಳಲ್ಲಿ ಜಾತಿ, ಮತ ಅಂತರಗಳೆಂಬ ಮಹಾಮಂತ್ರಗಳ ಜಾಲ ಬೀಸಿ ಒಡಕು ಹುಟ್ಟಿಸಿ ಅವರಿಗೆ ಸಲ್ಲಬಹುದಾದ ಸ್ಥಾನವನ್ನು ತಾನೇ ಆಕ್ರಮಿಸುವ ರಾಜಕಾರಣಿಗಳಾದ ಮಹಾ ಮುತ್ಸದ್ದಿಗಳ ಸಮೂಹ ಹೀಗೆ ಒಂದೇ ಎರಡೇ ಯಾವ ಕ್ಷೇತ್ರದಲ್ಲಿ ನಡೆಸಿಹಾಕಿದರೂ(?) ಅಲ್ಲಿ ಕಳ್ಳತನದ ತಂತ್ರವು ಒಳ್ಳೆ ದಕ್ಷತೆಯಿಂದ ಉಪಯೋಗಿಸುವ ಕುಶಲ ಕಳ್ಳರೆ ಕಣ್ಣಿಗೆ ಬೀಳುವರು. ಇದರಿಂದ ನಮ್ಮ ಸಮಾಜವು ಬಹುಸಂಖ್ಯಾಕ ಸಮಾಜವೆಂದು ಪ್ರಜಾಪ್ರಭುತ್ವದ ಈ ಯುಗದಲ್ಲಿ ತಾನೇ ಎಲ್ಲೆಲ್ಲಿಯೂ ಅಧಿಕಾರದಲ್ಲಿರಬಹುದೆಂಬುದು ಅಸಂಭವನೀಯ ಮಾತಲ್ಲ. ನಮ್ಮ ಕೆಲಸಗಾರರನ್ನು ಸಾರ್ವಜನಿಕವಾಗಿ ಗೌರವಿಸಿ ಮನ್ನಿಸುವ ಜನರೇ ಒಂದಲ್ಲದ(?) ನಮ್ಮಂಥ ಸಾಮಾನ್ಯ ಕಳ್ಳರನ್ನು ಕಂಡರೆ ದಂಡಿಸುವ ಶುದ್ಧ ಅಂಧ(?) ಪ್ರವೃತ್ತಿ ತೋರುವದು ನೋಡಿದರೆ ಸಮಾಜವೆಂದರೆ ಕುರಿ ಹಿಂಡು ಎಂಬ ಅನ್ವರ್ಥಕ ಮಾತಿಗೆ ಅರ್ಹವಾದುದು ಎಂದು ಹೇಳಬಹುದು.

ನಮ್ಮ ಉದ್ಯೋಗ ಸನಾತನಧರ್ಮಸಮ್ಮತವು

ಈಗಿನ ಕಾಲದಲ್ಲಿಯೇ ಕಳ್ಳತನವು ಇಷ್ಟೊಂದು ಪ್ರಬಲವಾಗಿದೆ; ಪ್ರಾಚೀನ ಕಾಲದಲ್ಲಿ ಸಮಾಜದಲ್ಲಿ ಅದೊಂದು ಹೀನ ಕೃತ್ಯವೆಂದು ಗಣಿಸಲ್ಪಡುತ್ತಿತ್ತು ಎಂದು ಭಾವಿಸಬೇಡಿರಿ. ನಮ್ಮ ಉದ್ಯೋಗವು ಶ್ರೀವಿಷ್ಣು ಪ್ರಣೀತವಾದುದು. ಅದೊಂದು ಸನಾತನ ಧರ್ಮದ ಅಂಗವು. ಸಮುದ್ರ ಮಂಥನದ ಕಾಲದಲ್ಲಿ ಹೊರಟ ಅಮೃತವನ್ನು ಕದ್ದು ದೇವತೆಗಳಿಗೆ ಹಂಚಿದ ವಿಷ್ಣು ಸರ್ವೋತ್ತಮನು. ಗೌತಮನ ಪತ್ನಿಯ ಮೇಲೆ ಆಸೆ ಮಾಡಿ ಅವಳ ಪಾತಿವ್ರತ್ಯವನ್ನು ಕಳ್ಳತನದಿಂದ ಅಪಹರಿಸಿದ ಇಂದ್ರನು ದೇವತೆಗಳ ಹಿರಿಯನು. ಬಾಲ್ಯದಲ್ಲಿ ಹಾಲು ಮೊಸರನ್ನು ಕದ್ದು ಗೋಪಿಯರ ಹೃದಯಚೋರನಾದ ಶ್ರೀಕೃಷ್ಣನು ವಸುದೇವ ಯಾದವನು ಪ್ರಾಥ(?) ಪಡುಸ್ಥಾನದ ಮೇಲೆ ವಿಶ್ವಕರ್ಮ(?) ಕಳುಹಿ ರುಕ್ಮಿಣಿಯನ್ನು ಕದ್ದು ತಂದು ಪುರಾಣಿಕರ ಮೆಚ್ಚುಗೆ ಪಡೆದು ವಿಷ್ಣುವಿನ ಪೂರ್ಣಾವತಾರ ಸ್ವರೂಪನೆಂದು ಬಿರುದು ಪಡೆದನು. ಕರ್ಣನ ಕವಚಕುಂಡಲಗಳನ್ನು ಕದ್ದು ತರುವ ತಂತ್ರ ಹೂಡಿ ಭಕ್ತವತ್ಸಲನೆಂಬ ಹಿರಿ ಬಿರುದು ಪಡೆದನು. ವಿರಾಟನ ದನಕರುಗಳನ್ನು ಕದ್ದು ತರಲು ಹೋದ ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮಾದಿಗಳು ಉದಾತ್ತ ಚರಿತರೆಂದೇ ಭಾವಿಸಲ್ಪಟ್ಟು ಗೌರವಿಸಲ್ಪಟ್ಟರು. ಇಂಥ ಸಾವಿರಾರು ಉದಾಹರಣೆ ಕೊಡಬಹುದು. ಇದರಿಂದ ಪುರಾಣ ಕಾಲದಲ್ಲಿ ಕದಿಯುವದೊಂದು ಶೌರ್ಯ, ಕುಶಲತೆ, ಮುತ್ಸದ್ದಿತನದ ಪ್ರತೀಕವೆಂದು ಜನಮನ್ನಣೆಗೆ ಪಾತ್ರವಾಗಿತ್ತೆಂದು ಹೇಳಬಹುದು. ಸ್ವತಃ ಶ್ರೀಕೃಷ್ಣನೇ ಅಧಿದೈವವಾದ ಈ ಕಲೆಯನ್ನು ಮೊನ್ನೆ ಮೊನ್ನಿನವರೆಗೂ ಅವನ ಭಕ್ತಶ್ರೇಷ್ಠರು ಅನುಸರಿಸಿ ಕೀರ್ತಿವಂತರಾದರು. ವಾದಿರಾಜಸ್ವಾಮಿಗಳು 'ನಮ್ಮ ಗುರುಗಳಾದ ವ್ಯಾಸರಾಯರ ದೇವರ ಪೆಟ್ಟಿಗೆಯಿಂದ ವ್ಯಾಸದೇವರ ಸಂಪುಟವನ್ನೇ ಎತ್ತಿಹಾಕಿದರಂತೆ. ಮೂಲರಾಮ ಮೂರ್ತಿಯ ವಿಷಯದಲ್ಲುಂಟಾದ ವಿವಾದವನ್ನು ನೋಡಿದರೆ ಈ ಪರಂಪರೆಯನ್ನು ಅನುಸರಿಸಿದವರು ಉಡುಪಿ ಮಠದವರು ಮಾತ್ರವಲ್ಲೆಂಬುದು ವೇದ್ಯವಾಗುವದು. ಹೀಗೆ ಸರ್ವತ್ರ ಮಾನ್ಯವಾಗಿ ಶ್ರೀಕೃಷ್ಣನಿಗೆ "ಚೋರಚೋರ ಶಿಖಾಮಣಿ"ಯೆಂಬ ಬಿರುದು ದೊರಕಿಸಿಕೊಟ್ಟ ಈ ವಿದ್ಯೆಗೆ ಬುದ್ಧಿವಂತರಾದ ಪ್ರಾಚೀನರು ಚತುಷ್ಪಷ್ಠಿ ಕಲೆಗಳಲ್ಲೊಂದು ಸ್ಥಾನವಿತ್ತದ್ದೇನು ವಿಚಿತ್ರ? ಕಳ್ಳನನ್ನು ಈಗಿನಂತೆ ನ್ಯಾಯಾಸನದ ಮುಂದೆ ನಿಲ್ಲಿಸಿ ಶಿಕ್ಷೆ ವಿಧಿಸುವ ಪಿನಲ್‌ಕೋಡ ಆಗ ಇದ್ದುದಾಗಿದ್ದರೆ ಕೃಷ್ಣನು ಸ್ತ್ರೀ ಅಪಹರಣ, ಮೋಸಮಾಡುವದು ಮುಂತಾದ ಇನ್ನು ಅನೇಕ ಅಪರಾಧಗಳಿಗಾಗಿ ಸೆರೆಮನೆಯಲ್ಲಿ ಕೊನೆಯ ವರೆಗೆ ಬೀಳಬೇಕಾಗುತ್ತಿತ್ತು. ಅನಾದಿಕಾಲದಿಂದ ದೇವತೆಗಳು ಕೂಡಾ ಅನುಸರಿಸಿದ ಕಳ್ಳತನವು ಸನಾತನ ಧರ್ಮದ ಒಂದು ಅಂಗವೆಂದೂ, ಅದು ಕೆಲವು ವರ್ಗದ ಜನರ ಕಾಲಧರ್ಮವೆಂದೂ ನಿಷ್ಠೆಯಿಂದ ಅಂಗೀಕರಿಸುತ್ತ ಬಂದು ನಮ್ಮ ಹಿಂದಿನ ಸಂಸ್ಕೃತಿಯನ್ನು ಅಕ್ಷಯವಾಗಿ(?) ಉಳಿಸಿಕೊಂಡ ಬಗ್ಗೆ ಸಮಾಜವು ನಮ್ಮ ವರ್ಗದವರನ್ನು ಗೌರವಿಸುವದು ಕ್ರಮಪ್ರಾಪ್ತವಾದೀತು.

ನಮ್ಮ ಉದ್ಯೋಗ ಒಂದು ಲೋಕಸೇವೆ

ನಮ್ಮ ಉದ್ಯೋಗವು ಲೋಕ ಸೇವೆಯ ಒಂದು ಶ್ರೇಷ್ಠ ಸಾಧನವೆಂದು ಹೇಳಿದರೆ ನೀವೇನೂ ಆಶ್ಚರ್ಯದಿಂದ ಆ? ಎಂದು ಕೇಳಬೇಕಾಗಿಲ್ಲ. ವಿಚಾರ ಮಾಡಿದರೆ ಈ ಮಾತು ನಿಮಗೆ ಹೊಳೆಯುವದು. ನಿಮಗೆ ವಿಚಾರ ಶಕ್ತಿ ಇದ್ದರೆ ನೀವು ನಮ್ಮ ಪ್ರಾಣರಕ್ಷಣೆ ಅನ್ನಪಾನಗಳ ನಮ್ಮ ಹುಡುಗರನ್ನು(?) ನನ್ನ ಬೇಡಿಯುತ್ತೇನೆ(?) ... ಅವರ ನೀರಾ ಪಟ್ಟಿಯಿಂದ ಹಿಗ್ಗಿದ ನಿಂ ತೊಳೆ ಕೀಳಲ್ಲಿ ಹಿಕೊಳೆ ಇದರ ಮುಂದೆ ಇ ತೊಳೆ ಕಳು ಹೋಗಿ ಉಳಿಯುವ ನಿಂ ತೊಳೆ ಆಹಾರದ ಮೇಲೆ ನೀವು ಬಗಳಲು(?) ನಿರ್ಧರಿಸಿದ್ದರೆ ನೀವು ಎಂದೋ ಸ್ವರ್ಗವಾಸಿಯಾಗುತ್ತಿದ್ದಿರಿ. ಕಳ್ಳಪೇಟೆಯ ವರ್ತಕರು ಅಪಾರ ಪರಿಶ್ರಮ ವಹಿಸಿ ಕಾಳು ತಂದು ನಿಮಗೆ ಒದಗಿಸಿ ನಿಮ್ಮ ಪ್ರಾಣ ಉಳಿಸಿದ ಪುಣ್ಯಾತ್ಮರು. ಜನತೆಯು ಅಲ್ಪಾಹಾರದಿಂದ ಅನಾರೋಗ್ಯಕ್ಕೀಡಾಗಿ ದುರ್ಬಲವಾಗಿ ಅನೇಕರು ಮಡಿಯುವದನ್ನು ತಪ್ಪಿಸುವ ಕಳ್ಳಪೇಟೆಯು ನಮ್ಮ ಬಾಂಧವ! ಸಮಾಜ ಸೇವೆ ಅಷ್ಟಿಷ್ಟಲ್ಲ. ತಪ್ಪು ಮಾಡದವನನ್ನು ಸೆರೆಮನೆಗೆ ಅಟ್ಟಿದ ತನ್ನ ಕುಟುಂಬಪೋಷಣೆಗೆ ಮಾತ್ರ ಸಾಲುವಷ್ಟು ಅಲ್ಪ ದಕ್ಷಿಣೆಯಿಂದ ತೃಪ್ತರಾಗಿ ಲೈಪೆಡೋರಿ(?) ನಿಡುವ ನಮ್ಮ ಪೋಲೀಸರು ಕುಟುಂಬಘಾತ ತಪ್ಪಿಸಿದ ಪುಣ್ಯಾತ್ಮರಲ್ಲವೆ? ಲಕ್ಷಾಂತರ ರೂಪಾಯಿ ಹಾನಿ ಸಂಭವಿಸಬಹುದಾದ ಒಂದು ಕಟ್ಟಡವನ್ನು ಗೆದ್ದು ಅಪಾರ ಲಾಭ ಹೊಡೆಯಲು ಅನುಕೂಲವಾಗುವಂತೆ ಸಮಯದಲ್ಲಿ ಟಿಕಾರ(?) ಕೊಡುವವರು ತಮ್ಮ ಶ್ರಮದ ಲಾಭವೆಂದು ತೀರ ಅಲ್ಪ ಹಣಕ್ಕೆ ತೃಪ್ತರಾಗುವವರು. ಪಕ್ಷ ಗೆದೆಯುವಂತೆ ಉಪಕಾರ ಮಾಡುವದು ಸಾಮಾನ್ಯ ಲೋಕಸೇವೆಯಲ್ಲ. ನಾನು ಮೇಲೆ ಹೇಳಿದ ನಮ್ಮ ವರ್ಗದಲ್ಲಿಯ ನಾನಾ ಬಗೆಯ ಜನರ ಕಾರ್ಯವನ್ನು ಈ ದೃಷ್ಟಿಯಿಂದ ನೋಡಿದರೆ ಅವರ ಸಮಾಜಸೇವೆಯ ಹಿರಿಮೆ ಗೊತ್ತಾಗದಿರದು.

ಸಮಾಜದಲ್ಲಿ ನಮ್ಮ ವರ್ಗವೇ ನಿರ್ಮೂಲವಾಯಿತೆಂದು ಭಾವಿಸಿರಿ. ಆಗ ಸಮಾಜದಲ್ಲಿ ಎಂಥ ಅನರ್ಥವಾಗುವದೆಂಬದನ್ನು ನೀವು ವಿಚಾರ ಮಾಡಿದರೆ ನಮ್ಮ ಸಮಾಜದ ಲೋಕೋತ್ತರಸೇವೆಯ ಕಲ್ಪನೆ ಇನ್ನೂ ಹೆಚ್ಚು ಸ್ಪಷ್ಟವಾಗಿ ನಿಮಗೆ ಮನವರಿಕೆಯಾಗುವದು. ಕಳ್ಳರಿಲ್ಲದ ಸಮಾಜದಲ್ಲಿ ಪೋಲೀಸರದೇನು ಕೆಲಸ? ಅಸಂಖ್ಯ ಪೋಲೀಸರು ನೌಕರಿ ಇಲ್ಲದೆ ನಿರುದ್ಯೋಗಿಗಳಾಗಿ ನಿರುದ್ಯೋಗಿಗಳ ಸಮಸ್ಯೆ ಭೀಕರ ಸ್ವರೂಪ ತಾಳದಿರದು. ವಕೀಲರು, ನ್ಯಾಯಾಧೀಶರು ಇವರಿಗೆ ಸ್ಥಾನವೇ ಇಲ್ಲ. ಶ್ರಮವಹಿಸಿ ದುಡಿದು ಹೊಟ್ಟೆ ತುಂಬಿಕೊಳ್ಳುವದನ್ನು ಅರಿಯದ ಈ ವರ್ಗ ಉದರಪೋಷಣೆಗಾಗಿ ಭಿಕ್ಷಾವೃತ್ತಿ ತಾಳೆ(?) ಸಮಾಜದಲ್ಲಿ ಅದೊಂದು ದೊಡ್ಡ ಸಮಸ್ಯೆ ನಿಲುವದು. ಕಳ್ಳಪೇಟೆ ಇಲ್ಲದ್ದರಿಂದ ಜನರಿಗೆ ಕಾಳು ಸಿಗಲಾರದು ಅಧಿಕಾರಿಗಳಿಗೆ ಲಂಚ ಸಿಗಲಾರದು. ಹೆರವರ ವಿಚಾರ ಕದ್ದು ತನ್ನದೆಂದು ಪ್ರಕಟಿಸುವ ಕವಿಗಳಿಲ್ಲ, ಗ್ರಂಥಕಾರರಿಲ್ಲ. ಸಾಹಿತ್ಯದ ಬೆಳವಣಿಗೆ ಕುಂಠಿತವಾಗಿ ಮುದ್ರಕರಿಗೆ, ಪ್ರಕಾಶಕರಿಗೆ ಗ್ರಂಥಕರ್ತನ ಶ್ರಮದ ಲಾಭವಿಲ್ಲದಂತಾಗಿ ಅವರೂ ನಿರುದ್ಯೋಗಿಗಳೇ. ಗುಪ್ತ ಸಂಗತಿಗಳನ್ನು ಕಂಡು ಬಹಿರಂಗಪಡಿಸುವ ಪತ್ರಿಕೆಗಳಿಲ್ಲದ್ದಕ್ಕೆ ಜನತೆಗೆ ಎಲ್ಲಿ ಏನು ನಡೆದಿದೆ ಎಂಬುದೇ ತಿಳಿಯದು. ಸಮಾಜದಲ್ಲಿ ಹಣಕ್ಕೆ ಮಹತ್ವವೇ ಇಲ್ಲದಂತಾಗಿ ಹಣದಿಂದ ಈಗ ಸಾಧಿಸಿಕೊಳ್ಳುವ ಯಾವ ಕಾರ್ಯವೂ ಸಾಧಿಸದಂತಾಗುವದು. ನಿರುದ್ಯೋಗಿಗಳ ಸಂಖ್ಯೆ ಬೆಳೆಯುವದು. ಸುಶಿಕ್ಷಿತ ನಿರುದ್ಯೋಗಿಗಳು ಸಮಾಜದಲ್ಲಿ ಸರಕಾರದ ವಿರುದ್ಧ ಬಂಡು ಹೂಡಲು ಪ್ರಚಾರ ನಡೆಸಬಹುದು. ಕಚೇರಿಗಳಲ್ಲಿ ಕಾರಕೂನರು ಕೆಲಸದಲ್ಲಿ ಆಸ್ಥೆ ವಹಿಸದೆ ಆಡಳಿತದ ಯಂತ್ರ ಕುಸಿದಿದ್ದರೂ ಬೀಳಬಹುದು.

ಸರಕಾರವೇ ನಮ್ಮದಾಗದಿರದು

ನಮ್ಮ ವರ್ಗದ ಜನರು ಇಲ್ಲದಂತಾದರೆ ಸಮಾಜದಲ್ಲಿ ಇಷ್ಟೆಲ್ಲ ಅನರ್ಥಪರಂಪರೆಯಾಗುವದು. ಇದನ್ನು ಯಾರೂ ಅಲಕ್ಷಿಸಲು ಶಕ್ಯವಿಲ್ಲ. ಸರಕಾರವು ಕೂಡಾ ಕೋಳಿ ಕದ್ದವನಿಗೆ ಕಿಸೆ ಕತ್ತರಿಸಿದವನಿಗೆ ಕಾರಾವಾಸದ ಶಿಕ್ಷೆ ಎಂದು ಪಿನಲ್ ಕೋಡಿನಲ್ಲಿ ಸಾರಿದ್ದರೂ ನಮ್ಮ ಸಮಾಜ ಸಂಘಟಿತವಾದುದು ತಿಳಿದ ಕೂಡಲೇ ಕಾನೂನಿಗೆ ತಿದ್ದುಪಡಿ ಕಾನೂನು ಹಾಕು(?) ಮಾಡದೆ ಇರದು. ಬಹುಸಂಖ್ಯಾಕರಾದ ರೈತರ ಹಿತ ಸಾಧಿಸಲು ಕುಳ ಕಾಯಿದೆಗೆ ಒಂದೆರಡು ನೂರು ತಿದ್ದುಪಡಿ ಕಾನೂನಾದಂತೆ ಬಹುಸಂಖ್ಯಾಕರಾದ ನಮ್ಮ ವರ್ಗದವರು ಈಗಿನ ಪ್ರಜಾಪ್ರಭುತ್ವ ಯುಗದಲ್ಲಿ ಜಾಗೃತರಾಗಿ ಸಂಘಟಿತರಾದರೆ ಸರಕಾರವು ಕಳ್ಳತನವು ಶ್ರೇಷ್ಠ ಉದ್ಯೋಗ. ಅವರಲ್ಲಿ ಪರಿಣತರಾದವರಿಗೆ ಸರಕಾರೀ ನೌಕರಿ, ನ್ಯಾಯಾಲಯದ ಮನ್ನಣೆ, … ಗಳು ಅಲ್ಲದೆ, … ಕೊಡಬೇಕು. ಉಳಿದವರಿಗೆ ಕೂಲಿ(?) ಕೊಡದೇನು(?) ನಮ್ಮ ವರ್ಗದವರ ಮತಗಳ ಬಲದಿಂದ ಆರಿಸಿಬರುವ ಶಾಸನ ಸಭೆಯು ಸದಸ್ಯರ ಒತ್ತಾಯದಿಂದ ಕಾನೂನು ಮಾಡಿಯೇ ತೀರಬೇಕಾಗುವದು.

ಸಮಾಜದ ಬಹುಸಂಖ್ಯಾಕರಿಗೆ ರುಚಿಸದ ಕೃತ್ಯ ಒಬ್ಬಿಬ್ಬರು ಮಾಡಿದರೆ ಅವರನ್ನು ದಂಡಿಸುವ ಕಾನೂನನ್ನು ಸಮಾಜದ ಒತ್ತಾಯದಿಂದ ಯಾವ ದೇಶದ ಸರಕಾರವಾದರೂ ಮಾಡಲೇಬೇಕಾಗುವದು. ನಮ್ಮ ವರ್ಗ ಅಲ್ಪಸಂಖ್ಯಾಕರಾಗಿದ್ದಾಗ ಸರಕಾರ ನಮ್ಮನ್ನು ದಂಡಿಸುವ ಕಾನೂನು ಮಾಡಿತು. ಈಗ ನಾವು ಬಹುಸಂಖ್ಯಾಕರಾಗಿ ಸಮಸ್ತ ಕ್ಷೇತ್ರಗಳಲ್ಲಿ ನಮ್ಮ ವರ್ಗದವರು ವರ್ಚಸ್ವೀ ಸ್ಥಾನಗಳನ್ನು ಹಿಡಿದಿರುವರು. ಆದುದರಿಂದ ಇಂದು ನಮ್ಮನ್ನು ಬಂಧಿಸಲು ಓಡಾಡುವ ಪೋಲೀಸರೇ ಕಳ್ಳತನದ ಶ್ರಮ ನಮಗೆ ಬೀಳದಂತೆ ತಾವೇ ಧನಿಕರಿಂದ ಹಣ ಸುಲಿದು ತಂದು ನಮಗೆ ಮುಟ್ಟಿಸುವಂತೆ ಸರಕಾರವು ಕಾನೂನು ಮಾಡಬೇಕಾಗುವದು. ಗಾಂಧೀ ಟೊಪ್ಪಿಗೆ ಕಂಡರೆ ಹಸಿದ ಹುಲಿಯಂತೆ ಎರಗಿ ಬಂದು ನಾನಾ ತರದ ಪ್ರಶ್ನೆ ಕೇಳುತಿದ್ದ ಪೋಲೀಸರೇ ಇಂದು ಗಾಂಧೀ ಟೊಪ್ಪಿಗೆ ಹಾಕಿದರೆ ನಮ್ಮನ್ನು ವಿನಯದಿಂದ ನಮಸ್ಕರಿಸುತ್ತಿರುವಂತೆ ಮುಂದೆ ತಾವೇ ಧನಿಕರ ಮನೆಯ ಹಣ ಕಿತ್ತಿ ತಂದು ನಮ್ಮ ಮನೆಗೆ ಮುಟ್ಟಿಸಬೇಕಾಗುವದು. ಎಲ್ಲ ಉದ್ಯೋಗಗಳನ್ನು ರಾಷ್ಟ್ರೀಕರಣ ಮಾಡುವ ಗಾಳಿ ಬೀಸುತ್ತಿರುವಾಗ ನಮ್ಮ ಉದ್ಯೋಗ—ಕಳ್ಳತನ—ಇದನ್ನೂ ರಾಷ್ಟ್ರೀಕರಣ ಮಾಡಲು ಸರಕಾರಕ್ಕೆ ನಮ್ಮ ಪ್ರತಿನಿಧಿಗಳಾದ ಶಾಸನ ಸಭೆಯ ಸದಸ್ಯರಿಗೆ ಸೂಚಿಸಿದರಾಯಿತು. ಆಗ ಸರಕಾರವು ತಾನೇ ಕಳವು ಮಾಡಿ ಧನಿಕರ ಧನವನ್ನು 'ಪೋಲೀಸರ ಬಲದಿಂದ ಕಿತ್ತುಕೊಂಡು ನಮಗೆ ಹಂಚಿಕೊಡುವದು. ಇದಕ್ಕೆ 'ಕಮ್ಯುನಿಜಂ' ಎಂಬ ಉದಾತ್ತ ತತ್ವದ ಬಣ್ಣ ಬಳಿದು ನಾವು ಮಾಡುವ ಉದ್ಯೋಗವನ್ನೇ ಸರಕಾರಕ್ಕೊಪ್ಪಿಸಿ ನಮ್ಮ ಉದ್ಯೋಗ ರಾಷ್ಟ್ರೀಕರಣ ಮಾಡಿದ ಬಗ್ಗೆ ವಾರ್ಷಿಕ ಪ್ರತಿಫಲ ಸರಕಾರದಿಂದ ಸಿಗುವಂತಾಗುವದು ಅಶಕ್ಯಕೋಟಿಯ ಮಾತಲ್ಲ.

ನಮ್ಮ ಉದ್ಯೋಗದ ವಿವಿಧ ಸ್ವರೂಪ, ನಮ್ಮ ವರ್ಗದವರಿಗೆ ಇರುವ ಸಾಮಾಜಿಕ ಸ್ಥಾನಮಾನ, ನಮ್ಮ ಸಂಘಟನಾ ಸಾಮರ್ಥ್ಯ ಅರಿತ ಬಳಿಕ ನೀವು ಇನ್ನು ಮುಂದೆ ಕಳ್ಳರೆಂದು ತುಚ್ಛಭಾವನೆಯಿಂದ ನಮ್ಮನ್ನು ನೋಡಲಾರಿರಿ, ನೋಡಿದರೆ ಎಚ್ಚರಿಕೆ!

ದೇಶಾಂತರಗಳಿಂದ

ಬ್ರಿಟಿಶ ರಾಜಸರಿಗೆ ದೌಹಿತ್ರ ಲಾಭ

ಬ್ರಿಟನ್ನಿನ ಅರಸ ಜಾರ್ಜ ಅರಸರ ಪುತ್ರಿಯಾದ ಎಲಿಜಬೇತ್ ರಾಜಕುಮಾರಿಗೆ ನೊವ್ಹೆಂ. ೧೪ ರಾತ್ರಿ ಪುತ್ರೋತ್ಸವವಾಯಿತು. ಕಳೆದ ವರ್ಷ ಅವರ ವಿವಾಹ ಲೆಫ್ಟನೆಂಟ್ ಮೌಂಟಬ್ಯಾಟನ್ನ (ಈಗ ಡ್ಯೂಕ ಅಫ್ ಎಡಿನ್‌ಬರೊ) ರೊಡನೆ ಆಗಿತ್ತು. ಈಗ ಹುಟ್ಟಿದ ಮಗುವೇ ಮುಂದೆ ಬ್ರಿಟಿಶ ಸಿಂಹಾಸನದ ಉತ್ತರಾಧಿಕಾರಿಯಾಗುವದು. ಎಲಿಜಬೇತಳ ನಂತರ ಅವನು ಪಟ್ಟಕ್ಕೆ ಬರುವನು. ಸಾಮ್ರಾಜ್ಯದಲ್ಲಿಲ್ಲ, ಹಿಂದುಸ್ತಾನದಲ್ಲಿ ಕೂಡ, ಈ ಆನಂದ ಸಮಾಚಾರ ಕೇಳಿ ಅಧಿಕೃತವಾಗಿ ಉತ್ಸವ ಆಚರಿಸಲ್ಪಟ್ಟಿತು. ಈ ಮಗುವಿಗೆ ನಾಮಕರಣ ಮಾಡಲು ಭಾರತ ಮುಖ್ಯ ಮಂತ್ರಿ ಪಂ. ಜವಾಹರಲಾಲ ನೆಹರೂ ಅವರನ್ನು ಆಮಂತ್ರಿಸಲಾಗಿದೆಯೆಂದು ತರ್ಕ.

ಬರ್ಲಿನ್ ಬಿಕ್ಕಟ್ಟು

ಬರ್ಲಿನ ಬಿಕ್ಕಟ್ಟು ಬಹಳ ಉಗ್ರಾವಸ್ಥೆಗೆ ಮುಟ್ಟಿದ್ದು ಯಾವಾಗ ಏನು ಸಂಭವಿಸುವದೋ ಹೇಳಬರುವದಿಲ್ಲ. ಯುಕ್ತ ರಾಷ್ಟ್ರ ಸಂಘದಲ್ಲಿ ಬಿಗುಹಿನ ವಾತಾವರಣದ ನಂತರ ತ್ರಿರಾಷ್ಟ್ರ ಪ್ರಮುಖರ, ಅಂದರೆ ಅ್ಯಟ್ಲಿ, ಸ್ಟಾಲಿನ್, ಟ್ರೂಮನ್ನರ ಭೆಟ್ಟಿಯಾಗಬೇಕೆಂಬ ಕೆಲವರ ಸೂಚನೆಯನ್ನು ಬ್ರಿಟಿಶ ಮುಖ್ಯ ಮಂತ್ರಿ ಕ್ಲೆಮೆಂಟ ಅಟ್ಲಿಯವರು ತಿರಸ್ಕರಿಸಿದರು. ಇಷ್ಟರಲ್ಲಿ ರಶಿಯನ್ನರು ಅಮೇರಿಕೆಗೂ ಬ್ರಿಟನ್ನಿಗೂ ರಾಯಸ ಕಳಿಸಿ ಪಶ್ಚಿಮದಿಂದ ಬರ್ಲಿನ್ನಿಗೆ ಹಾರುವ ವಿಮಾನಗಳು ಅಧಿಕೃತ ವಿಮಾನ ಮಾರ್ಗವಲ್ಲದೆ ಬೇರೆ ರಶಿಯನ್ ಆಕ್ರಮಿತ ಪ್ರದೇಶದಲ್ಲಿ ಸುಳಿದರೆ ಅವನ್ನು ಕೆಳಗಿಳಿಸಲಾಗುವದೆಂದು ಎಚ್ಚರಿಕೆ ಕೊಟ್ಟರು. ಹೀಗೆ ಮಾಡಿದರೆ ಪರಿಣಾಮ ಭೀಕರವಾಗಬಹುದೆಂದು ಬ್ರಿಟಿಶರು ಉತ್ತರ ಕೊಟ್ಟಿದ್ದಾರೆ. ಬರ್ಲಿನ್ನಿನ ಬ್ರಿಟಿಶ್, ಅಮೇರಿಕನ್, ಫ್ರೆಂಚ್ ಪ್ರದೇಶಗಳಿಗೆ ಆಹಾರಾದಿ ಸಾಮುಗ್ರಿಗಳನ್ನು ಮುಟ್ಟಿಸಲು ವಿಮಾನವೊಂದೇ ಸಾಧನವಾಗಿದೆ. ಅದೂ ಸ್ಥಗಿತವಾದರೆ ಬರ್ಲಿನ್ನನ್ನು ರಶಿಯನ್ನರಿಗೊಪ್ಪಿಸಿ ಇವರು ಹೊರಡಲೇಬೇಕಾದೀತು. ಅದಕ್ಕೆ ಸಿದ್ಧವಿಲ್ಲದೆ ಅಂಗ್ಲೋ ಅಮೇರಿಕನ್ನರು ಪ್ರತಿಭಟಿಸಿದರೆ ಯಾವ ಕ್ಷಣಕ್ಕೂ ಯುದ್ಧ ಪ್ರಾರಂಭವಾಗಬಹುದು.

ಚೀನದಲ್ಲಿ ಚಿಯಾಂಗರ ಅಪಯಶ

ಚಿಯಾಂಗ್ ಕೈ ಶೇಕರ ಪ್ರಚಾರಶಾಖೆಯವರು ನಡುನಡುವೆ ಅಲ್ಲಲ್ಲಿ ತಮಗೆ ವಿಜಯವಾಯಿತೆಂದು ಸುದ್ದಿಕೊಡುತಿದ್ದರೂ ಮಂಚೂರಿಯದ ರಾಜಧಾನಿ ಮುಕಡೆನ್ ಪತನದೊಡನೆ ಪ್ರಾರಂಭವಾದ ಕಮ್ಯುನಿಸ್ಟರ ವಿಜಯ ಪರಂಪರೆಯನ್ನು ತಡೆಗಟ್ಟಲು ಇನ್ನೂ ಅವರಿಗೆ ಸಾಧ್ಯವಾಗಿಲ್ಲವೆಂದು ಸ್ಪಷ್ಟವಾಗಿದೆ. ಈಗ ಹ್ಯೂಪೆ ಪ್ರಾಂತದಲ್ಲಿ ಕಮ್ಯುನಿಸ್ಟರನ್ನು ಎದುರಿಸುವದು ಅಸಾಧ್ಯವಾಗಿದೆಯಲ್ಲದೆ ಚಿಯಾಂಗರ ರಾಜಧಾನಿಯಾದ ನಾಂಕಿಂಗದ ಹೆಬ್ಬಾಗಿಲಂತಿರುವ ಸು-ಚೌ ನಗರವನ್ನು ಕಮ್ಯುನಿಸ್ಟರು ವಶಪಡಿಸಿಕೊಂಡಿದ್ದರಿಂದ ರಾಜಧಾನಿಯನ್ನು ನಾಂಕಿಂಗದಿಂದ ಬೇರೆಡೆಗೆ ಒಯ್ಯುವ ವಿಚಾರವೂ ನಡೆದಿದೆ. ಚಿಯಾಂಗರು ಕಮ್ಯುನಿಸ್ಟರಿಗೆ ರಶಿಯದ ಸಹಾಯವಿದೆಯೆಂದು ಆರೋಪಿಸಿದ್ದು ಈ ಬಗ್ಗೆ ರಶಿಯದ ಮೇಲೆ ಯು. ರಾ. ಸಂಘದಲ್ಲಿ ದೂರು ಕೊಡುವರಂತೆ!

ಯುದ್ಧಾಪರಾಧಿಗಳು

ಜಪಾನದ ಯುದ್ಧಕಾಲದ ಮುಖ್ಯ ಮಂತ್ರಿ ಜನರಲ್ ಟೋಜೋಗೆ ಕಳೆದ ವಾರ ಅಂತರ್ರಾಷ್ಟ್ರೀಯ ನ್ಯಾಯಾಲಯದವರು ಬಹುಮತದಿಂದ ಯುದ್ಧಾಪರಾಧಿಯೆಂದು ಮರಣ ದಂಡನೆ ವಿಧಿಸಿದರು. ನ್ಯಾಯಾಲಯದ ಹಿಂದೀ ನ್ಯಾಯಾಧೀಶರಾದ ಶ್ರೀ. ರಾಧಾವಿನೋದ ಪಾಲರು ಮಾತ್ರ ತಮ್ಮ ಭಿನ್ನಾಭಿಪ್ರಾಯವನ್ನು ವ್ಯಕ್ತಗೊಳಿಸಿ ೩ ಲಕ್ಷ ಶಬ್ದಗಳ ತೀರ್ಪು ಬರೆದಿದ್ದು ಅದರಲ್ಲಿ ಜಪಾನದ ಆಕ್ರಮಣಶೀಲ ಧೋರಣೆಗೆ ಆಸ್ಟ್ರೇಲಿಯದ ವರ್ಣದ್ವೇಷ ಧೋರಣೆಯೇ ಕಾರಣವಾಗಿತ್ತೆಂದೂ ಅದರಿಂದ ಜಪಾನವೊಂದನ್ನೆ ಅಪರಾಧಿಯೆನ್ನಲಾಗದೆಂದೂ ಹೇಳಿ ಟೋಜೋ ಮತ್ತು ಅವರ ನಾಲ್ವರು ಸಂಗಡಿಗರು ನಿರ್ದೋಷಿಗಳೆಂದು ತೋರಿಸಿಕೊಟ್ಟಿದ್ದಾರೆ.

❋ ❋ ❋

ಈಚೆಗೆ ಫ್ರಾನ್ಸಿನಲ್ಲಿ ಜರುಗಿದ ಚುನಾವಣೆಗಳಲ್ಲಿ ಡಿಗಾಲೆಯ ಪಕ್ಷಕ್ಕೆ ಸಿನೇಟ್ ಸಭೆಯಲ್ಲಿ ಬಹುಮತ ದೊರೆತಿದ್ದು ಕಮ್ಯುನಿಸ್ಟರು ತೀರ ಅಲ್ಪ ಸಂಖ್ಯಾಕರಾಗಿಬಿಟ್ಟಿದ್ದಾರೆ.

'ರಾಷ್ಟ್ರಪತಿ'

ಪಂಡಿತ ಜವಾಹರಲಾಲರ ಸ್ವರೂಪ ಲೇಖನ

ಲೇ— ಚಾಣಕ್ಯ

(ಪಂಡಿತ ಜವಾಹರಲಾಲ ನೆಹರು "ರಾಷ್ಟ್ರಪತಿ" ಎಂಬ ಶಿರೋನಾಮದಲ್ಲಿ 'ಚಾಣಕ್ಯ ಎಂಬ ಗುಪ್ತ ನಾಮವಿಟ್ಟುಕೊಂಡು ೧೯೩೭ ರಲ್ಲಿ ಸ್ವಾರಸ್ಯವಾದ ಲೇಖವೊಂದನ್ನು ಒಂದು ಮಾಸಪತ್ರಿಕೆಯಲ್ಲಿ ಪ್ರಕಟಿಸಿದರು. ಅದರಲ್ಲಿ ಪಂ. ಜವಾಹರಲಾಲರನ್ನು ಮೂರನೆಯ ಸಲ ರಾಷ್ಟ್ರಪತಿಯಾಗಿ ಆರಿಸಕೂಡದೆಂದು ಜನಮನವನ್ನು ತಿರುಗಿಸಲು [illegible]ವಾಗಿ ಅವರು ಪ್ರತಿಪಾದಿಸಿದ್ದಾರೆ. ಇದರಿಂದ ಸ್ವತಃ ತಮಗೆ ಸಂಬಂಧಪಟ್ಟ ವಿಷಯವಿದ್ದರೂ ಪಂ. ಜವಾಹರಲಾಲರ ಆತ್ಮನಿರೀಕ್ಷಕ ವೃತ್ತಿಯೂ ನಿಷ್ಪಕ್ಷಪಾತ [illegible] ಬುದ್ಧಿಯೂ ಎಷ್ಟು ಜಾಗ್ರತವಾಗಿದೆ ಮತ್ತು ಎಷ್ಟು ಸಮತೂಕದಲ್ಲಿದೆ ಎಂಬುದು ವ್ಯಕ್ತವಾಗದಿರದು.)

'ರಾಷ್ಟ್ರಪತಿ ಜವಾಹರಲಾಲಕಿ ಜಯ' ಕಾಯುತ್ತನಿಂತ ಜನಸಂದಣಿಯೊಳಗಿಂದ ರಭಸದಿಂದ ನುಗ್ಗುತ್ತ ಕುಗಿದ ಕೈ ಮೇಲೆತ್ತಿ ಜವಾಹರಲಾಲರು ಸಾಗಿರಲು ಅವರ ನಿಷ್ಪ್ರಭವಾದ ಕಠಿನ ಮುಖದ ಮೇಲೆ ಮಂದಹಾಸ ಮಿನುಗಿತು. ಆ ನಗೆಯಲ್ಲಿ ಆತ್ಮೀಯತೆಯೂ ಪ್ರೇಮಾದರಗಳೂ ಇದ್ದುದರಿಂದ ಅದನ್ನು ಕಂಡ ಜನ ಕೂಡಲೆ ಮರಳಿ ನಕ್ಕು ಹರ್ಷೋದ್ಗಾರಗಳನ್ನು ತೆಗೆದರು.

ಆ ನಗೆ ಮಾಯವಾಗಿ ಮತ್ತೆ ಮುಖವೆಲ್ಲ ಗಂಭೀರವೂ ನಿರ್ವೇದಯುಕ್ತವೂ ಭಾವಶೂನ್ಯವೂ ಆಯ್ತು. ಈಗಾಗಲೇ ಜನಾದರಣೀಯರಾದ ಅವರ ಆ ನಗೆಯಲ್ಲಿಯೂ ಹಾವಭಾವಗಳಲ್ಲಿಯೂ ಕೃತಕತೆ ಇತ್ತೆಂದೂ ಇದೆಲ್ಲ ಜನಜಂಗುಳಿಯ ಚಿತ್ತಾಕರ್ಷಣ ಮಾಡಿ ಅವರ ಪ್ರೇಮ ವಿಶ್ವಾಸಗಳನ್ನು ಇನ್ನಷ್ಟು ಗೆಲ್ಲಲು ಹೂಡಿದ ಮಾಟಗಾರಿಕೆಯೆಂದೂ ಒಡೆದು ಕಾಣುತ್ತಿತ್ತು. ಹಾಗೇ ಇರಬೇಕು, ಅಲ್ಲವೆ?

ಅವರನ್ನು ಇನ್ನೊಮ್ಮೆ ಚನ್ನಾಗಿ ನೋಡಿರಿ. ಅತ್ಯದ್ಭುತ ಮೆರವಣಿಗೆಯಲ್ಲಿ ಅವರ ಕಾರಿನ ಸುತ್ತಲೂ ಹತ್ತೆಂಟು ಸಾವಿರ ಜನರು ಮುತ್ತಿದ್ದಾರೆ. ಎಲ್ಲರೂ ಮೈಮರೆತು ಆನಂದೋದ್ರೇಕದಲ್ಲಿ ಅವರ ಜಯಘೋಷ ಮಾಡುತ್ತಿದ್ದಾರೆ. ಅವರು ಕಾರಿನ ಆಸನದ ಮೇಲೆ ಜೋಲಿಯನ್ನು ಚನ್ನಾಗಿ ಹಿಡಿದು ಸಾಕಷ್ಟು ಎತ್ತರವಾಗಿ ನೀಟಾಗಿ ದೇವರಂತೆ, ಆನಂದೋನ್ಮತ್ತ ಜನಸಾಗರದ ಕಲರವಕ್ಕೆ ಗಮನಿಸದೆ ಅಚಂಚಲರಾಗಿ ಸ್ಥೈರ್ಯದಿಂದ ನಿಂತಿದ್ದಾರೆ. ಅದೋ ಮತ್ತೆ ಪಕ್ಕನೆ ನಗೆಯೊಂದು ಮಿನುಗಿತು. ಜೊತೆಜೊತೆಗೆ ನಗೆಯು ನಲಿವಿನ ನೊರೆಯಾಗಿ ಅಟ್ಟಹಾಸವಾಗಿ ಉಕ್ಕಿ ಹೊರಹೊಮ್ಮಿತು. ಗಾಂಭೀರ್ಯದ ಬಿಗುವು ಸಡಿಲಿ ಜನರೂ ಅವರೊಂದಿಗೆ ನಿರರ್ಗಲವಾದ ಹಾಸ್ಯದ ತೆರೆ ಎಬ್ಬಿಸಿದರು. ಅವರಿಗೆ ತಾವೇಕೆ ನಗುತ್ತಿರುವೆವೆಂಬ ಪರಿವೆಯೇ ಇಲ್ಲ. ತಮ್ಮನ್ನು ಸುತ್ತುವರಿದ ಸಹಸ್ರಾವಧಿ ಜನರ ನೆರವನ್ನೂ ನಂಟನ್ನೂ ನಂಬುಗೆ ಒಲುಮೆಗಳನ್ನೂ ಕೋರುವ ಸಾಮಾನ್ಯ ಮಾನವನಲ್ಲದೆ ಜವಾಹರರು ಅಸಾಮಾನ್ಯ ದೇವಮಾನವನೆಂದೇನು ಈಗ ತೋರುತ್ತಿದೆ ಎಂಬುದು ನಿಮಗೆ ಕಂಡಿತೆ? ಇದರಿಂದ ಜನರಿಗೆ ಸಾಮೀಪ್ಯವನ್ನೂ ಬೆಳೆದು ಎಲ್ಲರಿಗೂ ಹಿತವೆನಿಸುವದಲ್ಲದೆ ನೆರೆದವರೆಲ್ಲ ನಿಕಟದ ಗೆಳೆಯರಾಗಿ ಅವರನ್ನು ತಮ್ಮ ಹೃದಯಪೀಠದಲ್ಲಿ ಕುಳ್ಳಿರಿಸಿದರು. ಆದರೆ ಅದೋ ಆ ನಗೆ ಮತ್ತೆ ಮಸಳಿಸಿ ಮೊದಲಿನ ಕಾಂತಿಹೀನ ಕಠಿನ ಮುಖವೇ ಅಲ್ಲಿದೆ.

ಇದು ಸ್ವಾಭಾವಿಕವಿರಬಹುದೆ? ಇವೆಲ್ಲ ಈ ಸಾರ್ವಜನಿಕ ಮುಂದಾಳುವಿನ ಪೂರ್ವಯೋಜಿತ ಚಾಣಾಕ್ಷನಟನೆಯಾಗಿರಲಿಕ್ಕಿಲ್ಲವಷ್ಟೆ? ಇವೆರಡೂ ನಿಜವಿರಬಹುದು. ಯಾಕಂದರೆ ಬಹುದಿನದ ಅಭ್ಯಾಸವು ಪ್ರತಿ ಸ್ವಭಾವವಾಗಿ ಈಗ ಮಾರ್ಪಟ್ಟಿರುವ ಸಂಭವವೂ ಉಂಟು. ಯಾವ ಭಂಗಿ ವಿನ್ಯಾಸಗಳಿಲ್ಲದ ನಿಲುವಿನ ರೀತಿಯೇ ಒಳ್ಳೆ ಹೃದಯಂಗಮ ಭಂಗಿಯೆಂದು ತೋರುತ್ತದೆ. ಜವಾಹರಲಾಲರಿಗೆ ಇದು ಚನ್ನಾಗಿ ಸಾಧಿಸಿದೆ. ಅವರು ನಟನೆಗೆ ಬೇಕಾಗುವ ಬಣ್ಣ ಸಾರಣೆಕಾರಣೆಗಳಿಲ್ಲದೆ ಸಹಜವಾಗಿ ಒಳ್ಳೆ ಪರಿಣಾಮಕಾರಕವಾಗಿ ಅಭಿನಯಿಸುವ ಕಲೆಯನ್ನು ಕಲೆತಿದ್ದಾರೆ. ಅವರು ತಮ್ಮ ತೋರಿಕೆಯ ಅಲಕ್ಷ್ಯದ ಹಾಗೂ ಔದಾಸೀನ್ಯದ ವೃತ್ತಿಯಿಂದ ಸಾರ್ವಜನಿಕ ರಂಗದಲ್ಲಿ ಒಳ್ಳೆ ಕುಶಲ ಅಭಿನಯವನ್ನೇ ಮಾಡಿ ತೋರಿಸಬಲ್ಲರು. ಇದೆಲ್ಲ ಅವರನ್ನೂ ರಾಷ್ಟ್ರವನ್ನೂ ಎಲ್ಲಿಗೆ ಒಯ್ಯುವದೊ? ಅವರ ಈ ಬಗೆಯ ಬಾಹ್ಯ ನಿರುದ್ದೇಶದ ಹಿಂದೆ ಯಾವ ಉದ್ದೇಶವು ಅಡಗಿದೆಯೊ? ಈ ಮೋಸದ ಮೊಗವಾಡದ ಹಿಂದೆ ಅದಾವ ಬಯಕೆಗಳು, ಯಾವ ಅಧಿಕಾರಲಾಲಸೆ, ಅಥವಾ ಅತ್ಯುಚ್ಚ ಆಕಾಂಕ್ಷೆಗಳು ಅವಿತಿವೆಯೊ?

ಈ ಪ್ರಶ್ನೆಗಳು

ಏನೇ ಇರಲಿ ಈ ಪ್ರಶ್ನೆಗಳು ಮನೋರಂಜಕವಾಗಿವೆ. ಯಾಕೆಂದರೆ ಜವಾಹರಲಾಲರ ವ್ಯಕ್ತಿತ್ವವು ಎಲ್ಲರ ಲಕ್ಷ್ಯವನ್ನು ವೇಧಿಸುವಂತಹದೂ ಕುತೂಹಲವನ್ನು ಕೆರಳಿಸುವಂತಹದೂ ಆಗಿದೆ. ಇಂದಿನ ಹಾಗು ನಾಳಿನ ಭಾರತದ ಭವಿತವ್ಯದೊಂದಿಗೆ ಅವರು ಸಾಮರಸ್ಯ ಹೊಂದಿರುವದರಿಂದ ನಮ್ಮೊಡನೆಯೂ ಆ ಮಾತುಗಳೆಲ್ಲ ಅತಿ ಸೂಕ್ಷ್ಮವಾಗಿ ಬೆಸುಗೆಗೊಂಡಿವೆ. ಭಾರತಕ್ಕೆ ಅಸೀಮ ಕಲ್ಯಾಣವನ್ನು ಇಲ್ಲವೆ ಅಪರಿಮಿತ ಕೆಡುಕನ್ನು ಮಾಡುವ ಸಾಮರ್ಥ್ಯವಿದೆ ಅವರಲ್ಲಿ. ಎಂದೇ ಮೇಲ್ಕಾಣಿಸಿದ ಮಾತುಗಳಿಗೆಲ್ಲ ಸಮರ್ಪಕ ಉತ್ತರಗಳನ್ನು ನಾವು ಹುಡುಕಿಕೊಳ್ಳಲೇ ಬೇಕು.

ಲಂಡನದಲ್ಲಿ ನಡೆದ ಕಾಮನ್‌ವೆಲ್ತ್ ಮುಖ್ಯ ಮಂತ್ರಿಗಳ ಪರಿಷತ್ತಿನ ಕಾರ್ಯ ಮುಗಿಸಿಕೊಂಡು ಪಂ. ಜವಾಹರಲಾಲರು ದಿಲ್ಲಿ ವಿಮಾನ ನಿಲ್ದಾಣದಲ್ಲಿ ಇಳಿದ ಚಿತ್ರ ಇದು.

ಅವರೀಗ ಎರಡು ವರ್ಷಗಳಿಂದಲೂ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾಗಿದ್ದಾರೆ. ಕೆಲವರಂತೂ ಹೊರಗಿನವರಿಂದ ಹತ್ತಿಕ್ಕಲ್ಪಟ್ಟ ಈ ಮಹಾಸಭೆಯ ಕಾರ್ಯಕಾರಿ ಸಮಿತಿಯು ಒಂದು ಪಂಗಡದ ಅನುಯಾಯಿಗಳವರೆಂದು ಆರೋಪಿಸುತ್ತಾರೆ. ಆದರೂ ಅವರು ಜನಸಾಮಾನ್ಯರ ಮೇಲೂ ಇನ್ನುಳಿದವರ ಮೇಲೂ ಸಾವಧಾನವಾಗಿ, ಸತತವಾಗಿ ತಮ್ಮ ವೈಯಕ್ತಿಕ ಪ್ರಭಾವವನ್ನು ಪ್ರಸ್ಥಾಪಿಸುತ್ತಲೇ ಸಾಗಿದ್ದಾರೆ. ಅವರು ಒಕ್ಕಲಿಗ ಕೂಲಿಕಾರರ ಬಳಿಗೂ ಹೋಗುತ್ತಾರೆ. ಬಂಡವಲಗಾರ ಜಮೀನದಾರರ ಬಳಿಗೂ ಹೋಗುತ್ತಾರೆ. ವ್ಯಾಪಾರಿಯ ಬಳಿಗೂ ಹಾದಿಹೋಕನ ಬಳಿಗೂ ಸಾರುವರು. ಬ್ರಾಹ್ಮಣ, ಅಸ್ಪೃಶ್ಯ, ಮುಸಲ್ಮಾನ, ಶೀಖ, ಪಾರ್ಶಿ, ಕ್ರಿಶ್ಚನ, ಜ್ಯೂ ಹೀಗೆ ಭಾರತದ ಜೀವನವನ್ನು ವಿಶಾಲವೂ ವೈವಿಧ್ಯಪೂರ್ಣವೂ ಆಗಿ ಮಾಡುವ ಎಲ್ಲ ಜನರ ಜೊತೆಗೂ ಅವರ ಸಂಪರ್ಕ. ಇವರೆಲ್ಲರೊಡನೆ ಮಾತನಾಡುವಾಗ ಅವರು ಒಂದೊಂದು ಬಗೆಯ ಮಾತಿನ ರೀತಿಯನ್ನು ಅನುಸರಿಸುವದುಂಟು. ಇವರನ್ನೆಲ್ಲ ತಮ್ಮ ಕಡೆಗೆ ಒಲಿಸಿಕೊಳ್ಳುವ ಎತ್ತುಗಡೆ ಇದು. ಅವರ ಈ ವಯಸ್ಸು ಅಸದಳವಾದ ಹುರುಪು ಹುಮ್ಮಸ್ಸಿನಿಂದ ಭಾರತದ ವಿಶಾಲ ಪ್ರದೇಶದಲ್ಲೆಲ್ಲ ನುಗ್ಗಿ ಹುತ್ತಿ ಬಂದಿದ್ದಾರೆ ಅವರು. ಹೋದಲ್ಲೆಲ್ಲ ಅವರಿಗೆ ಅಪ್ರತಿಮವಾದ ಸಾರ್ವಜನಿಕ ಸ್ವಾಗತ ಲಭಿಸಿದೆ. ಅಸೇತು ಹಿಮಾಚಲ ಪರ್ಯಂತವೂ; ಜೈತ್ರಯಾತ್ರೆಗೆ ಹೊರಟ ಅಭಿನವ ಸೀಝರನಂತೆ ಸಾಗಿದ ಅವರಿಗೆ ಹೋದಲ್ಲೆಲ್ಲ ಗೆಲವೆ. ಮುಂದೆ ಮುಂದೆ ಸಾಗಿದಂತೆ ಹಿಂದೆ ಹಿಂದೆ ಅವರ ವಿಜಯದುಂದುಭಿ ಮೊಳಗುವದು, ಮೋಹದ ಜಾಲ ಪಸರಿಸುವದು. ಇದೆಲ್ಲ ಅವರಿಗೆ ಕೇವಲ ಮನರಂಜನೆಗೊಳಿಸುವ ಮಧುರ ಸ್ವಪ್ನಸೃಷ್ಟಿಯೇ ಇಲ್ಲವೆ ಇದೆಲ್ಲದರ ಹಿಂದೆ ವಿನಾದರೊಂದು ನಿಗೂಢ ಉದ್ದೇಶವಿದೆಯೊ? ಅಥವಾ ಅವರಿಗೂ ಗೊತ್ತಾಗದ ಯಾವುದೊ

[illegible] ಹೇಳುತ್ತಾರೆಂಬಲ್ಲಿ ಸಂಶಯವಿಲ್ಲ. ಆದರೆ ಕೊನೆಗೆ ಮನಸ್ಸು ಹೃದಯದ ಆಡಿಯಾಳೆಂಬುದು ಮತ್ತು ಮನುಷ್ಯನ ದುರ್ದಮ್ಯ ಆಶೆಆಕಾಂಕ್ಷೆಗಳಿಗೆ ಹಸುಗೂಸಾಗಿ ತರ್ಕಸರಣಿ ಮಾರ್ಪಡಬಲ್ಲದೆಂಬುದು ಪ್ರತಿಯೊಬ್ಬ ಮನಶ್ಶಾಸ್ತ್ರಜ್ಞನಿಗೂ ಗೊತ್ತಿದ್ದ ಅಂಶವೇ.

ಒಂದಿಷ್ಟೇ ಒಲಿತದಿಂದ ಜವಾಹರಲಾಲರು, ಅತಿ ಮುಂದಗಾಮಿಯವಾದ ಪ್ರಜಾಪ್ರಭುತ್ವದ ಸಲಕರಣೆಗಳನ್ನೆಲ್ಲ ಬಿಸುಟು ಸರ್ವಾಧಿಕಾರಿಯಾಗಿ ಬಿಡುವ ಸಂಭವವಿದೆ. ಆಗಲೂ ಅವರು ಪ್ರಜಾಪ್ರಭುತ್ವದ ಮತ್ತು ಸಾಮ್ಯವಾದದ ಮೋಹಕ ವಚನಗಳನ್ನೂ ಘೋಷಣೆಗಳನ್ನೂ ಪ್ರಯೋಗಿಸಬಹುದು. ಆದರೆ ಈ ಬಗೆಯ ಭಾಷೆಯ ಬಳಕೆಯಿಂದ ಫ್ಯಾಸಿಝಂ ಹೇಗೆ ಪುಷ್ಟವಾಯಿತೆಂಬುದನ್ನು ಕೊನೆಗೆ ನಿರುಪಯುಕ್ತವೆಂದು ಅದನ್ನು ಹೇಗೆ ಬೀದಿಗೆಸೆದಿತೆಂಬುದನ್ನೂ ನಾವೆಲ್ಲ ಬಲ್ಲೆವು.

ಮನವರಿಕೆಯಾದಾಗಲಿ ಸ್ವಭಾವತಃ [illegible]ವಾಗಿಯಾಗಲೀ ಜವಾಹರಲಾಲರೇನೋ ಫ್ಯಾಸಿಸ್ಟ ಎಂದು ಖಂಡಿತ ಹೇಳಲಾಗದು.

ಅವರ ಅನೂನವಾದ ಅಭಿಜಾತ್ಯದ [illegible] ಫ್ಯಾಸಿಝಂದ ಬೀಭತ್ಸತೆಯೂ [illegible] ತೆಯೂ ಎಲ್ಲಾದರೂ ಒಗ್ಗೀತೆ? "ಆತ್ಮೀಯ ಜೀವನದಲ್ಲಿ ಹಣುಕುವ ಕ್ಷುಲ್ಲಕ ಸಾರ್ವಜನಿಕ ಮುಖವಿನ್ಯಾಸಕ್ಕಿಂತ ಸಾರ್ವಜನಿಕ ರಂಗದಲ್ಲಿ ಹಣುಕುವ ಆತ್ಮೀಯಮುಖಚರ್ಯೆಗಳು ಹೆಚ್ಚು ಸಹಜ ಸುಂದರವೆಂದು ಅವರ ಮುಖಮುತ್ತು ಧ್ವನಿಗಳಿಂದ ಅರಿಯಬಹುದಾಗಿದೆ. ಫ್ಯಾಸಿಸ್ಟ ಮುಖವು ಸಾರ್ವಜನಿಕರಿಗೆ ತೋರಿಸುವ ಮುಖ ಮತ್ತು ಅಂತರ್ಯ [illegible] ಗಳೆರಡರಲ್ಲೂ ಅದು ಅಸಹ್ಯವೇ.

ಫ್ಯಾಸಿಸ್ಟನಲ್ಲ

ಜವಾಹರಲಾಲರ ಮುಖವೂ ಧ್ವನಿಯೂ ಆತ್ಮೀಯವೆಂದು ಭಾವಾತ್ಮಕವಾಗಿ ಹೇಳಬಹುದು. ಜನಸಂದಣಿಯಲ್ಲಿ ಮತ್ತು ಸಾರ್ವಜನಿಕ ಸಭೆಯಲ್ಲಿ ಅವರ ಸ್ವರ ಆತ್ಮೀಯತೆಯಿಂದಲೂ [illegible]

—ಇನ್ನೂ ಇದೆ

[illegible]

ಪಂ. ಜವಾಹರಲಾಲರ ೬೦ ನೆಯ ವರ್ಧಂತಿ

ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರಿಗೆ ಕಳೆದ ರವಿವಾರ ತಾ. ೧೪ ಕ್ಕೆ (ಮುಖ ಪತ್ರದಲ್ಲಿ ಪ್ರಸಿದ್ಧವಾದಂತೆ ಸೋಮವಾರಕ್ಕಲ್ಲ) ೫೯ ವರ್ಷಗಳು ತುಂಬಿದವು. ಅವರಿಗೆ ಈ ಬಗ್ಗೆ ಶುಭಕೋರಿ ಅಸಂಖ್ಯಾತ ತಂತಿಗಳು ಸಂದೇಶಗಳು ಬಂದವು. ಮಾರ್ಶಲ ಸ್ಟಾಲಿನರು ವಾಡಿಕೆಯಂತೆ ತಮ್ಮ ರಾಯಭಾರಿಯ ಮುಖಾಂತರ ಶುಭ ಸಂದೇಶ ಕಳಿಸದೆ ತಾವೇ ಸ್ವತಃ ನೇರವಾಗಿ ಕಳಿಸಿದ್ದು ಒಂದು ವಿಶೇಷ.

ತಾ. ೧೪ ರ ಬೆಳಿಗ್ಗೆ ಸುಮಾರು ೪೦೦೦ ವಿದ್ಯಾರ್ಥಿಗಳು ಮತ್ತು ಅನೇಕ ಪ್ರಮುಖರು ಅವರನ್ನು ಕಂಡು ಶುಭ ಕೋರಿದರು.

ಭಾರತದ ಗವರ್ನರ ಜನರಲರಾದ ಶ್ರೀ. ಚಕ್ರವರ್ತಿ ರಾಜಗೋಪಾಲಾಚಾರ್ಯರು ಸಂದೇಶ ಕಳಿಸಿ ಹೀಗೆ ಹೇಳಿದ್ದಾರೆ. "ನಾನು ಇಂದು ವಿಷ್ಣುಸಹಸ್ರನಾಮ ಜಪಮಾಡಿ ನಿಮಗೆ ಪರಮಾತ್ಮನು ದೀರ್ಘಾಯುಷ್ಯವನ್ನೂ ಆರೋಗ್ಯವನ್ನೂ ಕೊಡಲೆಂದು ಪ್ರಾರ್ಥಿಸಿರುವೆ" ಎಂದು ಅರುಹಿರುವರು ಗ. ಜ. ಶ್ರೀ ರಾಜಾಜಿಯವರು ತಮ್ಮ ಸೈನಿಕ ಕಾರ್ಯದರ್ಶಿಯೊಡನೆ ಹೂಗೊಂಚಲದ ಕಾಣಿಕೆ ಕಳಿಸಿದ್ದರು. ರಾಜಾಜಿಯ ಈ ಕಾಣಿಕೆಯನ್ನೂ ಶುಭ ಸಂದೇಶದ ಪತ್ರವನ್ನೂ ತರುವದನ್ನು ಕಂಡು ಮಹಾದ್ವಾರದ ಬಳಿಯಲ್ಲಿ ಜನಸಂದಣಿ ನೆರೆದಿತು. ಪಂ. ಜವಾಹರಲಾಲರು ಗ. ಜ. ರಾಜಾಜಿಯ ಕಾಣಿಕೆಯನ್ನು ಮೊಗಸಾಲೆಯಿಂದ ಹೊರಗೆ ಬಂದು ಸ್ವೀಕರಿಸಿದರು.

ಒಬ್ಬರು ಇಂದು ತಮ್ಮ ೬೦ ನೆಯ ವರ್ಧಂತಿ ಎನ್ನಲು ಪಂ. ಜವಾಹರಲಾಲರು, ನನಗೆ ೫೯ ವರ್ಷ ತುಂಬಿದವು. ೬೦ ನೆಯ ವರ್ಧಂತಿ ಎನ್ನುವದಕ್ಕಿಂತ ೧ ವರ್ಷ ಕಡಿಮೆ ಕಾಣುವ ೫೯ ವರ್ಷ ತುಂಬಿದವು ಎನ್ನುವದೇ ನನಗೆ ಸೇರುವದು. ವಯಸ್ಸಾಗಿ ಮುಪ್ಪಡಸಿತೆಂಬ ಕಲ್ಪನೆಯೇ ಬೇಡ ಎಂದು ಮುಂತಾಗಿ ನುಡಿದರು. ಅತಿಥಿಗಳನ್ನು ಕಂಡು ಮಾತನಾಡಿದ ನಂತರ ಪಂ. ನೆಹರು ತಮ್ಮ ಮೊಮ್ಮಗನೊಂದಿಗೆ ತೋಟಕ್ಕೆ ಹೋದರು ಅಲ್ಲಿ ೪೦೦ ಚಿಕ್ಕ ಬಾಲಕರು ನೆರೆದಿದ್ದರು. ಅವರೊಡನೆ ಸರಸವಾಡಿ ಮಣಗಟ್ಟಲೆ ಮಿಠಾಯಿ ತರಿಸಿ ಹುಡುಗರಿಗೆಲ್ಲ ಹಂಚಿ ತಿನ್ನಿಸಿದರು.

ಪಂ ಜವಾಹರಲಾಲರ ವರ್ಧಂತಿಯ ನಿಮಿತ್ತ ಹಿಂದುಸ್ತಾನ ಘಟನಾ ಸಮಿತಿಯ ಕಾಂಗ್ರೆಸ ಪಕ್ಷದವರು ತಾ. ೧೪ ರಂದು ಸಂಜೆಗೆ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಭಾರತದ ಉಪ ಮುಖ್ಯ ಮಂತ್ರಿ ಸರದಾರ ಪಟೇಲರು ಭಾಷಣ ಮಾಡುತ್ತ "ಮಹಾತ್ಮಾ ಗಾಂಧಿಯವರು ಪಂ. ನೆಹರೂರೇ ತಮ್ಮ ರಾಜಕೀಯ ಉತ್ತರಾಧಿಕಾರಿಯೆಂದು ಸಾರಿದ್ದರು. ಪಂ. ನೆಹರೂರು ನಿಜವಾಗಿಯೂ ಮ. ಗಾಂಧಿಯವರು ತೋರಿದ ಮಾರ್ಗದಲ್ಲಿ ಅವರ ತತ್ವದಂತೆ ಸಾಗುತ್ತಿರುವರು. ಪಂ. ನೆಹರೂರಿಂದ ಜಗತ್ತಿನ ರಾಷ್ಟ್ರಮಾಲಿಕೆಯಲ್ಲಿ ಹಿಂದುಸ್ತಾನಕ್ಕೆ ಶ್ರೇಷ್ಠವಾದ ಸ್ಥಾನಮಾನ ದೊರಕಿದೆ. ಅವರಿಗೆ ದೀರ್ಘಾಯುಷ್ಯ ಲಭಿಸಲಿ. ನಾನೂ ಪಂ. ಜವಾಹರಲಾಲರೂ ಅಣ್ಣ ತಮ್ಮಂದಿರಂತೆ ಇರುವೆವು. ನಮ್ಮ ಸಂಬಂಧವು ಕಳೆದ ೩೦ ವರ್ಷಗಳಿಂದಲೂ ಇದೆ" ಎಂದು ಮೊದಲಾಗಿ ಹೇಳಿದರು.

ಘಟನಾ ಸಮಿತಿಯ ಉಪಾಧ್ಯಕ್ಷರೂ ಕಾಂಗ್ರೆಸ ಪಕ್ಷದ ಕಾರ್ಯದರ್ಶಿಗಳೂ ಆದ ಶ್ರೀ ಅನಂತಶಯನಂ ಅಯ್ಯಂಗಾರರು ಪಂ. ಜವಾಹರಲಾಲರಿಗೆ ಹೂವಿನಹಾರ ಹಾಕಲೆಂದು ಮುಂದರಿಯಲು ಸರದಾರ ಪಟೇಲರು ಆ ಹಾರವನ್ನು ಅವರಿಂದ ಕಸಿದುಕೊಂಡು ತಾವೇ ಅವರ ಕೊರಳಿಗೆ ಅದನ್ನು ಹಾಕಿ ಪಂ. ನೆಹರೂ ಅವರನ್ನು ಅಪ್ಪಿಕೊಂಡ ನೋಟವು ಬಳ್ಳಿ ಹೃದಯಸ್ಪರ್ಶಿಯಾಗಿತ್ತು.

ಹಿಂದುಸ್ತಾನದ ಪ್ರಮುಖ ನಗರಗಳಲ್ಲೆಲ್ಲ ಈ ವರ್ಧಂತಿಯು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟ ವರದಿಗಳಿವೆ.

ಇನ್ನೊಂದು ಆಕಲ್ಪಿತ ಯೋಗಾಯೋಗವೆಂದರೆ ಇಂಗ್ಲಂಡಿನ ರಾಜಕುಮಾರಿ ಎಲಿಜಬೆಥಳಿಗೆ ಜವಾಹರಲಾಲರ ಹುಟ್ಟುಹಬ್ಬದ ದಿನವೇ ಪುತ್ರೋತ್ಸವವಾಗಿದ್ದರಿಂದ ಬ್ರಿಟನ್ನಿನ ಭಾವೀ ರಾಜಕುಮಾರನಿಗೆ ನಾಮಕರಣ ಮಾಡಲು ಪಂ. ಜವಾಹರಲಾಲ ನೆಹರು ಅವರನ್ನೇ ಕರೆಸಬಹುದೆಂಬ ಊಹಾಪೋಹವು ಲಂಡನದಲ್ಲಿ ನಡೆದಿದೆಯೆಂದು ಸುದ್ದಿ ಬಂದಿದೆ. ಹೀಗಾದಲ್ಲಿ ಪಂ. ಜವಾಹರಲಾಲರು ಇಂಗ್ಲಂಡದ ಭಾವಿ ಅರಸರ ಧರ್ಮಪಿತೃವಾಗುವ ಯೋಗಾಯೋಗವಿದೆ.

ರಾಷ್ಟ್ರಪತಿ

(೩ನೆಯ ಪುಟದಿಂದ)

ಗುಳ್ಳಿದ್ದ ಪ್ರತಿಬಿಂಬವನ್ನೂ ಮೈಮರೆವಿ ಮಾತನಾಡಿಸುವಂತೆ ಭಾಸವಾಗುವದು. ಅವರು ಮಾತನಾಡುತ್ತ ಹೋದಂತೆ ಅವರಭಾವತರಂಗಿತ ಮುಖದಲ್ಲಿಯೂ ಆತ್ಮೀಯವಾದ ನುಡಿಗಳಲ್ಲಿಯೂ ಏನು ಧ್ವನಿತವಾಗುವದೆಂಬುದೇ ತಿಳಿಯದಂತಾಗುತ್ತದೆ. ಆ ಮಾತುಗಳಲ್ಲಿ ತನಗೆ ತಾನೇ ನೆನೆದುಕೊಳ್ಳಲಾರದ ಯಾವ ವಿಚಾರಗಳು, ಯಾವ ಆಕಾಂಕ್ಷೆಗಳು, ಯಾವ ಗುಪ್ತ ವಿಲಕ್ಷಣ ಸೂಕ್ಷ್ಮ ಮನೋವ್ಯಾಪಾರಗಳು, ಅದ್ಭುತ ಸಾಮರ್ಥ್ಯವಾಗಿ ಮಾರ್ಪಟ್ಟ ಯಾವ ಸುಪ್ತ ಮನೋವಿಕಾರಗಳು ಅವಿತಿವೆಯೊ ಯಾರಿಗೆ ಗೊತ್ತು ?

ಸಾರ್ವಜನಿಕ ಭಾಷಣಗಳಲ್ಲಿ ತಮ್ಮ ವಿಚಾರಧಾರೆಯಲ್ಲಿಯೇ ಅವರು ಸರಿಯಾಗಿ ಸಾಗುತ್ತಿರುತ್ತಾರಾದರೂ ಬೇರೆ ಸಮಯದಲ್ಲಿ ಅವರ ಮುಖಚರ್ಯೆ ಅವರ ಅಂತರಂಗದ ಗುಟ್ಟನ್ನು ಹೊರಗೆಡಹುತ್ತದೆ. ಏಕೆಂದರೆ ಅವರ ಮನಸ್ಸು ಎಲ್ಲಿಯೋ ಅರಿಯದ ಕಲ್ಪನೆಯ ಬಯಲಲ್ಲಿ ಸುತ್ತುತ್ತಿರುವಂತೆ ಭಾಸವಾಗುತ್ತದೆ. ಒಂದು ಕ್ಷಣ ಅವರು ತಮ್ಮ ಜೊತೆಗಿದ್ದವರನ್ನೇ ಮರೆತು ತಮ್ಮ ತಲೆಯಲ್ಲಿದ್ದ ಕಾಲ್ಪನಿಕ ವ್ಯಕ್ತಿಗಳೊಡನೆಯೇ ನಿಃಶಬ್ದ ಸಂಭಾಷಣೆಯಲ್ಲಿ ಮಗ್ನರಾದವರಂತೆ ಕಾಣುತ್ತಾರೆ. ತಮ್ಮ ಕಠೋರ ಪ್ರಕ್ಷೋಭಮಯ ಜೀವನದಲ್ಲಿ ತಾವು ಕಳೆದುಕೊಂಡ ಮಾನವಸಹಜ ಸ್ನೇಹ ಸಂಬಂಧಗಳನ್ನು ಅವರು ನೆನೆಯುತ್ತಿರಬಹುದೆ ? ಅವುಗಳಿಗಾಗಿ ಅವರು ಹಾತೊರೆಯುತ್ತಿರಬಹುದೆ? ಅಥವಾ ತಾವು ರೂಪಿಸಬೇಕೆಂದಿರುವ ಭವಿತವ್ಯದ ಮತ್ತು ಅದರಲ್ಲಿ ಒದಗಿಬರಬಹುದಾದ ಸಂಘರ್ಷಗಳ, ದೊರೆಯಬಹುದಾದ ವಿಜಯಗಳ ಕನಸು ಕಾಣುತ್ತಿರಬಹುದೆ? ಅವರು ಆರಿಸಿಕೊಂಡ ದಾರಿಯಲ್ಲಿ ತಂಗಲು ಎಡೆಯಿಲ್ಲವೆಂದೂ ಅದರಲ್ಲಿ ಗೆದ್ದರೂ ಗುರುತರವಾದ ಭಾರಗಳು ಬಂದು ಬೀಳುವವೆಂದೂ ಅವರಿಗೆ ಚೆನ್ನಾಗಿ ಗೊತ್ತಿರಲೇಬೇಕು. ಲಾರೆನ್ಸರು ಅರಬರಿಗೆ ಹೇಳಿದಂತೆ, "ಬಂಡಿನ ದಾರಿಯಲ್ಲಿ ತಂಗಲು ಧರ್ಮಶಾಲೆಗಳಿಲ್ಲ, ಸುಖದ ಲೇಶವೂ ಇಲ್ಲ."

ಸುಖವು ಜವಾಹರಲಾಲರ ಪಾಲಿಗೆ ಬಾರದಿರಬಹುದು. ಆದರೆ ದೈವವೊಂದು ಕಣ್ದೆರೆದರೆ ಸುಖಕ್ಕಿಂತಲೂ ಶ್ರೇಷ್ಠವಾದದ್ದು—ಜೀವನ ಧ್ಯೇಯದ ಪರಿಪೂರ್ತಿ—ಅವರಿಗೆ ಕೈಗೂಡಬಹುದು.

ಜವಾಹರಲಾಲರು ಫಾಸಿಸ್ಟರಾಗಲಾರರು. ಆದರೂ ಸರ್ವಾಧಿಕಾರಿಯನ್ನು ನಿರ್ಮಿಸಬಹುದಾದ ಸಕಲ ಸಾಧನ ಸೌಕರ್ಯಗಳೂ ಅವರಲ್ಲುಂಟು. ಆ ಪ್ರಚಂಡ ಜನಪ್ರಿಯತೆ, ನಿರ್ದಿಷ್ಟವಾದ ಗುರಿಯುಳ್ಳ ಆ ಪ್ರಬಲ ಇಚ್ಛಾಶಕ್ತಿ, ಆ ಚೈತನ್ಯ, ಗರ್ವ, ಸಂಘಟನಾ ಸಾಮರ್ಥ್ಯ, ಕಾರ್ಯಕ್ಷಮತೆ, ದಾರ್ಢ್ಯ ಮತ್ತು ಜನಜಂಗುಳಿಯ ಮೇಲೆ ಅಪಾರ ಪ್ರೇಮವಿದ್ದರೂ ಅನ್ಯರ ವಿಷಯಕ್ಕೆ ಅಸಹನೆ, ದುರ್ಬಲರ ಮೇಲೆ, ಅಕ್ಷಮರ ಮೇಲೆ, ತಿರಸ್ಕಾರಭಾವ ಇವೆಲ್ಲವನ್ನೂ ಅವರಲ್ಲಿ ಕಾಣಬಹುದು. ಅವರ ಕ್ರೋಧಾವೇಶವು ಪ್ರಸಿದ್ಧವೇ ಇದೆ. ಅದನ್ನು ಅವರು ನುಂಗಿಕೊಂಡಾಗಲೂ ಅವರ ಕಚ್ಚಿದ ತುಟಿಯ ಕೊಂಕಿನಲ್ಲಿ ಅದು ಹೊರಹೊಮ್ಮುತ್ತಿರುತ್ತದೆ. ಕಾರ್ಯಸಾಧನೆಯ ಅವರ ಅತಿರೇಕ ಆತುರ ತನಗೆ ಒಲ್ಲದುದನ್ನು ಮುರಿದು ಕೆಡಹಿ ಹೊಸತನ್ನು ಕಟ್ಟುವ ಅಭಿಲಾಷೆ, ಇವು ಪ್ರಜಾತಂತ್ರದ ದೀರ್ಘ ವಿಲಂಬಿತ ಗತಿಗೆ ಬಗ್ಗಲಾರವು. ಪ್ರಜಾತಂತ್ರದ ಹೊರದೊಗಟೆಯನ್ನೇನೋ ಅವರು ಉಳಿಸಬಹುದು. ಆದರೆ ಅದು ತಮ್ಮ ಇಚ್ಛೆಗೆ ತಲೆಬಾಗುವಂತೆ ಮಾಡದೆ ಅವರು ಬಿಡರು. ಸಾಮಾನ್ಯದಿನಗಳಲ್ಲಿ ಅವರು ಕಾರ್ಯಕ್ಷಮ ಹಾಗು ಯಶಸ್ವಿ ಆಡಳಿತಗಾರರಾಗಬಹುದು. ಆದರೆ ಈ ಕ್ರಾಂತಿಯುಗದಲ್ಲಿ ಸೀಝರವಾದವು ಸದಾ ನಮ್ಮ ಹೊಸತಿಲಲ್ಲಿಯೇ ಇರುವದು. ಜವಾಹರಲಾಲರು, ತಾವೊಬ್ಬ ಸೀಝರನೆಂದು ತಿಳಿದುಕೊಳ್ಳುವ ಸಂಭವವಿಲ್ಲವೆ?

ಅಲ್ಲಿಯೇ ಜವಾಹರಲಾಲರಿಗೂ ಹಿಂದುಸ್ತಾನಕ್ಕೂ ಗಂಡಾಂತರವಿದೆ. ಯಾಕೆಂದರೆ ಹಿಂದುಸ್ತಾನವು ಸೀಝರವಾದದಿಂದ ಸ್ವಾತಂತ್ರ್ಯವನ್ನು ಸಂಪಾದಿಸಲಾರದು. ಭಾರತವು ಕಾರ್ಯಕ್ಷಮವಾದ ನಿರಂಕುಶ ಪ್ರಭುತ್ವದಲ್ಲಿ ಕೆಲಕಾಲ ಊರ್ಜಿತಕ್ಕೆ ಬಂದರೂ ರಾಷ್ಟ್ರದ ಬೆಳವಣಿಗೆ ಕುಂಗ್ಗಿ ಸ್ವಾತಂತ್ರ್ಯದ ದಿನಗಳು ಬರಲು ವಿಲಂಬವಾಗುವದು.

ಜವಾಹರಲಾಲರು ಸತತ ಎರಡು ವರ್ಷ ಕಾಲ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾರೆ. ಕೆಲವೊಂದು ಅಂಶದಲ್ಲಿ ಅವರಿಲ್ಲದೆ ನಡೆಯದೆಂಬ ಸ್ಥಿತಿಗೆ ಜನತಂದಿಟ್ಟಿದ್ದಾರೆ ಆದರಿಂದಲೇ ಕೆಲವರು ಅವರನ್ನು ಮೂರನೆಯ ಬಾರಿ ಅಧ್ಯಕ್ಷರನ್ನಾಗಿ ಆರಿಸಲು ಸೂಚಿಸುತ್ತಾರೆ. ಆದರೆ ಭಾರತಕ್ಕೂ ಜವಾಹರಲಾಲರಿಗೂ ಕೂಡಿಯೇ ಇದಕ್ಕಿಂತ ಹೆಚ್ಚಿನ ಕೆಡಕು ಇನ್ನಾವುದೂ ಇರದು. ಅವರನ್ನು ಮೂರನೆಯ ಸಲ ಅಧ್ಯಕ್ಷರನ್ನು ಮಾಡಿದರೆ ಒಬ್ಬರನ್ನೇ ಉಚ್ಚ ಶಿಖರಕ್ಕೇರಿಸಿದಂತಾಗುವದು ಮತ್ತು ಕಾಂಗ್ರೆಸಿನ ಪ್ರಭಾವವನ್ನು ತಗ್ಗಿಸಿದಂತಾಗುವದು. ಇದಲ್ಲದೆ ಜನರನ್ನು ಸೀಝರನ ವಿಚಾರಪ್ರಣಾಲಿಯಲ್ಲಿ ನಡೆಯ ಹತ್ತಿದಂತೆ ಆಗುವದು. ಹೀಗೆ ಮಾಡಿ ಜವಾಹರರ ತಪ್ಪುಗಳಿಗೆಲ್ಲ ಒಪ್ಪ ಹಾಕಿದಂತಾಗಿ ಅವರ ಬಿಂಕ, ಕಪಟ ಇನ್ನಷ್ಟು ಬೆಳೆದು ನಿಲ್ಲುವವು. ಆಗ ಅವರಿಗೆ ತಾವಲ್ಲದೆ ಹಿಂದುಸ್ತಾನದ ಸಮಸ್ಯೆಗಳನ್ನು ಇನ್ನಾರೂ ತೂಗಿಸರೆಂಬ ಮತ್ತು ನೀಗಿಸರೆಂಬ ಮನವರಿಕೆಯಾಗುವದರಲ್ಲಿ ಆಶ್ಚರ್ಯವೇನು? ಅಧಿಕಾರದ ಬಗ್ಗೆ ಅವರು ನಿರ್ಲಿಪ್ತತೆಯನ್ನು ತೋರುತ್ತ ಬಂದಿದ್ದರೂ ಕಳೆದ ೧೭ ವರ್ಷ ಕಾಂಗ್ರೆಸಿನಲ್ಲಿ ಒಂದಿಲ್ಲೊಂದು ಬಗೆಯ ಅಧಿಕಾರಸ್ಥಾನವನ್ನು ಆಕ್ರಮಿಸುತ್ತಲೇ ಬಂದಿದ್ದಾರೆಂಬುದನ್ನು ನಾವು ಮರೆಯಕೂಡದು. ತಾನಿಲ್ಲದೆ ಸಾಗದೆಂದೇ ಅವರ ಗ್ರಹಿಕೆ; ಇನ್ನಾರೂ ಈ ಬಗೆಯಾಗಿ ವಿಚಾರಿಸಕೂಡದೆಂದೂ ಅವರ ಆಗ್ರಹ. ಹಿಂದುಸ್ತಾನವು ಸತತವಾಗಿ ಮೂರನೆಯ ಸಲ ಅವರನ್ನು ಕಾಂಗ್ರೆಸ ಅಧ್ಯಕ್ಷರನ್ನಾಗಿ ಸರ್ವಥಾ ಆರಿಸಕೂಡದು

ಇದಕ್ಕೆ ವೈಯಕ್ತಿಕ ಕಾರಣವೂ ಒಂದುಂಟು. ಜವಾಹರಲಾಲರು ಅದೆಷ್ಟೇ ವೀರೋಕ್ತಿಗಳನ್ನಾಡಲಿ, ಅವರು ದಣಿದಿದ್ದಾರೆ ಮತ್ತು ಅವರ ವಿಚಾರ ತಂಗಳಾಗಿವೆ ಎಂಬುದು ಸ್ವಯಂಸ್ಪಷ್ಟವಿದೆ.

ಇಂತಹ ಪರಿಸ್ಥಿತಿಯಲ್ಲಿ ಮತ್ತೆ ಅಧ್ಯಕ್ಷಪದವೇರಿದರೆ ಅವರು ರಭಸದಿಂದ ಅಧಃಪಾತಕ್ಕೀಡಾಗದಿರರು. ಅವರಿಗೆ ವಿರಾಮವೇ ಸಾಧ್ಯವಿಲ್ಲ. ಹುಲಿಯ ಬೆನ್ನೇರಿ ಕುಳಿತವನೆಲ್ಲಿಯಾದರೂ ದಣಿವೆನೆಂದು ಇಳಿದರಾದೀತೆ? ಆದರೆ ನಾವು ಅವರ ಬೌದ್ಧಿಕ ಅಧಃಪಾತವನ್ನೂ ತಲೆಭಾರದ ಹೊಣೆಗಾರಿಕೆಯಿಂದ ಅವರು ಅಡ್ಡದಾರಿಗೆ ಬೀಳುವದನ್ನೂ ತಪ್ಪಿಸಬಹುದು. ಇನ್ನು ಮುಂದೆ ಅವರಿಂದ ಸತ್ಕಾರ್ಯವಾಗಬೇಕೆಂದು ನಿರೀಕ್ಷಿಸುವ ಅಧಿಕಾರವಿದೆ ನಮಗೆ. ಅದ್ದರಿಂದ ಅತ್ಯಾರಾಧನ ಅತಿಸ್ತುತಿಗಳಿಂದ ಅವರನ್ನೂ ಅವರ ಕಾರ್ಯಗಳನ್ನೂ ಕೆಡಿಸ್ಸುವದು ಬೇಡ. ಅವರ ಬಿಂಕವೀಗಾಗಲೇ ಬೇರೂರಿ ನಿಂತಿದೆ. ಅದನ್ನು ಹತ್ತಿಕ್ಕಲೇಬೇಕು. ನಮಗೆ ಸೀಝರು ಬೇಡ.

ದಿಲ್ಲಿ ಪ್ರಾಂತಿಕ ಸಮಾಜವಾದಿ ಪರಿಷತ್ತು

ದಿಲ್ಲಿ ಪ್ರಾಂತಿಕ ಸಮಾಜವಾದಿ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಡಾ. ರಾಮ ಮನೋಹರ ಲೋಹಿಯಾ ಅವರು ಹೀಗೆ ಹೇಳಿದರು –

" ಬ್ರಿಟಿಶರ ಆಳಿಕೆಯ ಅವಶೇಷದಂತಿದ್ದ ಸಂಸ್ಥಾನಿಕರಿಗೆ ಭಾರತ ಸರಕಾರದ ಸಂಸ್ಥಾನ ಶಾಖೆಯು ಸೌಲತ್ತುಗಳನ್ನು ತೋರಿಸುತ್ತಿದೆ. ರಾಜಪ್ರಮುಖರ ಸ್ಥಳಗಳನ್ನು ರದ್ದುಗೊಳಿಸಬೇಕು. ಒಕ್ಕೂಟಗಳನ್ನು ರಚಿಸಿಕೊಂಡ ಸಂಸ್ಥಾನಗಳನ್ನು ವಿಲೀನಗೊಳಿಸಿಕೊಳ್ಳಬೇಕು. . . .

" ಭಾರತದಲ್ಲಿ ಬ್ರಿಟಿಶರಿಗೆ ಸಂಬಂಧಿಸಿದ ಎಲ್ಲ ಉದ್ದಿಮೆಗಳನ್ನೂ ರಾಷ್ಟ್ರೀಕರಿಸಿ ಇಂತಹ ಎಲ್ಲ ಕಾರಖಾನೆ ಮತ್ತು ಉದ್ದಿಮೆಗಳಿಗೆ ಸ್ಟರ್ಲಿಂಗ ಶಿಲ್ಕಿನಿಂದ ಪರಿಹಾರಕೊಟ್ಟು ಅವುಗಳನ್ನೆಲ್ಲ ಭಾರತ ಸರಕಾರವು ವಶಪಡಿಸಿಕೊಳ್ಳಬೇಕು. . . .

"ಕಾಶ್ಮೀರವನ್ನು ವಿಭಜಿಸಬೇಕೆನ್ನುವವರು ದ್ರೋಹಿಗಳು, ಶೇಖ ಅಬ್ದುಲ್ಲಾರ ಸರಕಾರಕ್ಕೆ ಬೆಂಬಲ ಕೊಡಬೇಕು" ಎಂದು ಮೊದಲಾಗಿ ಹೇಳಿದರು. "

ಪರಿಷತ್ತಿನ ಚೇರಮನ್ನರಾದ ಶ್ರೀಮತಿ ಅರುಣಾ ಅಸಫಅಲ್ಲಿ ಅವರು, ಭಾರತ ಹೊಸ ಆಡಳಿತಗಾರರು, ಮೇಲಧಿಕಾರಿಗಳ ದುಂದುಗಾರಿಕೆಯ ಜೀವನಮಟ್ಟ, ಅಧಿಕಾರಿಗಳ ಮತ್ತು ಜನಸಾಮಾನ್ಯರ ಸಂಬಂಧ ಇವೇ ಮೊದಲಾದವುಗಳ ಮಾತ್ರೆತ್ತಿ ಟೀಕಿಸಿ, ಈ ವಿಷಯಗಳಲ್ಲಿ ಬ್ರಿಟಿಶ ಸರಕಾರದ ಪರಂಪರೆಯನ್ನೇ ಸಾಗಿಸಿಕೊಂಡು ಹೋಗಲಾಗುತ್ತಿದೆ ಎಂದು ಮೊದಲಾಗಿ ನುಡಿದರು.

ಮದ್ರಾಸ ಸರಕಾರದವರು ಸೀದಾ ಪದ್ಧತಿಯನ್ನು ಸಾವಧಾನವಾಗಿ ಮತ್ತೆ ಪ್ರಾರಂಭಿಸುವ ಯೋಜನೆ ಸಿದ್ಧಪಡಿಸಿದ್ದು ಬರುವ ಮಾರ್ಚ ತಿಂಗಳ ಕೊನೆಯೊಳಗಾಗಿ ಪ್ರಾಂತಕ್ಕೆಲ್ಲ ಸೀದಾ ಪದ್ಧತಿಯನ್ನು ಅನ್ವಯಿಸಲಾಗುವದು. ಈ ಬಗ್ಗೆ ಹೊಸ ಅಧಿಕಾರಿ ವರ್ಗವನ್ನೂ ನೇಮಿಸಿಕೊಳ್ಳಲು ಸರಕಾರ ಅನುಮತಿಸಿದೆಯೆಂದು ತಿಳಿಯುತ್ತದೆ.

ಸುತ್ತಲೂ ಜನ: ಆದರೂ ಏಕಾಕಿ

ಮುಖ್ಯ ಮಂತ್ರಿ ಪಂ. ಜವಾಹರರ ಅಂದು-ಇಂದಿನ ಅಂತರ

—ಲೇ: ಶ್ರೀಮತಿ ಕೃಷ್ಣಾ ಹಥಿಸಿಂಗ್—

ಅಂದು ೧೯೪೭ ಅಗಸ್ಟ ೧೫ ನೇ ದಿನ ಹಿಂದುಸ್ತಾನ ಸ್ವಾತಂತ್ರ್ಯೋತ್ಸವವನ್ನು ಆಚರಿಸುತಿತ್ತು. ಬೆಳಗಿನಿಂದಲೇ ನಮ್ಮ ಟೆಲಿಫೋನ್ ಗಂಟೆ ಒಂದೇ ಸವನೆ ಬಾರಿಸುತ್ತಲೇ ಇತ್ತು. ಮಾತಾಡುತಿದ್ದವರಲ್ಲಿ ಕೆಲವರು ನಮ್ಮ ಗೆಳೆಯರು, ಆದರೆ ಹಲಗಾಲದಿಂದ ನಾವು ಕಂಡು ಕೇಳಿರದ ನನ್ನ ತಂದೆಯ ಸಹಪಾಠಿಗಳೋ ಅಭಿಮಾನಿಗಳೋ ಕರೆಯುತಿದ್ದುದೇ ಬಹಳ. ನನ್ನ ಅಣ್ಣ ಸ್ವತಂತ್ರ ಭಾರತದ ಮುಖ್ಯ ಮಂತ್ರಿಯಾದುದಕ್ಕೆ ಅವರೆಲ್ಲ ನಮ್ಮನ್ನು ಅಭಿನಂದಿಸುತಿದ್ದರು. ಆದರೆ ಬರಿ ಅಭಿನಂದಿಸಲೆಂದೇ ಅವರು ಕರೆಯುತಿದ್ದಿಲ್ಲ. ಈ ಮಹಾ ಸುದಿನದಲ್ಲಿ ನನ್ನ ತಂದೆಯ ನೆನಪು ಅವರಿಗಾಗುತ್ತಿತ್ತು; ಇಂದು ಬದುಕಿದ್ದರೆ ಅವರಿಗೆ ತಮ್ಮ ಮಗನಿಂದಾಗಿ ಇದೆಂಥ ಹೆಮ್ಮೆಯ ದಿನವೆನಿಸುತಿತ್ತೋ—ಎಂಬದಾಗಿ ಅವರು ಹೇಳುತ್ತಿದ್ದರು. ಅವರ ಸಂದೇಶಗಳು ಬಹಳವಾಗಿ ನನ್ನ ಮನಮುಟ್ಟಿದವು.

ನಿಜವಾಗಿ ಅದು ನನಗೊಂದು ಹೆಮ್ಮೆಯ ದಿನವಾಗಿತ್ತು ಆದರೆ ಅವರು ಸತ್ತು ಹದಿನಾರು ವರ್ಷಗಳಾದ ಮೇಲೆ ನನ್ನ ಮನಸಿಗೆ ತಂದೆಯ ಅಗಲಿಕೆ ಅತಿಶಯ ದಾರುಣವೆನಿಸಿತು. ಈ ಆನಂದಮಯ ದಿನಗಳಲ್ಲಿ ಅವರೂ ನನ್ನ ತಾಯಿಯೂ ನಮ್ಮ ಜತೆಯಲ್ಲಿ ಇರಬೇಕಿತ್ತೆಂದು ನಾನು ಕಾತರಳಾದೆ. ಇಡಿ ನಗರವೇ ಸಹಜವಾಗಿ ನವೋಪಲಬ್ಧ ಸ್ವಾತಂತ್ರ್ಯದ ಸಂಭ್ರಮದಲ್ಲಿ ಉನ್ಮತ್ತವಾಗಿ ಬಿಟ್ಟಿತ್ತು. ನಾನು ಸುಖಿಯಾಗಿದ್ದೆ. ಆದರೆ ಹೃದಯದ ಆಳದಲ್ಲಿ ಎಷ್ಟೋ ಚಿಂತಾತುರ ಮುಹೂರ್ತಗಳನ್ನು ನಾನು ಅನುಭವಿಸಿದೆ. ಕಳೆದ ಇಪ್ಪತ್ತೆಂಟು ವರ್ಷಗಳಲ್ಲಿ ಜವಾಹರನಿಗೆ ಜೀವನವೇನು ಕುಸುಮಶಯ್ಯೆಯೆನ್ನುವಂತಿದ್ದಿಲ್ಲ. ಆದರೆ ಅವನು ಎಲ್ಲ ಕಷ್ಟ ನಿಷ್ಠುರಗಳ, ತ್ಯಾಗ ಬಲಿದಾನಗಳ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿ ತನ್ನ ದೇಶಕ್ಕೂ ಜನಕ್ಕೂ ತನ್ನ ಯೋಗ್ಯತೆಯನ್ನು ತೋರಿಸಿಕೊಟ್ಟನು. ಈಗ ಹೊಸ ಯುಗದ ಅರುಣೋದಯವಾಗಿದೆ, ರಾಜ್ಯ ರಥದ ಸಾರಥ್ಯ ಅವನ ಕೈಗೊಪ್ಪಿಸಲ್ಪಟ್ಟಿದೆ. ಇದನ್ನು ಅತ ಹೇಗೆ ತೂಗಿಸಿಕೊಂಡು ಹೋಗಬಹುದೋ ಎಂದು ನನ್ನ ಉತ್ಕಂಠ. ಈ ಹೊಸ ಗುರುತರ ಹೊಣೆ ಅವನನ್ನು ಇನ್ನಷ್ಟು ಎತ್ತರಕ್ಕೆ ಒಯ್ಯಬಹುದೇ ಅಥವಾ ಅದರ ಅಸಹ್ಯ ಭಾರಕ್ಕೆ ಅವನೇ ಜರ್ಜರಿತನಾಗಿ ಹೋಗಬಹುದೆ ? ಎಂದಿನಿಂದಲೂ ಧ್ಯೇಯವಾದಿಯಾಗಿದ್ದ ಅವನು ಇನ್ನೂ ಧ್ಯೇಯವಾದಿಯಾಗಿ ಉಳಿದಾನೇ ಅಥವಾ ಆಡಳಿತದ ನೀರಸ ಆಹ್ನಿಕಜೀವನದ ಸುಳಿಯಲ್ಲಿ ಅದು ಕಣ್ಮರೆಯಾಗಿ ಹೋಗಬಹುದೆ ?

ಅಶಾಂತ ಜೀವನ

೧೯೨೧ ರಿಂದಲೂ ಅವನ ಜೀವನದಲ್ಲಿ ಶಾಂತಿ ಬಲು ದೂರ. ಸೆರೆಮನೆಗೆ ಹೋಗುವದು ನಿತ್ಯದ ವ್ಯವಹಾರವಾಗಿಹೋಗಿತ್ತು. ಅಷ್ಟಷ್ಟು ದಿನಗಳಿಗೊಮ್ಮೆ ಪ್ರಿಯಜನರ ದೀರ್ಘವಿರಹ ಒದಗಿ ಬರಬೇಕು. ಸೆರೆಮನೆಯೊಳಗಿರುವವರೆಗೆ ಎಷ್ಟೋ ಅಗ್ನಿ ಪರೀಕ್ಷೆಗಳು. ನಮ್ಮ ಜನರು ಸಹಿಸಬೇಕಾಗಿ ಬಂದ ಅಭಿಮಾನಭಂಗ ಅಷ್ಟಿಷ್ಟಲ್ಲ. ಕೆಲವರು ಅವುಗಳನ್ನು ತಾಳಿಕೊಳ್ಳುವ ದೈಹಿಕ ಮಾನಸಿಕ ಕಾಠಿನ್ಯವಿಲ್ಲದೆ ಕುಕ್ಕರಿಸಿಹೋದರು. ಕೆಲವರ ಮನಬೇವಾಗಿ ನಿರುತ್ಸಾಹಿಗಳಾದರು. ಆದರೆ ಜವಾಹರನು ಹಾಗಾಗಲಿಲ್ಲ. ಅವನು ತನ್ನ ಕನಸುಗಳ, ಧ್ಯೇಯಗಳ ಕೈಬಿಡಲಿಲ್ಲ ಎದುರಿಸಬೇಕಾದುದೇನೆ, ಎಷ್ಟೇ ಇರಲಿ ತನ್ನ ಉತ್ಸಾಹವೆಳ್ಳಷ್ಟು ಕುಂದದಂತೆ ನೋಡಿಕೊಂಡನವನು. ಆ ದಿನಗಳಲ್ಲಿ ಕೂಡ ಅವನಿಗಿದ್ದ ಚಿಂತೆಗಳೇನು ಕಡಿಮೆಯಿರಲಿಲ್ಲ. ಕೆಲವು ವೇಳೆ ಅವು ಅವನ ಹರೆಯದ ಹೆಗಲುಗಳುಧರಿಸಲಾರದಷ್ಟು ಭಾರವಾಗಿರುತಿದ್ದವು. ಅವನ ಮುಖದಲ್ಲಿ ಆಗಾಗ್ಗೆ ಆಯಾಸದ ಛಾಯೆ ಕಾಣುತ್ತಿತ್ತು, ಅವನ ಚೈತನ್ಯ ತುಸು ಉಡುಗಿದ ಹಾಗಿರುತ್ತಿತ್ತು, ಆದರೂ ಅವನ ಕಣ್ಣುಗಳ ಕಾಂತಿ ಕಂದಿದ್ದೇ ಇಲ್ಲ. ತನ್ನ ಮೈ ಮನಸು ಎಷ್ಟೇ ಬಳಲಿದ್ದರೂ ಅವನ ಹುರಿದುಂಬಿಸುವ ಮಾತುಗಳ ಅಭ್ಯಾಯನ ಎಲ್ಲರಿಗೂ ಸದಾಲಭ್ಯವಾಗುತಿದ್ದಿತು ಅವನ ನಸುನಗು ಎಷ್ಟೋ ಉತ್ಕಂಠಿತ ಹೃದಯಗಳಿಗೆ ಬೇಕೇಬೇಕಾಗಿದ್ದ ಸಮಾಧಾನವನ್ನು ಕೊಡುತಿತ್ತು. ಅವನಿಗೆ ಸೈರಣೆ ಕಡಿಮೆ. ಒಮ್ಮೊಮ್ಮೆ ಅವನ ಪ್ರಶಾಂತ ಗಾಂಭೀರ್ಯ ಮಾಯವಾಗಿ ಕ್ಷಣಿಕ ಕ್ರೋಧದ ವಿಕಾರಕ್ಕೆಡೆಗೊಡುತಿದ್ದುದುಂಟು. ಆದರೆ ಕ್ಲೇಶವನ್ನಾಗಲಿ ರೋಗವನ್ನಾಗಲಿ ಕಂಡಾಗ ಅವನ ಹೃದಯ ಕರಗಿದಂತೆ ಯಾವ ಸ್ತ್ರೀ ಹೃದಯವೂ ಕರಗದು. ಚಿಕ್ಕ ಮಕ್ಕಳೆಂದರೆಅವನಿಗೆಪ್ರಾಣ. ಅವರಾದರೂಆತನನ್ನು ಕಂಡರೆ ಮರುಳಾಗಿ ಹೋಗುತಿದ್ದರು. ಕುದುರೆಗಳು, ನಾಯಿಗಳಂಥ ಪ್ರಿಯ ಪ್ರಾಣಿಗಳ ಮೇಲೂ ಅವನಿಗೆ ಬಹಳ ಮೋಹ. ತನ್ನ ಕಾರ್ಯದ ಭಾರವೆಷ್ಟೇ ಇರಲಿ, ಮಕ್ಕಳೊಡನೆ ಆಡಲು, ಮನೆಯ ಸಲುಗೆಯ ಪ್ರಾಣಿಗಳನ್ನು ರಂಬಿಸಲು ಹೇಗಾದರೂ ಒಂದಿಷ್ಟು ವಿರಾಮವನ್ನು ಅವನು ಕಂಡುಕೊಳ್ಳದೆ ಇಲ್ಲ.

ದ್ವೇಷವನ್ನು ಶಾಂತಗೊಳಿಸುವ ಶಕ್ತಿಯಿಲ್ಲದೆ ತನ್ನ ಕೋಣೆಯಲ್ಲಿ ಶತಪಥ ತಿರುಗುವ. ಆ ಮೇಲೆ, ಗಂಡಾಂತರ ದಾಟಿದ ಬಳಿಕ, ನಾಲ್ದೂ ಸಿಟ್ಟಿನಿಂದ ನಿಂದಾ ಟೀಕೆಗಳ ಸುರಿಮಳೆ ಕರೆಯಿತು. ಬೇರಾವ ಮನುಷ್ಯಪ್ರಾಣಿಯಾಗಿದ್ದರೆ ಆಗ! ಎದೆಗುಂದಿಬಿಡಬಹುದಾಗಿತ್ತು. ಆದರೆ ಹಾಗಲ್ಲ ಜವಾಹರ. ಈ ಎಲ್ಲ ಟೀಕೆಗಳು ಅವನ ಸತ್ವವನ್ನು ಜರ್ಜರೆಗೊಳಿಸುವ ಬದಲು ಅವನ ಮುಗ್ಗುತಿದ್ದ ಉತ್ಸಾಹಕ್ಕೆ ಕಾಯಕಲ್ಪ ರಸಾಯನವನ್ನು ಕೊಟ್ಟು, ಹಿಡಿದ ಕಾರ್ಯವನ್ನು ಸಾಗಿಸಿಕೊಂಡು ಹೋಗಲು ಅವನಲ್ಲಿ ಹೊಸ ನಿರ್ಧಾರವನ್ನು ನಟ್ಟಿವೆನ್ನಬೇಕು. ಆದರೆ ಆ ತಿಂಗಳಾನು ತಿಂಗಳಿನ ಮನೋವೇದನೆಯಿಂದ ಅವನ ಉಕ್ಕಿನ ಮೈಕಟ್ಟು ಕೂಡ ನಡುಗಿ ಕುಕ್ಕರಿಸುವದೊ ಎನ್ನುವಂತಾಯಿತು. ಅವನು ತಿರುಗಿ ಮೊದಲಿನ ಜವಾಹರನಾಗಲೇ ಇಲ್ಲ.

ಗುರು— ಶಿಷ್ಯ

ಭಾರತೀಯ ಸ್ವಾತಂತ್ರ್ಯದ ಮಂಗಲಾಚರಣೆ ಕೋಲಾಹಲದಿಂದಲೇ ಆಯಿತು. ಉನ್ಮಾದ, ರಕ್ತಪಾತಗಳುನಿತ್ಯಾಹ್ನಿಕಗಳಾದವು ಜವಾಹರನೂ ಇನ್ನೂ ಹಲವರೂ ಕಟ್ಟುತ್ತ ಬಂದಿದ್ದ ಕನಸುಗಳೆಲ್ಲ ರಾತ್ರಿಬೆಳಗಾಗುವದರೊಳಗೆ ನುಚ್ಚು ನೂರಾದವು. ಎಲ್ಲೆಡೆ ಮೃತ್ಯುಲೀಲೆ, ಪ್ರಲಯತಾಂಡವ. ತನ್ನ ಸ್ವಂತ ಸುರಕ್ಷಿತತೆಯನ್ನು ಎಳ್ಳಷ್ಟು ಗಣಿಸದೆ, ಜವಾಹರನು ನಿಶ್ಶಸ್ತ್ರನಾಗಿ, ಅರಕ್ಷಿತನಾಗಿ ಕ್ಷಣಿಕ ಉನ್ಮಾದದ ಭರದಲ್ಲಿ ಒಬ್ಬರನ್ನೊಬ್ಬರ, ಕೊಚ್ಚಿ ಹಾಕುತಿದ್ದ ಜನಜಂಗುಳಿಯ ನಡುವೆ ಧುಮುಕಿದನು "ಭಯ" ಶಬ್ದದ ಅರ್ಥವನು ಎಂದೂ ಅರಿಯದಿದ್ದ ಜವಾಹರನನ್ನು ಶುದ್ಧ ಅಸಹಾಯ ಶೌರ್ಯದಲ್ಲಿ ಸರಿಗಟ್ಟುವವರಾರು? ಅವನ ಚಲನವಲನವನ್ನು ಹಿಡಿತದಲ್ಲಿಟ್ಟುಕೊಳ್ಳಲು ಅವನ ಅಂಗರಕ್ಷಕದಲಕ್ಕೆ ಅಸಾಧ್ಯವಾಯಿತು. ಅಂಗರಕ್ಷದಳವೇ ಅವನಿಗೆ ಸೇರುತಿರಲಿಲ್ಲ. ಗೆಳೆಯರೂ ಬಳಗದವರೂ ಒಂದಿಷ್ಟು ಎಚ್ಚರಿಕೆಯಿಂದಿರಲು ಕೇಳಿಕೊಳ್ಳುತಿದ್ದರು. ಅದೂ ನಾಟಲಿಲ್ಲ. ಜಾಗರೂಕನಾಗಿ ವರ್ತಿಸತೊಡಗಿದ್ದರೆ ಅವನು ನಾನರಿತ ಜವಾಹರನೇ ಅಲ್ಲ. ಏಕೆಂದರೆ ಜನಜಂಗುಳಿಯೆಂದರೆ ಆತನಿಗೆ ಯಾವಾಗಲೂ ಪ್ರೀತಿ, ಅದರಲ್ಲಿ ಬೆರೆತು ಹೋಗುವ ಬಯಕೆ. ಜನರ ಅನಿರ್ಬಂಧ ಸಂಪರ್ಕದಿಂದ ದೂರಾಗುವ ಮಾತು ಅವನ ಕಲ್ಪನೆಗೇ ನಿಲುಕದು.

ಯಾರೂ ಊಹಿಸದಿದ್ದ ಉತ್ಪಾತಯೋಗವೊಂದು ಭಾರತವನ್ನು ತನ್ನ ಸುಳಿಯಲ್ಲಿ ಸೆಳೆದುಕೊಂಡಿತ್ತು. ನವೀನ ಭಾರತವನ್ನು ಕಟ್ಟುವ ಬದಲು ಇದ್ದ ಭಾರತದ ತುಣುಕುಗಳನ್ನು ಜೋಡಿಸುತ್ತ ಕೂಡುವ ಅವಸ್ಥೆ ಜವಾಹರನಿಗೆ ಒದಗಿತು. ಗಂಡಾಂತರದ ಬೆನ್ನಿಗೆ ಗಂಡಾಂತರಗಳು; ಈ ಅಗಾಧ ಕ್ಲೇಶವನ್ನೂ ಯಾತನೆಯನ್ನೂ ಕಂಡು ಹೃದಯ ಒಡೆಯುತಿದ್ದರೂ ಜವಾಹರನು ಪ್ರಸಂಗಾವಧಾನವನ್ನು ಕಳೆದುಕೊಳ್ಳದೆ ಎಲ್ಲವನ್ನೂ ಧೈರ್ಯವಾಗಿ ಎದುರಿಸಿದನು. ಇರುಳೂ ಹಗಲೂ ಅತಂದ್ರಿತನಾಗಿ ನಿಸ್ಸಹಾಯನಾಗಿ, ಉದ್ವಿಗ್ನನಾಗಿ, ಜನರ ಹೃದಯದಲ್ಲಿ ಆಳವಾಗಿ ಬೇರುಬಿಟ್ಟಂತಿದ್ದ

ಕರಿ ಛಾಯೆ

ಜವಾಹರನ ವಿಷಣ್ಣ ವ್ಯಸ್ತ ನೇತ್ರಗಳಲ್ಲಿ ಇಂದಿಗೂ ಆಗೊಮ್ಮೆ ಈಗೊಮ್ಮೆ ಆ ಹಳೆಯ ಹೊಳಪು ಮಿನುಗುವದುಂಟು. ಆದರೆ ಕಣ್ಣುಗಳ ಕೆಳಗೆ ಬಿದ್ದಿರುವ ಆಳವಾದ ಕರಿ ಛಾಯೆಗಳು ಉರಿಸಿದ ನಟ್ಟಿರುಳ ಎಣ್ಣೆಯ, ತಪಿಸಿದ ಆತ್ಮನಿರೀಕ್ಷೆಯ ಕತೆಯನ್ನು ಹೇಳುತಿವೆ. ಅವನ ಆ ಚಿಂತೆಸೋಕದ ಹಗುರು ನಡಿಗೆ ಇಂದು ಅಸ್ತವಾಗಿಬಿಟ್ಟಿದೆ. ಯಾವುದೋ ದುರ್ದಮ್ಯ ಆಂತರಿಕ ಶಕ್ತಿಯಿಂದ ಬಿಡದೆ ಮುಂದಟ್ಟಲ್ಪಡುವವನಂತೆ ಅವನ ಮುಖದಲ್ಲಿ ಅತ್ಯಂತ ಆಯಾಸದ ಮುದ್ರೆ ಒತ್ತಿದೆ. ಆ ಶಕ್ತಿಯ ಪ್ರೇರಣೆಯನ್ನು ಅವನು ಹತ್ತಿಕ್ಕದಿದ್ದರೆ ಅದು ತನ್ನ ಆ ವೇಗದಿಂದಲೆ ಅವನನ್ನು ಸ್ವಾಹಾಕರಿಸಬಹುದೇನೋ ಎಂಬ ಭಯವಾಗುತ್ತದೆ. ಜವಾಹರನ ಆ ಸ್ನೇಹಮಯ ಮೃದುಹಾಸವಿಂದು ಅಪರೂಪವಾಗಿದೆ. ಅವನ ಅಟ್ಟಹಾಸವಂತೂ ತೀರ ದುರ್ಲಭ. ಅದರ ಸ್ಥಾನದಲ್ಲಿ ಒಬ್ಬ ಮುಖ್ಯಮಂತ್ರಿಯ ಶಿಷ್ಟಾಚಾರದ ನಗೆ ಬಂದು ಕುಳಿತಿದೆ; ಅದರಲ್ಲಿ ಆತ್ಮೀಯತೆಯ ಕೊರತೆಯಿದೆ; ಅದೀಗ ಕೇವಲ ದಿನದ ಕರ್ತವ್ಯದ ಒಂದು ಅಂಗ. ಒಂದೊಂದು ತಡವೆ ಆ ಹಳೆಯ ನಗೆ ಮಿಂಚುವದುಂಟು; ಆದರೆ ಅದರ ಬೆಳದಿಂಗಳ ತಂಪಿಗೆ ಮೈಯೊಡ್ಡೋಣವೆನ್ನುವಷ್ಟರಲ್ಲೆ ಅದು ಮಾಯವಾಗಿ ಆ ತುಟಿಗಳು ಕಠೋರ ನಿರ್ಧಾರದಲ್ಲಿ ಬಿಗಿದುಬಿಡುವವು.

ಊಟದ ವೇಳೆಯೆಂದರೆ ಜವಾಹರನ ವಿನೋದದ ವೇಳೆಯಾಗಿತ್ತು. ಅಲ್ಲಿ ಅವನು ದಿನದ ಎಲ್ಲ ಸಮಸ್ಯೆಗಳ ಅಭಿಯೋಗದಿಂದ ತಪ್ಪಿಸಿಕೊಂಡು ವಿಶ್ರಾಂತನಾಗುತಿದ್ದನು. ಆದರೆ ಮುಖ್ಯಮಂತ್ರಿಯ ಭವನದಲ್ಲಿ ಒಂದೊಂದು ಊಟವೂ ಒಂದು ಗಂಭೀರ ಕಠೋರ ನಿಷ್ಠೆಯಂತಾಗಿದೆ. ಅವಸರ ಅವಸರವಾಗಿ ಭೋಜನಶಾಲೆಯಲ್ಲಿ ಪ್ರವೇಶಿಸುವ; ಯಾರು ಬಂದಿರುವರು, ಯಾರಿಲ್ಲ ಎಂದು ಕೂಡ ಅವನ ಗಮನಕ್ಕೆ ಬಂದಿರುವದಿಲ್ಲ. ಯಾರಾದರೂ ನಮಸ್ತೇ ಎಂದರೆ ಅನ್ಯಮನಸ್ಕನಾಗಿಯೆ ಉತ್ತರವಿತ್ತು ಉಣ್ಣಲಿಕ್ಕೆ

> ಕ್ರಾಂತಿಕಾರ ನೆಹರುವಿನ ಮುಖದಲ್ಲಿ ತೀರಸಗೆ—ಮುಖ್ಯ ಮಂತ್ರಿ ನೆಹರುವಿನ ಮುಖದಲ್ಲಿ ಉಪಚಾರದ ಒಣನಗೆ ರಾಷ್ಟ್ರದ ಭಾರವನ್ನು ಹೊತ್ತ ಅವನ ಹೆಗಲು ಬಾಗಿದೆ, ಮುಖ ಬೀಗಿದೆ, ನಿದ್ರೆ ನೀಗಿದೆ, ಕಣ್ಣು ತಿರ್ಮಿಣ್ಣವಾಗಿದೆ. ಅವನಾರು ? ಇವನಾರು ? ಎನ್ನುವಂತಾಗಿದೆ. ಮುಖ್ಯಮಂತ್ರಿಯ ಕಂಟಕಮಯ ಜೀವನದ ಈ ಹೃದಯಸ್ಪರ್ಶಿ ಪರಿಚಯವನ್ನು ಅವರ ತಂಗಿಯ ಲೇಖನಿ ಇಲ್ಲಿ ಮಾಡಿ ಕೊಟ್ಟಿದೆ.

ಹೋಗುವ; ತಾನು ತಿನ್ನುತಿರುವ ಪಕ್ವಾನ್ನದ ಧ್ಯಾಸ ಕೂಡ ಅವನಿಗಿರುವದೋ ಇಲ್ಲವೋ! ಸೇವಕರ ಚಿಕ್ಕಪುಟ್ಟ ತಪ್ಪುಗಳು ಹಿಂದೆಂದೂ ಮಾಡದಂತೆ ಈಗ ಅವನನ್ನು ಕೆರಳಿಸುತ್ತವೆ. ಅತ ಶೀಘ್ರಕೋಪಿಯಾಗಿರುವ. ಊಟದ ನಡುವೆ ಏನಾದರೊಂದು ಕೆಲಸದ ನೆನಪಾದರೆ ತೀರಿತು; ಅಗಲೆ ಕಾರ್ಯದರ್ಶಿಯನ್ನು ಕರೆಸಿ ಬರೆಸುವ; ಉಳಿದವರು ನಡುವೆ ತುಟಿ ಎರಡು ಮಾಡುವ ಧೈರ್ಯ ಸಾಲದೆ ಮೂಕಿಲ್ಲದೆ ಉಣ್ಣಬೇಕು. ಅಗಸ್ಟ ೧೯೪೭ ರಿಂದೀಚೆಗೆ ನನ್ನಣ್ಣನ ಮನೆಯಲ್ಲಿ ಜೀವನದ ರೂಪವೇ ಬದಲಾಗಿದೆ. ಅವನು ಎಲ್ಲಿದ್ದರೂ ಅದು ನಮಗೊಂದು ಮನೆಯೇ ಆದರೂ ಅದಿನ್ನು ಆನಂದಭವನದಂತಾಗುವ ಆಸೆಯಿಲ್ಲ. ಬಂದುಗಾರ ಜವಾಹರನ ಸುತ್ತಲೂ ಹಬ್ಬಿಸುತ್ತಿದ್ದ ಆ ಪಿಸೋ ಒಂದು ಇನ್ನು ಅಲ್ಲಿ ಮಾರ್ಮೊಳೆಯಲಾರದು. ಹಳೆ ದಿನಗಳಲ್ಲಿ ತನ್ನ ಕಾರ್ಯದ ಭಾರ ಎಷ್ಟೇ ಇದ್ದರೂ ಒಂದು ತುತ್ತ ಉಣ್ಣಲು ಮನೆಗೆ ಬಂದಾಗ ಜವಾಹರನು ಗೃಹಕೃತ್ಯದ ಅಥವಾ ಮತ್ತಾವುದೇ ವಿಷಯವನ್ನೆತ್ತಿ ಪರಿವಾರದ ಪ್ರತಿಯೊಬ್ಬರನ್ನೂ ಮಾತಾಡಿಸದೆ ಇಲ್ಲ ಅದರಿಂದು ಮುಖ್ಯಮಂತ್ರಿಯ ಮನೆಯೆಂದರೆ ಹೊಸ ಹಳೆ ಮುಖಗಳು ಬರುತ್ತಲೇ ಹೋಗುತ್ತಲೇ ಇರುವ ಬರಿ ಅಧಿಕಾರಿನಿವಾಸವಾಗಿಬಿಟ್ಟಿದೆ. ಅಲ್ಲಿರುವ ವಾತಾವರಣ ಬರಿ ಉಪಚಾರದ್ದು. ಜವಾಹರನಿಗೆ ಹೊರಲಾರದಷ್ಟು ಕೆಲಸ, ಅದರ ನಡುವೆಅವನಿಗೆ ವಿಶ್ರಾಂತಿಗೆಎಡೆಯೆದೊರೆಕುವದಿಲ್ಲ. ಉಷೆಯ ಸಂಗಡಲೇ ಎಚ್ಚರುವ ಅತನು ಇನ್ನೂ ಉಳಿಸಿಕೊಂಡಿರುವ ಅಭ್ಯಾಸವೆಂದರೆ ಬೆಳಗಿನ ವ್ಯಾಯಾಮವೊಂದೇ. ಅದಿಲ್ಲದೆ ದಿನವನ್ನು ನಿರ್ವಹಿಸುವಷ್ಟು ಚೈತನ್ಯವೇ ಅವನಿಗಿರದು. ಮಿಂದು ಉಡುಗೆ ಹಾಕಿಕೊಂಡೇ ಬೆಳಗಿನ ಫಲಾಹಾರಕ್ಕೆ ಅವ ಕೆಳಗೆ ಬರುವ; ಅದಾದರೂ ಉಳಿದೆಲ್ಲ ಊಟಗಳಂತೆ ಅವಸರದ್ದೇ. ಒಮ್ಮೊಮ್ಮೆ ಫಲಾಹಾರದ ವೇಳೆಗೇ ಕೆಲವರಿಗೆ ಸಂದರ್ಶನ ಕೊಡುವದುಂಟು. ಏಕೆಂದರೆ ಮುಂದೆ ಅದಕ್ಕೆ ಅವಕಾಶವೇ ದೊರೆಯದು. ಹೀಗೆ ಮುಂಜಾನೆ ಪ್ರಯಮಾಡಿಸುವ ಜನರಲ್ಲಿ ಕೆಲವರು ನಾಲ್ಕು ದಿನ, ತಡೆದರೂ ತಡೆಯಬಹುದಾಗಿತ್ತು. ಅವರ ಕೆಲಸ ಅಷ್ಟೇನೂ ಅವಸರದ್ದಿರುವದಿಲ್ಲ. ಆದರೆ ಅವರಿಗೆ ಜವಾಹರನ ಸುಖದುಃಖದ್ದೇನು ಚಿಂತೆ, ತಮ್ಮ ಕೆಲಸವಾದರೆ ತೀರಿತು. ಅಂತೂ ಅವನಿಗೆ ಊಟದ ವೇಳೆ ಕೂಡ ಶಾಂತಿ ದುರ್ಲಭ.

ಒಂಬತ್ತೂವರೆ ಗಂಟೆಗೆ ಅತ ಕಚೇರಿಗೆ ಧಾವಿಸುವ. ಮಧ್ಯಾಹ್ನದ ತುತ್ತಿಗೆ ಮರಳುವಾಗ ಎರಡು ಗಂಟೆ, ತಡವಾದರೂ ಆಯಿತು. ಅವಸರದಿಂದ ಒಂದಿಷ್ಟು ಕಬಳಿಸಿ ತಿರುಗಿ ಕಚೇರಿಗೆ. ಮತ್ತೆ ಬರುವಾಗ ಏಳೋ, ಎಳೂವರೆಯೋ ಎಂಟೋ ಗಂಟೆ. ಆಗ ಪಡಸಾಲೆಯಲ್ಲೂ ಆಗಂತುಕರ ಕೋಣೆಯಲ್ಲೂ ಜನವೋ ಜನ. ಕೆಲವರು ಕಾಣಬಂದ ಗೆಳೆಯರಾದರೆ ಉಳಿದವರು ಏನಾದರೊಂದು ಕೆಲಸಕ್ಕಾಗಿ ಬಂದವರು. ಒಂದು ಕ್ಷಣ ವಿಶ್ರಮಿಸದೆ, ಅವರೊಡನೆ ಕೂಡಬೇಕು. ಅವರನ್ನೆಲ್ಲ ಕಳಿಸಿ ಊಟಕ್ಕೇಳುವಾಗ ಒಂಬತ್ತೋ ಒಂಬತ್ತೂವರೆಯೋ. ಅಷ್ಟು ಹೊತ್ತಿಗೆ ಅವನಿಗೆ ಕಣ್ಣುಗಳನ್ನು ತೆರೆದು ಹಿಡಿಯಲಾರದಷ್ಟು ಆಯಾಸವಾಗಿರುತ್ತದೆ ಸಾಮಾನ್ಯವಾಗಿರಾತ್ರಿಯೂಟವಾದ ಮೇಲೂ ಸಂದರ್ಶಕರ ಭೆಟ್ಟಿ ನಡುರಾತ್ರಿಯವರೆಗೂ ಇರುತ್ತದೆ ಆ ಮೇಲೆ ಆಯಾಸದಿಂದ ಕುಸಿಯುವಂತಾಗಿ ತನ್ನ ಕೋಣೆಗೆ ಮರಳಿದರೆ ಅಲ್ಲಿ ನಿದ್ರಿಸಲೆಂತಲ್ಲ, ಒಂದೆರಡು ಗಂಟೆಯವರೆಗೂ ಕಚೇರಿಯ ಮುಖ್ಯ ಮುಖ್ಯ ಕಾಗದಪತ್ರಗಳನ್ನು ತೀರಿಸುವ ಸಲುವಾಗಿ. ದಿನ ದಿನವೂ ತಿಂಗಳುತಿಂಗಳೂ ಇದು ಅನಂತವಾಗಿ ಹೀಗೆಯೆ ಇರುತ್ತದೆ. "ಹೇಗಪ್ಪಾ ಇವನ್ನು ಸಾಗಿಸಿ

(೨೩ ನೇ ಪುಟಕ್ಕೆ)

ವಿವಿಧ ಪ್ರಪಂಚ

ವಿಲಾಸ ವಿಚಾರಗಳು

ಹಿಂದುಸ್ಥಾನದಲ್ಲಿ ಆಳುತ್ತಿದ್ದ ಅರಸರ ವಿಲಾಸವಿಚಾರಗಳನ್ನು ವಿದೇಶೀಯ ಪತ್ರಿಕೆಯೊಂದು ಬರೆದಿದ್ದಾರೆ. ಅವುಗಳಲ್ಲಿ ಕೆಲವು ಹೀಗಿವೆ:

೧ ಒಬ್ಬ ಅರಸು ಅರಮನೆಯ ಉದ್ಯಾನದಲ್ಲಿ ಮೇಲು ಜಾತಿಯ ... ಬ್ಯಾಂಕರನ್ನು ... ಕೃತ್ಯವಂತೆ. ಒಮ್ಮೆ ಅವನು ತನ್ನ ಅರಮನೆಯ ಸೂಳೆಯರಲ್ಲಿ ಒಬ್ಬಳನ್ನು ಕರೆಯಿಸಿ ನೋಡುತ್ತ ಅವಳ ತಲೆಯ ಮೇಲೆ ... ಆಭರಣಗಳ ಮಳೆ ಸುರಿಸಿದ್ದನು. ಅವಳು ಅವೆಲ್ಲವನ್ನು ಎತ್ತಿಕೊಂಡು ಮುಂಬಯಿಗೆ ಓಡಿಹೋಗಿಬಿಟ್ಟಳಂತೆ! ಅಲ್ಲಿ ಹೋಗಿ ಅವಳು ಒಬ್ಬ ಧನಿಕ ವ್ಯಾಪಾರಿಯನ್ನು ಮದುವೆಯಾದಳು. ಅದರಿಂದ ಸಿಟ್ಟಾಗಿ ದೊರೆ ತನ್ನ ಸೈನಿಕರನ್ನು ಅಲ್ಲಿಗೆ ಕಳಿಸಿದನು. ಅವರು ಅವಳ ಗಂಡನನ್ನು ಗುಂಡು ಹೊಡೆದು ಕೊಂದರು. ಪತ್ರಿಕೆಯವರಲ್ಲಿ ಬ್ರಿಟಿಶ ಅಧಿಕಾರಿಗಳು ... ಉಳಿಸಿದರು.

೨ ಒಬ್ಬ ಮಹಾರಾಜನಿಗೆ ಬೇಟೆಯಾಡುವ ಹೆಂಪರ ಹುಚ್ಚು ಇತ್ತು. ಅವನು ಕಾಡಿಗೆ ಹೋದರೆ ಅಲ್ಲಿ ನೂರಾರು ಡೇರೆಗಳನ್ನು ನಿಲ್ಲಿಸಿ ಅವುಗಳಲ್ಲಿ ಊಟ; ಪಾನ, ಸ್ನಾನ, ಗಾನಾದಿಗಳ ಸೌಕರ್ಯವನ್ನು ಏರ್ಪಡಿಸಿ ನೂರಾರು ಜನರೂ ಬಾಕರಿಗಿತ್ತಿಯರೂ ಕಾದಿರಬೇಕಂತೆ!

೩ ಪಟಿಯಾಲದ ಹಿಂದಿನ ಮಹಾರಾಜನಿಗೆ ೩೨ ದೇವತೆಯರೂ ೩೫೦ ಮಕ್ಕಳೂ ಇದ್ದರು. ಒಬ್ಬೊಬ್ಬಳಿಗೆ ಅವನು ಉಡುಗೊರೆಯಾಗಿ ೧೦ ಸಾವಿರ ರೂಪಾಯಿಗಳನ್ನು ಅಲಂಕಾರಕ್ಕಾಗಿ ೧೦ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದನು. ಇದಕ್ಕಾಗಿ ಜನರ ಮೇಲೆ ಬಹಳ ತೆರಿಗೆ ಹೇರಿದನು.

೪ ಒಬ್ಬ ಮಹಾರಾಜ ತನ್ನ ಸರಕಾರದ ಸಾರ್ವಜನಿಕ ಆರೋಗ್ಯಶಾಖೆಗೆ ಖರ್ಚು ಮಾಡುವುದರ ಮೂರರಷ್ಟು ಹಣವನ್ನು ಕುದುರೆಗಳನ್ನು ಕೊಳ್ಳಲು ಮತ್ತು ಸಾಕಲು ಖರ್ಚು ಮಾಡುತ್ತಿದ್ದನು. ಒಬ್ಬನಂತೂ ಸೂಳೆಯರ ಮೇಲ್ವಿಚಾರಕನನ್ನು ಮುಖ್ಯ ನ್ಯಾಯಾಧೀಶನನ್ನಾಗಿ ನಿಯಮಿಸಿಕೊಂಡಿದ್ದನು.

೫ ಎಲ್ಲರಿಗಿಂತ ಬುದ್ಧಿವಂತನೆಂದರೆ ಹೈದರಾಬಾದಿನ ನಿಜಾಮನು; ಉಬ್ಬಿತಿಜಾಮನೇ. ಅಂಗಡಿಯಲ್ಲಿ ೩೦ ಸಾವಿರ ರೂಪಾಯಿ ಸಾಲ ಮಾಡಿ ೧೮ ವರ್ಷಗಳ ನಂತರ ನೂರಕ್ಕೆ ೧೫ ರಷ್ಟನ್ನು ಬಡ್ಡಿ ಎಂದು ವಜಾ ಮಾಡಿಕೊಂಡು ಬಾಕಿ ಕೊಟ್ಟನಂತೆ! ರಾಜಕಾರ್ಯಕ್ಕಾಗಿ ಯಾರಾದರೂ ಅಧಿಕಾರಿಗಳು ನಿಜಾಮನನ್ನು ಮಾತನಾಡಿಸ ಹೋದರೆ ಅವನು ಅರ್ಥವಿಲ್ಲದ ಪ್ರಶ್ನೆಯನ್ನು ಹಚ್ಚುವನಂತೆ. ಆಗ ೩ ಚಿಕ್ಕ ನಾಣ್ಯಗಳನ್ನು ತನ್ನ ಮುಂದೆ ಅವರು ಇಟ್ಟುಬಿಟ್ಟರೆ ಅವನು ಅವನ್ನು ಸ್ವೀಕರಿಸಲು ಕೈಚಾಚುವನಂತೆ! ಮತ್ತೂ ಒಂದು ಸಮಾಚಾರವೆಂದರೆ ಕುದುರೆ ಸವಾರಿಗೆ ಹೋಗುವಾಗ ಯಾವಾಗಲೂ ಅವನು ತನ್ನ ಕೈಕೆಳಗಿನ ಅಧಿಕಾರಿಗಳಿಂದ ಸಾಲ ತೆಗೆದುಕೊಳ್ಳುವನು ಆ ಮೇಲೆ ಅವನ್ನು ತಿರುಗಿ ಕೊಡಲು ತಪ್ಪದೆ ಮರೆತುಬಿಡುವನು!

ಬುದ್ಧಿಹೀನರಾದ ರಾಜಮಹಾರಾಜರು ಅತಿ ಭೋಗದ ಆಸೆಯಿಂದ ಪ್ರಜಾಪೀಡನವನ್ನೂ ರಾಜ್ಯದ ಸರ್ವನಾಶವನ್ನೂ ಮಾಡುತ್ತಿದ್ದುದು ಭಾರತಕ್ಕೆ ಕಳಂಕವಾಗಿತ್ತು. ಅಲ್ಲದೆ ಪರಕೀಯ ಆಳರಸರ ಕೈಗೊಂಬೆಗಳಾಗಿ ಭಾರತದ ಸ್ವಾತಂತ್ರ್ಯ ಸಮರವನ್ನು ಹತ್ತಿಕ್ಕುವವರಲ್ಲಿ ಅವರಿಗೆ ಸಹಾಯಕರಾಗುತ್ತಿದ್ದರು. ಇಂಥ ಹೀನ ಮತ್ತು ಸ್ವಾರ್ಥಪರರಾದ ಅರಸರ ಸಂಸ್ಥಾನಗಳಲ್ಲಿ ಇಂದು ಉಳಿಯದಂತೆ ಮಾಡಿದ ಶ್ರೇಯಸ್ಸು ಗೃಹಮಂತ್ರಿ ಸರದಾರ ಪಟೇಲರಿಗೆ ಸಲ್ಲತಕ್ಕದ್ದು. 'ಗೃಹೇ ದಕ್ಷಾ' ಎನಿಸುವ ಮಹಾಭಾರತದ ಲಕ್ಷಣಕ್ಕೆ ಒಪ್ಪುವ ಗೃಹಿಣಿಯಂತೆ ಒಳನಾಡಿನ ಹೊಲ್ಲದಾಡಳಿತಗಳನ್ನು ಅವರು ಗುಡಿಸಿ ಚೆಲ್ಲಿದುದು ಸಂತೋಷದ ಸಂಗತಿಯಲ್ಲವೆ?

ಸಂಧಿವಾತಕ್ಕೆ ವಿಚಿತ್ರ ಚಿಕಿತ್ಸೆ!

ಪುರಾಣಗಳಲ್ಲಿ ಈಶ್ವರನಲ್ಲದೆ ಪಾರ್ವತಿ ಭುಜಗಭೂಷಣಳೆಂದು ಹೇಳಿಲ್ಲ. ಆದರೆ ಶಿವನ ತೊಡೆಯೇರಿ ಕುಳಿತಾಗ ಎಲ್ಲೋ ಆಕೆಯ ಕಂಠವನ್ನೂ ಹಾವುಗಳು ಅಲಂಕರಿಸಿರಬೇಕೆಂದು ತೋರುತ್ತದೆ. ಅದರಿಂದಲೇ ಈ ಕಲಿಯುಗದಲ್ಲಿ ದಕ್ಷಿಣದ ಹಾವುಮನೆಯಲ್ಲಿ ಸಂಧಿವಾತ ಹಿಡಿದ ಒಬ್ಬಾಕೆ ಹೊಕ್ಕು 'ಪರಮೇಶ್ವರಿ'ಯ ಅವತಾರವನ್ನೇ ತಾಳಿಬಿಟ್ಟಳಂತೆ!

ಆ ಉರಗಾಲಯಕ್ಕೆ ಹೊಕ್ಕ ಆಕೆ ಅಧಿಕಾರಿಗಳಿಂದ ಅಲ್ಲಿರುವ ೧೮ ಅಡಿ ಉದ್ದದ ಒಂದು ಹೆಬ್ಬಾವನ್ನು ತನ್ನ ಕತ್ತಿಗೆ ೧೫ ನಿಮಿಷ ಸುತ್ತಿಕೊಳ್ಳಲು ಅಪ್ಪಣೆ ಪಡೆದಳು. ಆ ಬಳಿಕ ಒಂದು ಕೈಯಲ್ಲಿ ಅದರ ತಲೆಯನ್ನು ಹಿಡಿದುಕೊಂಡು ಇನ್ನೊಂದು ಕೈಯಿಂದ ಅದನ್ನು ಹೊಡೆಯಲಾರಂಭಿಸಿದಳು. ಅದು ಬಲವಾಗಿ ಅವಳ ಕುತ್ತಿಗೆಯಿಂದ ಕಾಲಿನವರೆಗೆ ಸುತ್ತಿಕೊಂಡಿತು. ೧೫ ನಿಮಿಷಗಳು ಹಾಗೇ ಇದ್ದು ಅನಂತರ ಅವಳು ಅದನ್ನು ತನ್ನ ಮೈಯಿಂದ ಬಿಡಿಸಿ ಗೂಡಿನಲ್ಲಿ ಹಾಕಿದಳು. ೩ ವಾರಗಳ ನಂತರ ತನಗೆ ಸಂಧಿವಾತ ಗುಣವಾಗತೊಡಗಿತೆಂದು ಅವಳು ಹೇಳಿದಳು. ಈಗ ನಾಲ್ಕು ವರ್ಷಗಳು ಕಳೆದಿವೆ. ಸಂಪೂರ್ಣವಾಗಿ ತನ್ನ ಆ ಕಾಹಿಲೆ ವಾಸಿಯಾಯಿತೆಂದು ಅವಳು ಹೇಳುತ್ತಾಳೆ!

ಧಾನ್ಯರೂಪದಲ್ಲಿ ತೆರಿಗೆ

ಹಿಂದಿನ ಪ್ರಾಂತದಲ್ಲಿನ ಕಂದಾಯಾಧಿಕಾರಿಗಳಾದ ಶ್ರೀ ಎಸ್. ಶ್ರೀರಾಮುಲು ನಾಯುಡು ಅವರು ಈ ರೀತಿ ಬರೆಯುತ್ತಾರೆ.—

'ಧಾನ್ಯರೂಪದಲ್ಲಿ ತೆರಿಗೆಯನ್ನೆತ್ತುವದರಿಂದ ಧಾನ್ಯ ಎತ್ತುವಳಿಯ ಕಾರ್ಯದಲ್ಲಿ ಮತ್ತು ಆಹಾರ ಪದಾರ್ಥಗಳ ಸಂಗ್ರಹ ಮತ್ತು ಬೆಲೆಗಳನ್ನು ನಿಯಂತ್ರಿಸುವಲ್ಲಿ ಸರಕಾರಕ್ಕೆ ಒಳ್ಳೆ ಅನುಕೂಲವಾಗುವದು. ರೈತರಿಗಾದರೂ ತಮ್ಮ ತೀರ್ವೆಯನ್ನು ಕೊಡಲು ಇದೊಳ್ಳೆ ಅನುಕೂಲ ಪದ್ಧತಿಯು. ಹಣದ ಮಾಧ್ಯಮವಿಲ್ಲದೆ ತನ್ನ ಬೇಡಿಕೆಗಳನ್ನು ಪೂರಯಿಸಿಕೊಳ್ಳಲು ಅವನಿಗೆ ಅನುಕೂಲವಾಗುವದು.

"ಹಿಂದುಸ್ತಾನದ ಅನೇಕ ಭಾಗಗಳಲ್ಲಿ ಕೂಲಿಕಾರರಿಗೆ ಧಾನ್ಯರೂಪದಲ್ಲಿ ಕೂಲಿಯನ್ನು ಕೊಡುವ ಪದ್ಧತಿಯಿನ್ನೂ ಜಾರಿಯಲ್ಲಿ ಇದೆ. ಸರಕಾರದವರು ಒಕ್ಕಲಿಗರಿಗೆ ಧಾನ್ಯವನ್ನು ಕಡ ಕೊಟ್ಟು ಈ ಪದ್ಧತಿಗೆ ಪ್ರೋತ್ಸಾಹ ಕೊಡುವದು ಅವಶ್ಯವಾಗಿದೆ. ಈ ಉದ್ದೇಶಸಾಧನೆಗಾಗಿ ಗ್ರಾಮಾಂತರಗಳಲ್ಲಿ ಬೇರೆ ಬೇರೆ ಕೇಂದ್ರಗಳಲ್ಲಿ ಧಾನ್ಯದ ಸಂಗ್ರಹಾಲಯಗಳನ್ನು ತೆರೆಯಬೇಕು. ಇದರಿಂದ ಒಕ್ಕಲಿಗರ ಆರ್ಥಿಕ ಪರಿಸ್ಥಿತಿಯು ಬಹಳ ಮಟ್ಟಿಗೆ ಸುಧಾರಿಸುವದು; ಮತ್ತು ಈಗಿನಕಿಂತ ಹೆಚ್ಚು ಆಹಾರ ಉತ್ಪಾದನೆಗೆ ಅನುಕೂಲತೆಯುಂಟಾಗುವದು. ಈ ರೀತಿ ಸರಕಾರದ ಧಾನ್ಯ ಸಂಗ್ರಹಾಲಯಗಳಿಲ್ಲದಿದ್ದರೆ ಒಕ್ಕಲಿಗರು ಸ್ಥಳೀಯ ಸಾಹುಕಾರದಿಂದ ಧಾನ್ಯವನ್ನು ತೆಗೆದುಕೊಂಡು ಅದಕ್ಕೆ ಮನಸ್ವೀ ವಾಢ ಕೊಡಬೇಕಾಗುತ್ತದೆ. ಸಾರ್ವಜನಿಕ ಧಾನ್ಯ ಸಂಗ್ರಹಾಲಯದಿಂದ ರೈತರಿಗೆ ಧಾನ್ಯವನ್ನು ಕಡ ಕೊಟ್ಟು ಬಹಳ ಕಡಮೆ ವಾಢವನ್ನು ತೆಗೆದುಕೊಳ್ಳತಕ್ಕದ್ದು. ಬರಗಾಲದಲ್ಲಿ ಮತ್ತು ಅಸಾಮಾನ್ಯ ಕಾಲದಲ್ಲಿಯೂ ಈ ಸಂಗ್ರಹಾಲಯಗಳು ಒಳ್ಳೆ ಉಪಯುಕ್ತವೆನಿಸುವವು. ಅತಿಪ್ರಸರಣವನ್ನು ಹೊಡೆದು ಹಾಕಲಿಕ್ಕೂ ಇದರಿಂದ ಸಹಾಯವಾಗುವದು".

ಧಾನ್ಯರೂಪದಲ್ಲಿ ತೆರಿಗೆಯನ್ನು ಎತ್ತುವದಕ್ಕೆ ಸರಕಾರದ ಮನವೊಲಿಸುವದು ಸಾಧ್ಯವಾಗದಿದ್ದರೆ ಸರಕಾರೇತರ ಸಂಸ್ಥೆಗಳ ಮುಖಾಂತರವಾಗಿಯಾದರೂ ಈ ತತ್ವವನ್ನು ಕಾರ್ಯರೂಪದಲ್ಲಿ ತರುವ ಪ್ರಯತ್ನಗಳು ನಡೆದು ಜನತೆಗೆ ಮತ್ತು ಸಾರ್ವಜನಿಕರಿಗೆ ಈ ಪದ್ಧತಿಯ ಉಪಯುಕ್ತತೆಯನ್ನು ತೋರಿಸಿಕೊಡತಕ್ಕದ್ದು. ಬಹಳ ದೂರಗಾಮಿಯಾದ ಬದಲಾವಣೆಗಳನ್ನು ನಾವು ಪ್ರತಿಪಾದಿಸುವಾಗ ನಮ್ಮಂಥ ದೊಡ್ಡ ಪ್ರಾಂತಿಕ ಸರಕಾರಗಳಿಗೆ ಒಂದು ಪದ್ಧತಿಯನ್ನು ಬಿಟ್ಟುಗೊಟ್ಟು ಮತ್ತೊಂದು ಪದ್ಧತಿಯನ್ನು ಅನುಸರಿಸಲಿಕ್ಕೆ ಬಹಳ ಕಠಿನ ಹೋಗುವದೆಂಬುದನ್ನು ನಾವು ಮರೆಯಕೂಡದು. ಅಂತೆಯೇ ನಾವು ಈ ಬಗ್ಗೆ ತಾಳ್ಮೆಯನ್ನು ಬಿಡಕೂಡದು. ಬಹಳ ದಿನಗಳಿಂದ ಜಾರಿಯಲ್ಲಿ ಇದ್ದ ಯಾವದೊಂದು ಪದ್ಧತಿಯ ತಜ್ಞರು ಭಿನ್ನಾಭಿಪ್ರಾಯವನ್ನು ತಾಳುತ್ತಿರುವಾಗ, ನಮ್ಮದೆ ಸರಿಯಾದ ಅಭಿಪ್ರಾಯವೆಂದು ಸರಕಾರದವರು ತಿಳಿಯಲಿಕ್ಕೆ ಬೇಕು ಎಂದು ನಾವು ಅಪೇಕ್ಷಿಸಕೂಡದು. ಸಣ್ಣ ಪ್ರಮಾಣದಲ್ಲಿಯಾದರೂ ಚಿಂತೆಯಿಲ್ಲ, ನಾವು ನಮ್ಮ ವಿಚಾರಗಳನ್ನು ಕಾರ್ಯರೂಪದಲ್ಲಿ ತಂದು ನಮ್ಮ ಪಕ್ಷವನ್ನು ಸಂಸ್ಥಾಪಿಸಲಿಕ್ಕೆ ಬೇಕು.-

(ಹರಿಜನ) ಕಿ. ಘ. ಮ.


ಮುಂಬಯಿ ೩೧-೧೦-೪೮

ಮೃತ್ಯು ಸರೋವರದಲ್ಲಿ ಅಮೃತತತ್ವ

ಮೃತ್ಯು ಸರೋವರ ಪಾಲಿಸ್ತಾನದಲ್ಲಿದೆ. ಅದರ ಉದ್ದ ೪೬ ಮೈಲು, ಅಗಲ ೫ ರಿಂದ ೯ ಮೈಲುಗಳವರೆಗಿದೆ. ಅದು ಪಾಲಿಸ್ತಾನದ ಆಗ್ನೇಯ ಭಾಗದಲ್ಲಿ ಸಮುದ್ರದ ಮಟ್ಟಕ್ಕೆ ೧೩೦೦ ಅಡಿ ಕೆಳಗಿದೆ.

ಈ ಸರೋವರದಲ್ಲಿ ನೂರಕ್ಕೆ ೨೬ ಅಂಶ ಉಪ್ಪಿದೆ; ಸಮುದ್ರದ ನೀರಿನಲ್ಲಿ ನೂರಕ್ಕೆ ಕೇವಲ ೩ ಅಂಶ ಉಪ್ಪಿರುತ್ತದೆ. ಸರೋವರದ ನೀರಿನ ಸಾಂದ್ರತೆಯಿಂದ ಅಲ್ಲಿ ಮೀಯಹೋದವನಿಗೆ ಮುಳುಗಲು ಸಾಧ್ಯವಾಗುವುದೇ ಇಲ್ಲ. ಅವನು ಸುಖವಾಗಿ ತೇಲಬಹುದು; ಆದರೆ ದೇಹವನ್ನು ಮುಳುಗಿಸಲಾರದೆ ಅವನಿಗೆ ಈಸುವುದಕ್ಕೂ ಬಹು ಕಷ್ಟವಾಗುತ್ತದೆ!

ಸರೋವರದ ಹತ್ತಿರ ೬೦೦ ಅಡಿ ಎತ್ತರದ ಒಂದೇ ಒಂದಾದ ಉಪ್ಪಿನ ಬಂಡೆ ಇದೆ!



ಕರ್ನಾಟಕ ಏಕೀಕರಣ ಆಗಲೇಬೇಕು

ಕನ್ನಡನಾಡು ಹರಿದು ಹಂಚಿ ಹೋಗಿರುವುದರಿಂದ ಕಾಂತಿಶೂನ್ಯವಾಗಿದೆ. ಕರ್ನಾಟಕವು ಸುಂದರನಾಡು? ಸಂಸ್ಕೃತಿಯ ನೆಲೆವೀಡು. ಇದಕ್ಕೆ ಅಗಾಧವಾದ ಅರಣ್ಯ ಸಂಪತ್ತು ಖನಿಜ ಸಂಪತ್ತು ಇರುವದಲ್ಲದೆ' ಪ್ರಾಕೃತಿಕವಾದ ಎಲ್ಲಾ ಸಂಪತ್ತೂ ಇದೆ. ಆದರೆ ಸುಸಂಘಟಿತವಾದ ರಾಜಕೀಯ ಸಂಪತ್ತಿಲ್ಲ. ಈ ಅಮೂಲ್ಯವಾದ ವಸ್ತುವನ್ನು ದೊರೆಕಿಸಿಕೊಂಡು ಕನ್ನಡನಾಡನ್ನು ಸರ್ವಾಂಗ ಸುಂದರವನ್ನಾಗಿ ಮಾಡಿ ಭಾರತಕ್ಕೆ ಬೆಂಬಲ ಕೊಡುವುದೇ ಕರ್ನಾಟಕ ಏಕೀಕರಣದ ಗುರಿಯಾಗಿರುವುದರಿಂದ ಪ್ರತಿಯೊಬ್ಬ ಕನ್ನಡಿಗನಿಗೂ ಕರ್ನಾಟಕ ಏಕೀಕರಣವು ಪ್ರಾಣಕಿಂತಲೂ ಪ್ರಿಯವಾಗಿದೆ.

ಒಂದು ಕಡೆ ಕರ್ನಾಟಕ ಏಕೀಕರಣದ ಕಾರ್ಯವು ಭರದಿಂದ ಸಾಗುತ್ತಿರುವಾಗ ಅಲ್ಲಲ್ಲಿ ಅನೇಕ ಅಪಸ್ವರಗಳು ಕೇಳಬರುತ್ತಿವೆ. ಸಂಕುಚಿತ ಬುದ್ಧಿಯುಳ್ಳವರು ಪ್ರಾಂತೀಯತೆ ಬೇಡ ಎಂದು ಬೇರೆ ಅರ್ಥದಲ್ಲಿ ಹೇಳತೊಡಗಿದ್ದಾರೆ. ಭಾಷಾನುಗುಣ ಪ್ರಾಂತ ನಿರ್ಮಾಣಕ್ಕೂ ಪ್ರಾಂತೀಯತೆಗೂ ಸಂಬಂಧವಿಲ್ಲ. ಭಾಷಾನುಗುಣ ಪ್ರಾಂತವಾದರೆ ನೆರೆ ಪ್ರಾಂತದವರನ್ನು ದ್ವೇಷಿಸಲು ಯಾವ ಕಾರಣವೂ ಇಲ್ಲ. ಏಕೀಕರಣಕ್ಕೆ ಅಡ್ಡಿ ಬರುವವರಿಗೆ ಮಬ್ಬು ಹರಿದಿಲ್ಲ ಎಂದು ವಿಷಾದದಿಂದ ಹೇಳಬೇಕಾಗುತ್ತದೆ.

ಇನ್ನು ಮೈಸೂರಿನ ವಿಚಾರ ತೆಗೆದುಕೊಂಡರೆ ಕೆಲವು ಕಾಂಗ್ರೆಸ್ ಮುಖಂಡರ ವರ್ತನೆ ಸಮಾಧಾನಕರವಾಗಿಲ್ಲ ಮೈಸೂರಿನವರಿಗೆ ಜವಾಬ್ದಾರೀ ಸರಕಾರ ಬೇಕಾದಾಗ ಯೂನಿಯನ್ ಕರ್ನಾಟಕದವರು ಭುಜಕ್ಕೆ ಭುಜಕೊಟ್ಟು ಹೊಡೆದಾಡಲು ಬೇಕಾಗಿತ್ತು. ಈಗ ಏಕೀಕರಣ ಕೆಲವರಿಗೆ ಬೇಕಿಲ್ಲ ಇದರ ಅರ್ಥವೇನು? ಕೆಲವರು ಕರ್ನಾಟಕ ಏಕೀಕರಣವೆಂದರೆ ಮೈಸೂರಿನ ವೈಶಿಷ್ಟ್ಯ ಹೋಗುತ್ತೆಂದು ಹೇಳುತ್ತಾರೆ. ಮೈಸೂರಿನ ವೈಶಿಷ್ಟ್ಯವೇನೆಂದರೆ ಕನ್ನಡಿಗರಲ್ಲದ ಮದ್ರಾಸಿಗಳನ್ನು ಆಡಳಿತದಲ್ಲಿ ತುಂಬುವುದೇ ಆಗಿದೆ ಎಂಬುದು ಮೈಸೂರಿನ ಚರಿತ್ರೆಯನ್ನು ಬಲ್ಲವರಿಗೆಲ್ಲಾ ಗೊತ್ತು.

ಇನ್ನೂ ಏಕೀಕರಣ ವಿರೋಧಕರು ಮೈಸೂರು ಶ್ರೀಮನ್ ಮಹಾರಾಜರವರ ಪ್ರಶ್ನೆಯನ್ನು ಅಡ್ಡಹಿಡಿಯುತ್ತಾರೆ. ಮೊನ್ನೆ ಮೈಸೂರಿಗೆ ಮಾನ್ಯ ಆರ್. ಆರ್. ದಿವಾಕರ ಅವರು ಬಂದಾಗ ಶ್ರೀಮನ್ ಮಹಾರಾಜರವರನ್ನೇ ಘಟನಾತ್ಮಕ ಅರಸರನ್ನಾಗಿ ಮಾಡಲು ಒಪ್ಪಿಕೊಂಡು ಏಕೀಕರಣ ಸಮಿತಿಯವರು ಮೈಸೂರ ವಿಚಾರದಲ್ಲಿ ತಮ್ಮ ಧ್ಯೇಯವನ್ನು ಬದಲಾಯಿಸಿದ್ದನ್ನು ತಿಳಿಸಿ ತಮ್ಮ ಉದಾರತ್ವ ವ್ಯಕ್ತಪಡಿಸಿದರೂ ಮೈಸೂರಿನವರು ಪ್ರತಿಗಾಮಿ ಮನೋಭಾವ ತಾಳುವುದು ತಪ್ಪು.

ಕೊನೆಯದಾಗಿ ಅಂಧ್ರ, ಕೇರಳ, ಮಹಾರಾಷ್ಟ್ರದವರು ಒಕ್ಕೊರಲಿನಿಂದ ಭಾಷಾನುಗುಣ ಪ್ರಾಂತಕ್ಕೆ ಹೋರಾಡುತ್ತಿರುವ ಸಮಯದಲ್ಲಿ ಇವುಗಳ ನಡುವೆ ಇರುವ ಕರ್ನಾಟಕವು ಸುಮ್ಮನಿರಲು ಸಾಧ್ಯವಿಲ್ಲ. ನಿಜಾಂಶಾಹಿ ನಾಶವಾಗಿ ತುಂಡರಸರು ಕಣ್ಮರೆಯಾಗಿ ಡಾ. ಪಟ್ಟಾಭಿಯವರು ಕಾಂಗ್ರೆಸ ಅಧ್ಯಕ್ಷರಾಗಿರುವಾಗ ಕರ್ನಾಟಕ ಪ್ರಾಂತವು ಆಗಿಯೇ ಆಗುತ್ತದೆ. ಆದ್ದರಿಂದ ಮೈಸೂರಿನವರು ಈಗಲಾದರೂ ದೂರದರ್ಶಿತ್ವದಿಂದ ವರ್ತಿಸಿ ಜಾತಿ ಪಂಗಡಗಳ ಮೋಹವನ್ನು ಕಿತ್ತೆಸೆದು ಅಖಿಲ ಕರ್ನಾಟಕದ ಹಿತದೃಷ್ಟಿಯನ್ನು ತನ್ಮೂಲಕ ಅಖಿಲ ಭಾರತದ ಹಿತದೃಷ್ಟಿಯನ್ನು ಕಾಪಾಡಬೇಕಾದುದು ಸಾಧುವಾಗಿದೆ.

— ಕೆ. ಎಂ. ರುದ್ರಪ್ಪ, ಬಿ ಎ., ಎಲ್ಎಲ್ ಬಿ
ಹಾಸನ

ಸರ್ಕಸ್ಸಿನಲ್ಲಿ, ಅಲ್ಲಿ ಇಲ್ಲಿ ಕೆಲವರು ಗಾಜು ತಿನ್ನುವುದನ್ನು ನಾವು ನೋಡಿದ್ದೇವೆ. ಆದರೆ ಕ್ಲಿಂಟನ ಪ್ರಾಣಿರಕ್ಷಕ ಹಾಪ್‌ಕಿನ್ಸನು ಗಾಜಿನ ತಜ್ಞ ಎಫ್. ಡಬ್ಲ್ಯು. ಪ್ರೀಸ್ಟನ್ನನಿಗೆ ತಂದು ಕೊಟ್ಟ ಮುಳ್ಳು ಹಂದಿಗಳು ಅವನಿಟ್ಟಿದ್ದ ಬಾಟಲಿಗಳನ್ನು ದವಡೆಗಳಿಂದ ಅವುಕಿ ಪುಡಿ ಪುಡಿ ಮಾಡಿ ಚೂರುಗಳನ್ನು ತಿಂದವು. ಗಾಜನ್ನು ಗಾಳಿಗಿಟ್ಟರೆ ಅದರಲ್ಲಿ ಒಂದು ಬಗೆಯ ಲವಣ ಸತ್ವ ಒಸರುವುದೆಂದೂ ಅದಕ್ಕಾಗಿ ಆ ಹಂದಿಗಳು ಗಾಜನ್ನು ತಿನ್ನುವುವೆಂದೂ ತರ್ಕಿಸಲಾಗಿದೆ.

ನಾಲ್ಕು ಮಾತು — ರಂಗನಾಥ ದಿವಾಕರ

ಸತ್ಯಾಪಲಾಪ

ನಾನು ಘಟನಾಸಮಿತಿಯಲ್ಲಿ ೬-೧೧-೪೮ ನೆ ದಿನ ಮಾತಾಡುವಾಗ, ಭಾಷಾನುಗುಣ ಪ್ರಾಂತ ರಚನೆಗಳನ್ನು ಆಯ್ದು ವರುಷವಾದರೂ ಮುಂದೂಡಬೇಕೆಂದು, ಮಾತಾಡಿದೆನೆಂದು ಟಾಯಿಮ್ಸ್ ಪತ್ರಿಕೆಯ ವಿಶೇಷ ಸುದ್ದಿಗಾರನು ಪ್ರಕಟಿಸಿಬಿಟ್ಟನು! ಅದರಿಂದ ಎಲ್ಲೆಲ್ಲಿಯೂ ತರ್ಕವಿತರ್ಕಗಳೆದ್ದವು. ಸತ್ಯಾಪಲಾಪದ (ಮಿಸ್ ರೆಪ್ರೆಜೆಂಟೇಶನ್) ಇದಕ್ಕೂ ಹೆಚ್ಚಿನ ಉದಾಹರಣೆಕೊಡುವದು ಕಠಿಣ. ಯಾಕೆಂದರೆ ನಾನು ಮಾತಾಡಿದ್ದು ಇದಕ್ಕೆ ತೀರ ವಿರುದ್ಧ. ಯಾವದೇ ಕಾರಣದಿಂದ ಮುಂದೂಡುವದು ಯೋಗ್ಯವಲ್ಲ. ಅಡಚಣಿಗಳಿದ್ದರೆ ಅವುಗಳನ್ನು ಹೋಗಲಾಡಿಸಲು ಘಟನಾಸಮಿತಿ ಸಮರ್ಥವಿದೆ. ಇತ್ಯಾದಿ ಕೋಟಿಕ್ರಮವನ್ನು ನಾನು ೧೫-೨೦ ವಾಕ್ಯಗಳ ಮೂಲಕ ಮಂಡಿಸಿದೆನು. ಹೀಗಿರಲು ಆ ವಿಶೇಷ ಸುದ್ದಿಗಾರನು ಈ ಪರಿ ಏಕೆ ವರದಿ ಕೊಟ್ಟನೊ ಎಂಬುದು ಹೇಳಲಾಗದು.

× × ×

ಮರುದಿನವೆ ಅವನಿಗೆ ತನ್ನ ತಪ್ಪು ಹೊಳೆದು ಅವನು ನನ್ನೆಡೆಗೆ ಬಂದು ಕ್ಷಮಾಪಣೆ ಬೇಡಿಕೊಂಡನು. ಅದರಂತೆ ಟಾಯಿಮ್ಸ್ ಪತ್ರಿಕೆಗೂ ಬರೆದು ಕಳಿಸಿದನು. ಇಡೀ ಜನ್ಮದಲ್ಲಿ ಇಂತಹ ತಪ್ಪು ನನ್ನಿಂದ ಆಗಿಲ್ಲ ಎಂದು ಗೋಳಿಟ್ಟನು. ಅದದ್ದು ಆಗಿ ಹೋಯಿತು. ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು, ಎಂಬ ಗಾದೆಯಂತೆ ನನಗೆ ಆಗುವ ಹಾನಿ ಆಗಿ ಹೋಯಿತು. ಆ ಮೇಲೆ ಟಾಯಿಮ್ಸ್ ಪತ್ರಿಕೆಯವರೂ ನನಗೊಂದು ಕ್ಷಮಾಪಣೆ ಬಗ್ಗೆ ಪತ್ರ ಬರೆದರು. ನನ್ನ ಮೂಲ ಭಾಷಣವನ್ನು ಮುಖಪುಟದ ಮೇಲೆ ಪ್ರಕಟಿಸುವೆನೆಂದು ಆಶ್ವಾಸನ ಗೊಟ್ಟರು. ಹೀಗಾಗಿ ಈ ಪ್ರಕರಣ ಮುಗಿಯಿತು.

× × ×

ಆದರೆ ಈ ವಿಷಯದಲ್ಲಿ ನನಗೆ ಯಾವ ಮಾತುಗಳಿಂದಲೂ ಸಿಡುಕೆನಿಸಲಿಲ್ಲ. ಸುದ್ದಿಗಾರನಿಗಂತೂ ನಾನು ಕೂಡಲೆ ಹೇಳಿಬಿಟ್ಟೆನು. ನಾನೂ ಒಬ್ಬ ಸುದ್ದಿಗಾರ. ಆದುದರಿಂದ ನಿನ್ನ ಸುಖದುಃಖ ನನಗೆ ಗೊತ್ತು. ನೀನು ಚಿಂತಿಸಬೇಡ, ಎಂದೆನು. ಅವನನ್ನು ದಂಡಿಸುವದು ಯೋಗ್ಯವಲ್ಲ. ಬೇಕೆಂದು ಮಾಡಿದ ತಪ್ಪಲ್ಲ, ಎಂದು ಟಾಯಿಮ್ಸ್ ಪತ್ರಿಕೆಯವರಿಗೂ ಬರೆದೆನು. ಆದರೆ ಮನಸ್ಸಿಗೆ ವ್ಯಥೆಯಾದ ಕಾರಣವು ಬೇರೆ. ಟಾಯಿಮ್ಸ್‌ದ ವರದಿಯನ್ನು ಓದಿ ಹಲವು ಸ್ನೇಹಿತರು ಕೂಡ, ನಾನು ಹೀಗೆ ಮಾತಾಡಿರಬಹುದು ಎಂದು ನಂಬಿದುದು ನನ್ನ ಮನಸಿಗೆ ಬಹಳ ನೋವನ್ನುಂಟು ಮಾಡಿತು. ಇಷ್ಟು ದಿನದ ಸಂಚಿತ ವ್ಯರ್ಥ ಹೋಯಿತಲ್ಲ, ಗಳಿಸಿದ ಪುಣ್ಯ ಮಣ್ಣುಗೂಡಿತಲ್ಲ, ಶೀಲಕ್ಕೆ ಬೆಲೆಯಿಲ್ಲದಾಯಿತಲ್ಲ, ಎಂದೆನಿಸಿತು. ಶ್ರೀರಾಮಚಂದ್ರನು ಸೀತಾದೇವಿಯ ಪಾತಿವ್ರತ್ಯದ ಬಗ್ಗೆ ಸಂಶಯಗೊಂಡಾಗ ಅವಳಿಗೆ ಏನು ಎನಿಸಿರಬಹುದು, ಎಂಬ ವಿಚಾರ ಕ್ಷಣಹೊತ್ತು ಮನಸಿಗೆ ಹೊಳೆಯಿತು! ಜನಸಾಮಾನ್ಯರ ಮನಸು ಮಕ್ಕಳ ಮನಸಿನಂತೆ. ಅವರು ಏನನ್ನಾದರೂ ನಂಬಬಹುದು. ಆದರೆ ಹಳೇಕಾಲದ ಸ್ನೇಹಿತರು ಕೂಡ ನಾನು ಏನು ಮಾತಾಡಬಹುದು ಏನು ಇಲ್ಲ, ಎಂಬದರ ಯೋಚನೆ ಮಾಡದೆ ಟಾಯಿಮ್ಸ್‌ದ ವರದಿಯನ್ನು ನಂಬಿದುದು ಬಹಳ ವಿಷಾದಕರ.

× × ×

ನನಗೆ ಹಲವು ಪತ್ರಗಳೂ ತಂತಿಗಳೂ ಬಂದಿವೆ. 'ನೀವು ಹೀಗೆ ಹೇಳಿದ್ದರಿಂದ ನಾನು ತಲೆತಗ್ಗಿಸಿ ಹಾಕಬೇಕಾಯಿತು' ಎಂದು ಒಬ್ಬರು ಬರೆದರೆ, 'ನೀವೇ ಹೀಗೆಂದ ಬಳಿಕ ಮುಂದೆ ಪ್ರಾಂತೀಕರಣದ ಗತಿಯೇನು' ಎಂದು ಇನ್ನೊಬ್ಬರು ಬರೆದಿರುವರು. 'ಏನಾದರೊಂದು ಮಂತ್ರಿಪದವೊ ಅಥವಾ ಇನ್ನೊಂದೋ ದೊರಕುತಿರಬೇಕು, ಅದುದರಿಂದ ನೀವು ಹೀಗೆ ಅಂದಿರಬೇಕು' ಎಂದು ಮತ್ತೊಬ್ಬರ ತರ್ಕ. ಮುಖ್ಯಕ್ಕೆ ಘಟನಾಸಮಿತಿಯಲ್ಲಿ ಮಾತಾಡಿದ ಮಾತುಗಳನ್ನು ಲಘುಲೇಖಕರು ಬರೆದಿಟ್ಟಿರುತ್ತಾರೆ. ಅದೇ ದಿನ ಆಕಾಶವಾಣಿಯಲ್ಲಿ ಸರಿಯಾಗಿ ನನ್ನ ಭಾಷಣದ ವರದಿಯಾಯಿತೆಂದು ಕೇಳಿದೆನು. ಈ ಕಾರಣಗಳ ಮೂಲಕ ಮುಂದೆ ಸಂಶಯನಿರಸನವಾಯಿತು, ಇರಲಿ. ಈ ವಿಶ್ವದಲ್ಲಿ ಇದೂ ಒಂದು ಅನುಭವ!

ಘಟನಾಸಮಿತಿಯ ಚಟುವಟಿಕೆಗಳು

ತಾ. ೧೫ ರಂದು ಘಟನೆಯ ಕಲಮುವಾರ ಚರ್ಚೆ ಪ್ರಾರಂಭವಾಯಿತು.

ಇಂಡಿಯಾ ಎಂಬ ಪದಕ್ಕೆ ಭಾರತ, ಭರತವರ್ಷ, ಹಿಂದುಸ್ಥಾನ ಹೀಗೆ ಬೇರೆ ಬೇರೆ ಹೆಸರುಗಳು ಸೂಚಿಸಲ್ಪಟ್ಟು ಈ ವಿಷಯದ ಚರ್ಚೆಯನ್ನು ಮುಂದೂಡಲಾಯಿತು ಸ್ಟೇಟ ಎಂಬ ಶಬ್ದದ ಬದಲು ಪ್ರದೇಶ ಎಂಬುದನ್ನು ಬಳಸಬೇಕೆಂದು ಶ್ರೀ ಸಿ. ಎಸ್. ಗುಪ್ತಾ ಅವರು ತಿದ್ದುಪಡಿ ತಂದರು. ಈ ಬಗ್ಗೆ ಮನೋರಂಜಕ ಚರ್ಚೆಯಾಗಿ ಘಟನಾ ಸಮಿತಿಯ ಇತಿಹಾಸದಲ್ಲಿಯೇ ಮೊದಲ ಬಾರಿ ಮತಗಣನೆ ನಡೆದಿತು. ಮತಗಣನೆಯಲ್ಲಿ ಈ ತಿದ್ದುಪಡಿಯು ನಿರಾಕೃತವಾಯಿತು.

ತಾ. ೧೬ ರಂದು ಪ್ರೊ. ಕೆ. ಟಿ ಶಹಾ ಅವರು ಘಟನೆಯ ಮೂರನೆಯ ಕಲಮಿಗೆ ತಂದ ತಿದ್ದುಪಡಿಯ ಬಗ್ಗೆ ದೀರ್ಘವಾದ ಮತ್ತು ಸ್ವಾರಸ್ಯಮಯ ಚರ್ಚೆನಡೆದಿತು. ಆದರೆ ಅದು ನಿರಾಕೃತವಾಯಿತು.

ಡಾ. ಅಂಬೇಡಕರರು ಸಹ ಒಂದು ತಿದ್ದುಪಡಿ ತಂದು ಸಂಸ್ಥಾನಗಳ ಗಡಿಬದಲಾಯಿಸಲು ಸರಕಾರವು ಮಾತ್ರ ಮಸೂದೆ ಮಂಡಿಸಬಹುದು ಎಂದಿದ್ದುದನ್ನು ತಿದ್ದಿ ಸದಸ್ಯರು ಸಹ ಅಧ್ಯಕ್ಷರ ಅಪ್ಪಣೆಯಿಂದ ಅಂಥ ಮಸೂದೆ ತರಬಹುದೆಂದು ಬದಲಿಸುವದು ಆವಶ್ಯವೆಂದು ಪ್ರತಿಪಾದಿಸಿದರು. ಈ ತಿದ್ದುಪಡಿ ಸ್ವೀಕೃತವಾಯಿತು.

ಸಾಂಗಲಿ

	ತಾ. ೧೮
ಅರಸಿಣ ಹೊಸ (ಹೇರು)	೧೩೨
ಮೆಣಸಿನಕಾಯಿ ಹೊಸ ಹೇರು	೧೨೫–೧೮೦
ಬೆಲ್ಲ	೩೦–೩೫
ಶೇಂಗಾ ಖಂಡಿ	೮೦–೧೨೮

ಮ. ಗಾಂಧಿಯ ಮರ ಕೊಲೆಯ ಖಟ್ಲೆ

ದಿಲ್ಲಿಯ ಕೆಂಪು ಕೋಟೆಯಲ್ಲಿ ತಾ ೮ ರಂದು ವಿಶೇಷ ನ್ಯಾಯಾಲಯದೆದುರು ನಡೆದ ಮಹಾತ್ಮಾ ಗಾಂಧಿಯವರ ಕೊಲೆಯ ವಿಚಾರಣೆಯ ಕಾಲಕ್ಕೆ ಕೊಲೆಗಡಕನಾದ ನಥುರಾಮ ಗೋಡಸೆ ೯೩ ಪುಟಗಳ ಒಂದು ಸುದೀರ್ಘ ಹೇಳಿಕೆ ಕೊಟ್ಟನು. ಆಗ ಅವನು ಈ ಕೊಲೆಗೆ ತಾನೇ ಹೊಣೆಯೆಂದೂ ಇದರಲ್ಲಿ ಇತ್ಯಾರ ಅಂಗವು ಇಲ್ಲವೆಂದೂ ತನಗೆ ದಯೆ ತೋರಿಸಬೇಕಾಗಿಲ್ಲವೆಂದೂ ಹಿಂದುಗಳ ಕಲ್ಯಾಣ ದೃಷ್ಟಿಯಿಂದಲೇ ಈ ಘೋರ ಕೃತ್ಯ ಮಾಡಿದೆನೆಂದೂ ಹೇಳಿ ಗಾಂಧೀಜಿಯವರೇ ಪಾಕಿಸ್ತಾನದ ಜನಕರಾದ್ದರಿಂದ ಹಿಂದಭೂಮಿಯ ಕರ್ತವ್ಯನಿಷ್ಠ ಪುತ್ರನಂತೆ ದೇಶ ವಿಭಜನೆಕ್ಕೆ ಕಾರಣನಾದ ರಾಷ್ಟ್ರಪಿತನನ್ನು ಕೊಲೆಗೈಯುವದೇ ತನ್ನ ಕರ್ತವ್ಯವೆಂದು ಭಾವಿಸಿದ್ದಾಗಿ ತಿಳಿಸಿದನು. ಗುಂಡು ಹಾರಿಸುವ ಮೊದಲು ಪಿಸ್ತೂಲಿನೊಂದಿಗೆ ಮಹಾತ್ಮರಿಗೆ ತಲೆಬಾಗಿ ನಮಸ್ಕರಿಸಿದ್ದಾಗಿ ಅರುಹಿದನು. ಅವನು ತನ್ನ ಕೊನೆಯ ಬಯಕೆಯೇನೆಂಬುದನ್ನು ನಿವೇದಿಸುತ್ತ, ನನ್ನ ದೇಶ ಪುನಃ ಏಕೀಕೃತವಾಗಲಿ, ಅಖಂಡವಾಗಲಿ, ಒಬ್ಬರ ಆಕ್ರಮಣಕ್ಕೆ ಒಳಗಾಗುವ ಪರಾಭವ ವೃತ್ತಿ ನನ್ನ ಜನರಿಂದ ದೂರಾಗಲಿ, ನನ್ನ ಈ ಕೃತಿಯ ಬಗ್ಗೆ ಜನರಲ್ಲಿ ತಪ್ಪು ತಿಳುವಳಿಕೆ ಉಂಟಾಗದಿರಲಿ ಇದೇ ನನ್ನ ಕೊನೆಯ ಇಚ್ಛೆ ಹಾಗೂ ದೇವರಲ್ಲಿ ಪ್ರಾರ್ಥನೆ ಎಂದು ಮುಂತಾಗಿ ನುಡಿದನು. ಗೋಡಸೆಯ ಹೇಳಿಕೆಯ ವಿವರವಾದ ವರದಿಗೆ ಸರಕಾರವು ನಿರ್ಬಂಧ ಹಾಕಿದೆ.

ತಾ ೯ ರಂದು ಗೋಡಸೆಯ ಮರುಸವಾಲು ನಡೆದಿತು.

ತಾ. ೧೦ ರಂದು ನಾರಾಯಣ ಆಪಟೆಯು ೨೩ ಪುಟಗಳ ಹೇಳಿಕೆ ಕೊಟ್ಟು ತನ್ನಮೇಲೆ ಹೊರಿಸಿದ ಆರೋಪಗಳನ್ನೆಲ್ಲ ನಿರಾಕರಿಸಿದ್ದಲ್ಲದೆ ತಾನು ಈ ವಿಷಯದಲ್ಲಿ ಯಾರೊಡನೆಯೂ ಒಳಸಂಚು ನಡೆಸಿಲ್ಲವೆಂದೂ ತನ್ನನ್ನು ಪೇಚಿನಲ್ಲಿ ಸಿಕ್ಕಿಸಲು ಕೃತಕ ಸಾಕ್ಷಿ ತಂದಿದ್ದಾರೆಂದೂ ತಿಳಿಸಿದನು.

ತಾ. ೧೩ ರವರೆಗೆ ಆಪಟೆಯ ವಿಚಾರಣೆಯಲ್ಲಿ ಮರುಸವಾಲ್ಗಳು ನಡೆದವು.

ತಾ ೧೫ ರಂದು ೩ ನೇ ಆರೋಪಿಯಾದ ಕರಕರೆಯು ವಿಶೇಷ ನ್ಯಾಯಾಧೀಶರ ಪ್ರಶ್ನೆಗೆ ಉತ್ತರ ಕೊಡುತ್ತ ಆಪಟೆ ಮತ್ತು ಮದನಲಾಲರ ಹೊರತು ಬೇರಾರ ಪರಿಚಯವೂ ತನಗಿಲ್ಲವೆಂದು ಹೇಳಿದನು. ಇವನೂ ತನ್ನ ಹೇಳಿಕೆಯನ್ನು ಓದಿ ಹೇಳಿದನು. ಅದರಲ್ಲಿ ಅವನು ತನಗೂ ಒಳ ಸಂಚಿಗೂ ಯಾವ ಸಂಬಂಧವಿಲ್ಲವೆಂದೂ ತನ್ನನ್ನು ಬಿಡುಗಡೆ ಮಾಡಬೇಕೆಂದೂ ಕೇಳಿಕೊಂಡಿರುವನಲ್ಲದೆ ಮಾಫಿ ಸಾಕ್ಷಿದಾರನಾದ ಬಡಗೆ ಇವನು ಹೇಳಿದ ಸಂಗತಿಗಳೆಲ್ಲ ಸುಳ್ಳೆಂದೂ ಕಲ್ಪಕವೆಂದೂ ಅರುಹಿದನು.

ತಾ. ೧೬ ರಂದು ೪ ನೆಯ ಆರೋಪಿಯಾದ ಮದನಲಾಲನು ಹೇಳಿಕೆ ಕೊಡುತ್ತ ತಾ. ೨೦ ರಂದು ಬಾಂಬು ಹಾರಿಸಿದೆನೇನೊ ನಿಜ. ಆದರೆ ಮಹಾತ್ಮರಂಥ ಮಹಾವಿಭೂತಿಯನ್ನು ಕೊಲ್ಲುವ ಇಚ್ಛೆ ನನ್ನದಿರಲಿಲ್ಲ. ಕೇವಲ ಮಹಾತ್ಮರ ಲಕ್ಷ್ಯವನ್ನು ನನ್ನ ಕಡೆಗೆ ಸೆಳೆಯಲು ಅದನ್ನು ಉಪಯೋಗಿಸಿದೆ. ಎಂದು ಮೊದಲಾಗಿ ಅರುಹಿದನಲ್ಲದೆ ನಥುರಾಮನ ಪರಿಚಯವೇ ತನಗಿಲ್ಲವೆಂದೂ ಸೆರೆಮನೆಯಲ್ಲಿಯೇ ಅವನನ್ನು ತಾನು ಮೊದಲಸಲ ಕಂಡದ್ದೆಂದೂ ತಿಳಿಸಿದನು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೧೬

ಜವಳಿ

ಕೋಹಿನೂರು	೩೬೯–೦–೦
ಮುಂಬಯಿ ಡಾಯಿಂಗ್	೧೦೩೪–೧೨–೦
ಗೋಕಾಕ	೨೬೪–೦–೦
ಸ್ವದೇಶಿ	೨೫೫–೮–೦
ಸೆಂಚುರಿ	೫೮೫–೦–೦
ಸಿಂಧ್ಯಾ ಶ್ಯ	೧೬೫–೮–೦
ಬೇಲಾಪುರ ಸಕ್ಕರೆ	೩೬೬–೦–೦
ಸಿಂಧ್ಯಾ ಸ್ಟೀಮ	೨೬–೧೨–೦
ಅಸೊ. ಸಿಮೆಂಟ್	೧೯೯–೧೨–೦
ಟಾ. ಡಾ. ಸ್ಟೀಲ ಡಿಫರ್ಡ	೬೫೨೪–೧೨–೦
ಸೆಂಟ್ರಲ ಬ್ಯಾಂಕ್	೮೦–೮–೦
ಇಂಪೀರಿಯಲ್ ಬ್ಯಾಂಕ ಫುಲ್ಲ	೧೬೬೦–೦–೦
ರಿಝರ್ವ ,,	೧೦೨೪–೦–೦

ಚಿನ್ನ--ಬೆಳ್ಳಿ

	ತಾ. ೧೮
ತಯಾರಿ ಚಿನ್ನ	೧೧೨೪–೪–೦
ವಾಯದಾ ,,	೧೧೨೨–೧೧–೦
ಸಾವರಿನ	೬೫–೮–೦
ತಯಾರಿ ಬೆಳ್ಳಿ	೧೬೫–೮–೦
ವಾಯದಾ ,,	೧೬೫–೧೨–೦

ಅರಳೆ

ಫೆಬ್ರುವರಿ	೬೦೨–೮–೦
ಮೇ	೫೯೪–೧೨–೦
ಜೂನ	೫೯೮–೦–೦
ಸೆಪ್ಟೆಂಬರ	೬೦೨–೮–೦
ಮಾರ್ಚ	೫೯೪–೧೨–೦

ಎಣ್ಣೆಕಾಳು

ಶೇಂಗಾ	೧೬೨–೮–೦
ಅಗಸಿ	೨೬–೬–೦
,, ಹೊಸ ಬೆಳೆ	೨೬–೮–೦
ಅಗಸಿ ಎಣ್ಣೆ	೧೬–೧೨–೦

ಸಾಗರ

	ತಾ. ೧೮
ಗುಂಡು ಅಡಿಕೆ	೨೮–೨೮।
ಬೆಟ್ಟೆ ,,	೨೬–೧೦
ರಾಶಿ ,,	೪೦–೪೪
ಚಿಕಣ ನಂ. ೧	೪೬।–೪೮
,, ೨	೪೭–೪೭॥
ಸಿಕಾಳಿ	೪೨–೪೨॥

ಶಿವಮೊಗ್ಗ ಅಡಿಕೆ

	ತಾ. ೧೬
ದೇಶಾವರ ನಂ. ೧ ಮುಖ ೧ ಕ್ಕೆ	೪೦–೪೭
,, ,, ೨	೨೬–೪೦
,, ,, ೪	೨೫–೨೬
ರಾಜಾ ಆಲವು	೨೬–೪೧
ಕೊರಸಾಲು	೨೪–೪೮
ಬೆಟ್ಟೆವಂತಿ	೧೮–೧೯
ಬೆಟ್ಟೆ	೧೫–೧೬

ಹುಬ್ಬಳ್ಳಿ

	ತಾ. ೧೯
ಜ. ಹತ್ತಿ ನಗಕ್ಕೆ	೭೪೫–೭೫೦
,, ಅರಳೆ ,,	೨೬೫–೨೮೫
ಜ. ಹತ್ತಿಕಾಳು ರೂ.ಗೆ	೬॥ ಪೌಂಡ
ಎ. ಹತ್ತಿಕಾಳು ,,	೬। ,,
ಜೋಳ (ಚೀಲಕ್ಕೆ)	೪೭–೪೬॥
ಕೆಂಪು ಗೋದಿ ಚೀಲಕ್ಕೆ	೧೦೨–೧೦೮
ಬಿಳಿ ಗೋದಿ ಚೀ[illegible]	೮೨–೯೦
ಸಣ್ಣ ಭತ್ತ ,,	—
ದೊಡ್ಡ ,, ,,	—
ಕುಸುಬಿ ,,	೪೨–೪೨॥
ಶೇಂಗಾ (ಹಳೆ) ಹೇರು	೭೯–೫೦
,, (ಹೊಸ) ,,	೭೭–೪೬

ಕರ್ಮವೀರ

[illegible]
ಕಾರ್ತಿಕ ಬ. ೬ ಸೋಮವಾರ

ಪಂಡಿತ ಜವಾಹರಲಾಲರು

ಭಾರತದ ಮುಖ್ಯಮಂತ್ರಿ ಪಂಡಿತ ಜವಾಹರಲಾಲರು ಕಳೆದ ರವಿವಾರ ಹದಿನಾಲ್ಕನೆಯ ತಾರೀಕಿಗೆ ಅರವತ್ತನೆಯ ವರುಷದಲ್ಲಿ ಕಾಲಿಟ್ಟರು. ಪಂಡಿತ ಜವಾಹರಲಾಲರ ಜೀವನ ಆದರ್ಶ ಜೀವನ. ಆಗರ್ಭ ಶ್ರೀಮಂತ ಮನೆತನದಲ್ಲಿ ಜನಿಸಿ, ಹ್ಯಾರೋ ಕೇಂಬ್ರಿಜದಂಥ ಇಂಗ್ಲಂಡದಲ್ಲಿಯ ಪ್ರಮುಖ ವಿದ್ಯಾಸಂಸ್ಥೆಗಳಲ್ಲಿ ಶಿಕ್ಷಣ ಪಡೆದು ಬ್ಯಾರಿಸ್ಟರರಾಗಿ ಭಾರತಕ್ಕೆ ಅವರು ಮರಳಿದರು. ಮನಸ್ಸು ಮಾಡಿದ್ದರೆ ತಂದೆ ಮೋತೀಲಾಲರಂತೆ ಅವರೂ ನಾಮಾಂಕಿತ ವಕೀಲರಾಗಿ ಹೇರಳ ಹಣವನ್ನು ಗಳಿಸಬಹುದಿತ್ತು. ಆದರೆ ದೈವಲೀಲೆಯೇ ವಿಚಿತ್ರ! ತ್ಯಾಗಜೀವನವೇ ಅವರಿಗೆ ಮೀಸಲಾಗಿತ್ತು. ಅಸಹಕಾರ ಯುಗದ ಹಿಂದಿನ ಜವಾಹರರ ಜೀವನಕ್ಕೂ ತದನಂತರ ಗಾಂಧೀಜಿಯ ಶಿಷ್ಯತ್ವ ವಹಿಸಿದ ನಂತರದ ಅವರ ಜೀವನಕ್ಕೂ ಮಹದಂತರ. ಏಳೆಂಟು ಸಲ ದೀರ್ಘಾವಧಿಯ ಸೆರೆಮನೆ ವಾಸವನ್ನನುಭವಿಸಿ ಬಗೆಬಗೆಯ ಕಷ್ಟ ನಿಷ್ಠುರಗಳನ್ನು ಸಹಿಸಿದವರವರು. ಇತಿಹಾಸದಲ್ಲಿಯೇ ಇಂಥ ಉದಾಹರಣೆ ವಿರಳವೆಂದು ಹೇಳಬಹುದು. ಸೆರೆಮನೆಯ ಕಷ್ಟಜೀವನ, ಪ್ರಿಯಜನರ ವಿರಹ ಎಂಥವರನ್ನಾದರೂ ಧೃತಿಗೆಡಿಸಿ ಕುಕ್ಕರಿಸಿಬಿಡುವವು; ಆದರೆ ಜವಾಹರಲಾಲರು ಅಸಮಧೈರ್ಯಶಾಲಿಗಳಾಗಿದ್ದುದರಿಂದ ಇದೆಲ್ಲವನ್ನು ಎದುರಿಸಿ ಮಾನವ ಜನಾಂಗಕ್ಕೇ ತ್ಯಾಗಜೀವನದ ಆದರ್ಶ ಕೊಟ್ಟರು. ೧೯೨೦ ರಿಂದ ೧೯೩೦ರ ವರೆಗಿನ ದಶಕದಲ್ಲಿ ಕಾಂಗ್ರೆಸ್ಸಿನ ಧುರೀಣರೆಂದು ಅವರು ಅದರ ರಾಜಕಾರಣವನ್ನೇ ಮಾರ್ಪಡಿಸಿದರು. ಮದ್ರಾಸ ಕಾಂಗ್ರೆಸ್ಸಿನಲ್ಲಿ ಸ್ವಾತಂತ್ರ್ಯ ಧ್ಯೇಯದ ಗೊತ್ತುವಳಿಯನ್ನು ಮಂಡಿಸಿ ಮರುವರುಷವೇ ಇಂಡಿಪೆಂಡೆನ್ಸ ಲೀಗನ್ನು ಸ್ಥಾಪಿಸಿ ಕಾಂಗ್ರೆಸ್ಸಿಗರ ಮನೋವೃತ್ತಿಯನ್ನು ಬದಲಿಸಿದರು. ಮುಂದಿನ ವರುಷ ಲಾಹೋರ ಕಾಂಗ್ರೆಸ್ಸಿನ ಅಧ್ಯಕ್ಷಸ್ಥಾನದಿಂದ ಪೂರ್ಣ ಸ್ವಾತಂತ್ರ್ಯದ ಕಹಳೆಯನ್ನು ಊದಿ, ಕರಾಚಿ ಕಾಂಗ್ರೆಸ್ಸಿನಲ್ಲಿ ನಾಗರಿಕ ಮೂಲಭೂತ ಹಕ್ಕುಗಳನ್ನು ಸಾರಿದರು. ಮುಂದೆ ಯುರೋಪ ಸಂಚಾರ ಮುಗಿಸಿಕೊಂಡು ಬಂದ ನಂತರ, ಅಂತರರಾಷ್ಟ್ರೀಯ ಮನೋವೃತ್ತಿಯನ್ನು ಹೆಚ್ಚಿಸಿಕೊಂಡು ಕಾಂಗ್ರೆಸ್ಸೂ ಅದೇ ಧೋರಣವನ್ನು ವಹಿಸುವಂತೆ ಪ್ರಯತ್ನಿಸಿದರು. ಈ ರೀತಿಯಾಗಿ ದೇಶ ವಿದೇಶಗಳಲ್ಲಿ ಕಾಂಗ್ರೆಸ್ಸಿನ ಸ್ಥಾನಮಾನಗಳನ್ನು ಏರಿಸಿದ್ದರಿಂದಲೆ, ಮೂರುಸಲ ಕಾಂಗ್ರೆಸ್ಸಿನ ಅಧ್ಯಕ್ಷ ಪೀಠವೇರುವ ಯಾರಿಗೂ ಸಿಕ್ಕದ ಮಹಭಾಗ್ಯ ಇವರಿಗೆ ದೊರೆಯಿತು.

ಅಂತೆಯೆ ಸ್ವತಂತ್ರ ಹಿಂದುಸ್ತಾನದ ಪ್ರಥಮ ಮುಖ್ಯಮಂತ್ರಿಯಾಗುವ ಮಾನವು ಪಂಡಿತ ಜವಾಹಿರಲಾಲರಿಗೆ ದೊರೆತಿದೆ. ರಾಷ್ಟ್ರದ ಸೂತ್ರಗಳನ್ನು ವಹಿಸಿದ ನಂತರ ದೇಶವನ್ನು ಎದುರಿಸಿದ ಗಂಡಾಂತರಗಳು ಮತ್ತಾರನ್ನಾದರೂ ಧೃತಿಗೆಡಿಸಿ ಬಿಡುತ್ತಿದ್ದುವು; ಆದರೆ ಇಡೀ ಜೀವನದಲ್ಲಿಯೇ ಬಗೆಬಗೆಯ ಕಷ್ಟ ನಿಷ್ಠುರಗಳನ್ನನುಭವಿಸಿ ಒಂದು ಬಗೆಯಿಂದ ಅವುಗಳಿಗೆ ಕುಠಾರಪ್ರಾಯರಾಗಿರುವ ಜವಾಹರಲಾಲರು ದೇಶಕ್ಕೊದಗಿದ ಈ ಗಂಡಾಂತರಗಳನ್ನೂ ಎದುರಿಸಿ ಇಂದು ಅದರ ಧವಳ ಕೀರ್ತಿಯನ್ನು ದಶದಿಕ್ಕುಗಳಲ್ಲಿ ಮೊಳಗಿಸುತ್ತಿರುವರು. ಗಾಂಧೀಜಿಯ ನಿಜ ಶಿಷ್ಯನಂತೆ ಇವರು ಶಾಂತಿ ಪಾಠವನ್ನು ಇಡೀ ಜಗತ್ತಿಗೇ ಬೋಧಿಸುತ್ತಿರುವರು. ಪರಮಾತ್ಮನು ಜವಾಹರಲಾಲರಿಗೆ ದೀರ್ಘಾಯುರಾರೋಗ್ಯಗಳನ್ನು ಕೊಡಲೆಂದು ಅನನ್ಯವಾಗಿ ಪ್ರಾರ್ಥಿಸುತ್ತೇವೆ.



ಇದೇ ೧೪ನೆಯ ತಾರೀಖು, ಜವಾಹರರ ಜನ್ಮದಿನ. ಅಂದು ಅವರನ್ನು ಕಾಣಲು ಕರ್ನಾಟಕದ ಮುಖಂಡರು ಅವರ ಮನೆಗೆ ಹೋದಾಗ ತೆಗೆದ ಭಾವಚಿತ್ರ
ಕುಳಿತವರು:- ಡಾ. ಹರ್ಡಿಕರ, ಸ್ವಾಮಿ ರಮಾನಂದ ತೀರ್ಥ, ಪಂಡಿತ ಜವಾಹರಲಾಲ, ಶ್ರೀ ದಿವಾಕರ, ಶ್ರೀ ಎಸ್. ವಿ. ಕೃಷ್ಣಮೂರ್ತಿ ರಾವ, ಡಾ. ವಿ. ಕೆ. ಆರ್. ವಿ. ರಾವ.
ನಿಂತವರು:- ಶ್ರೀ ದಾಮೋದರ (ಸ್ವಾಮೀಜಿಯವರ ಕಾರ್ಯದರ್ಶಿ) ಶ್ರೀ ನಿಜಲಿಂಗಪ್ಪನವರು, ಡಾ. ಮೇಲುಕೋಟೆ, ಶ್ರೀ ಗೋವಿಂದದಾಸ ಶರಾಫ (ಹೈದರಾಬಾದ); ನ್ಯಾಯಮೂರ್ತಿ ಲೋಕೂರ ಹಾಗು ಅವರ ಚಿರಂಜೀವರು; ಶ್ರೀ ಗುರುರಾವ ವಾಳವೇಕರ.

ವಾರದ ಸಿಂಹಾವಲೋಕನ

ಕರ್ನಾಟಕ ಕೊರತೆ ಪ್ರಾಂತವಲ್ಲ

ಕರ್ನಾಟಕ ಪ್ರಾಂತೀಕರಣವನ್ನು ವಿರೋಧಿಸುವವರು ಅದು ಸ್ವತಂತ್ರ ಪ್ರಾಂತವಾದರೆ ಕೊರತೆಯ ಪ್ರಾಂತವಾಗುವದೆಂಬ ಕಾರಣವನ್ನು ಮುಂದೆ ಮಾಡುವದುಂಟು. ಮೈಸೂರನ್ನು ಬಿಟ್ಟರೂ ಕರ್ನಾಟಕವು ಸ್ವಾವಲಂಬಿ ಮತ್ತು ಉಳಿಕೆಯ ಪ್ರಾಂತವಾಗುವದೆಂಬ ಮಾತನ್ನು ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ವಿಜಯೀಂದ್ರರಾಯರು ದರ್ ಸಮಿತಿಗೆ ಕೊಟ್ಟ ತಮ್ಮ ಸಾಕ್ಷಿಯಲ್ಲಿ ಸ್ಪಷ್ಟಪಡಿಸಿರುವರು. ಮೈಸೂರನ್ನು ಬಿಟ್ಟು ಒಟ್ಟು ಕರ್ನಾಟಕ ಭಾಗದ ಉತ್ಪನ್ನವು ೭೫೦ ಲಕ್ಷ ರೂಪಾಯಿ ಮತ್ತು ವೆಚ್ಚ ೬೭೦ ಲಕ್ಷ ರೂಪಾಯಿ ಆಗಿ ೮೦ ಲಕ್ಷ ದಷ್ಟು ಉಳಿತಾಯವಾಗುವದೆಂದು ಡಾ. ರಾಯರು ಅಂಕೆ ಸಂಖ್ಯೆಗಳಿಂದ ಸಿದ್ಧಮಾಡಿ ತೋರಿಸಿರುವರು; ಅಲ್ಲದೆ ಕರ್ನಾಟಕದಲ್ಲಿ ಖನಿಜ ಸಂಪತ್ತು ವಿಪುಲವಾಗಿದ್ದು ಅದರ ಉಪಯೋಗ ಮಾಡಿಕೊಳ್ಳಲೂ ಇದರಿಂದ ಅವಕಾಶ ದೊರೆಯುವದು. ಕರ್ನಾಟಕದಲ್ಲಿ ಆಹಾರಧಾನ್ಯ, ಹತ್ತಿ, ಎಣ್ಣೆಕಾಳುಗಳು ಬೆಳೆಯುವವಲ್ಲದೆ ಅರಣ್ಯದಲ್ಲಿ ತಯಾರಾಗುವ ಸಾಮಾನುಗಳು ವಿಪುಲವಾಗಿವೆ. ಇವೆಲ್ಲವನ್ನು ನಿರ್ಯಾತಮಾಡುವದರಿಂದ ಹಿಂದುಸ್ತಾನದ ಆರ್ಥಿಕಸ್ಥಿತಿಯ ಸುಧಾರಣೆಗೂ ಬಹಳ ಅನುಕೂಲವಾಗುವದೆಂದು ಡಾ. ರಾಯರು ಅಭಿಪ್ರಾಯ ಪಟ್ಟಿದ್ದಾರೆ. ಕೆಲವರು ತಪ್ಪು ಅಂಕೆ ಸಂಖ್ಯೆಯನ್ನು ತೋರಿಸಿ ಕರ್ನಾಟಕ ಸ್ವಾವಲಂಬಿ ಪ್ರಾಂತವಾಗಲಾರದೆಂದು ಹೇಳುವದುಂಟು. ಇಂಥವರು ಡಾ. ವಿಜಯೀಂದ್ರರಾಯರ ಅಂಕೆಸಂಖ್ಯೆಗಳನ್ನು ಪರೀಕ್ಷಿಸಿ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು. ಆರ್ಥಿಕ ಸ್ವಾವಲಂಬನ ದೃಷ್ಟಿಯಿಂದಲೂ ಕರ್ನಾಟಕ ಸ್ವತಂತ್ರ ಪ್ರಾಂತವಾಗಲು ಯೋಗ್ಯವಾಗಿದೆ ಎಂಬುದು ಇದರಿಂದ ಸ್ಪಷ್ಟವಾಗುವದು.

ಹೈದರಾಬಾದದ ಭವಿತವ್ಯ

ಹೈದರಾಬಾದದ ಭವಿತವ್ಯವೇನೆಂಬ ಪ್ರಶ್ನೆಗೆ ಹಿಂದುಸ್ತಾನ ಸರಕಾರದವರು ಶೀಘ್ರ ಉತ್ತರಪರ ಪ್ರಕಟಣೆ ಹೊರಡಿಸಲಿರುವರೆಂದು ತಿಳಿಯುತ್ತದೆ. ಅಲ್ಲಿನ ಪರಿಸ್ಥಿತಿ ಶಾಂತವಾಗಬೇಕಾದರೆ ಇನ್ನೂ ಕೆಲ ಕಾಲ ಅಲ್ಲಿ ಸೈನಿಕ ಆಡಳಿತವನ್ನೇ ನಡೆಸಲು ಸರಕಾರವು ನಿರ್ಧರಿಸಿದೆಯಂತೆ. ಭಾಷಾನ್ವಯವಾಗಿ ಹೈದರಾಬಾದವನ್ನು ಹಂಚಿಬಿಡುವದು ಸದ್ಯಕ್ಕೆ ಅಪ್ರಸ್ತುತವೆಂದು ಸರಕಾರವು ಅಭಿಪ್ರಾಯ ಪಡುತ್ತಿದೆಯೆಂದು ತಿಳಿಯುತ್ತದೆ. ಸದ್ಯಕ್ಕೆ ನಡೆದ ಮಿಲಿಟರಿ ಆಡಳಿತ ಹಾಗು ಕಾಂಗ್ರೆಸ ನಡುವೆ ಸಹಕಾರವು ಅವಶ್ಯವೆಂದು ಹಿಂದುಸ್ತಾನ ಸರಕಾರದ ಧುರೀಣರನ್ನು ಭೆಟ್ಟಿಯಾದ ಸಂಸ್ಥಾನ ಧುರೀಣರು ಅಭಿಪ್ರಾಯ ಪಟ್ಟರಂತೆ. ಇದರಲ್ಲಿ ಯಾರ ಭಿನ್ನಾಭಿಪ್ರಾಯವೂ ಇರಲಾರದು. ಹೈದರಾಬಾದದ ಸ್ವಾತಂತ್ರ್ಯಕ್ಕಾಗಿ ಬಗೆಬಗೆಯಿಂದ ಹೋರಾಡಿದ ಸಂಸ್ಥಾನ ಕಾಂಗ್ರೆಸ್ಸನ್ನು ವಿಶ್ವಾಸದಲ್ಲಿ ತೆಗೆದುಕೊಂಡು ಆಡಳಿತವನ್ನು ಸಾಗಿಸುವದು ಕ್ರಮಪ್ರಾಪ್ತವಾಗಿದೆ. ಕಾಂಗ್ರೆಸ್ಸಿಗರಾದರೂ ತಮ್ಮ ಹೊಣೆಯನ್ನರಿತುಕೊಂಡು ಸ್ವಾರ್ಥಪರರಾಗದೆ ಭಿಡೆ ಮುರುವತ್ತುಗಳಿಗೊಳಗಾಗದೆ ಇಡೀ ಸಂಸ್ಥಾನದ ಹಿತದೃಷ್ಟಿಯಿಂದ ಆಡಳಿತ ಸಾಗಿಸುವಲ್ಲಿ ಸರಕಾರಕ್ಕೆ ಸಹಾಯ ಸಲ್ಲಿಸಬೇಕು. ಸಂಸ್ಥಾನವನ್ನು ಹಿಂದುಸ್ತಾನದಲ್ಲಿ ಸೇರ್ಪಡೆಮಾಡಿ ಜವಾಬದಾರ ಸರಕಾರವನ್ನು ಅಲ್ಲಿ ಸ್ಥಾಪಿಸಬೇಕೆಂದು ಅಭಿಪ್ರಾಯಪಟ್ಟು ಸಂಸ್ಥಾನದಲ್ಲಿಯ ಸಾಮ್ಯವಾದಿ ಪಕ್ಷವು ಸಂಸ್ಥಾನ ಕಾಂಗ್ರೆಸ್ಸನ್ನು ಕಟುವಾಗಿ ಟೀಕಿಸಿದೆ. ಸಂಸ್ಥಾನದಲ್ಲಿ ಶಾಂತಿ ಪ್ರಸ್ಥಾಪಿತವಾದ ನಂತರ ಇದೆಲ್ಲ ನಡೆಯತಕ್ಕದ್ದು ಎಂಬುದನ್ನು ಯಾರೂ ಮರೆಯಬಾರದು. ಆದುದರಿಂದ ಯಾವ ಪಕ್ಷದವರೂ ದುಡುಕದೆ ಮಿಲಿಟರಿ ಆಡಳಿತವು ಯಶಸ್ವಿಯಾಗಿ ಉದ್ದಿಷ್ಟವು ಸಾಧಿಸುವಂತೆ ನಡೆಯಬೇಕೆಂದು ಸೂಚಿಸುತ್ತೇವೆ.

ಸಂತ್ರಸ್ತರಿಗೆ ಸಹಾಯ

ರಾಜಕೀಯ ರಂಗದಲ್ಲಿ ಭೂಮಿ ಸೀಮೆ ಹಣಕಾಸುಗಳನ್ನು ಕಳೆದುಕೊಂಡು ಸಂತ್ರಸ್ತರಾದವರಿಗೆ ಪರಿಹಾರ ಕೊಡಬೇಕೆಂದು ಮದ್ರಾಸ ಸರಕಾರವು ಯೋಜಿಸಿದೆ. ಈ ಪರಿಹಾರಕ್ಕಾಗಿ ೧೪ ಸಾವಿರ ಜನರಿಂದ ಅರ್ಜಿಗಳು ಬಂದಿದ್ದು, ಅವುಗಳಲ್ಲಿ ಎರಡು ಸಾವಿರಜನರಿಗೆ ಭೂಮಿಗಳನ್ನು ಕೊಡುವ ನಿರ್ಧಾರ ಸರಕಾರ ಮಾಡಿದೆಯಂತೆ. ನಾಲ್ಕು ಸಾವಿರ ಅರ್ಜಿಗಳು ನಿರಾಕೃತವಾಗಿದ್ದು ಉಳಿದ ಅರ್ಜಿಗಳ ವಿಚಾರ ಇಷ್ಟರಲ್ಲಿ ಆಗಲಿದೆ. ರಾಜಕೀಯ ಸಂತ್ರಸ್ತರಿಗೆ ಇಂತು ಭೂಮಿಗಳನ್ನು ಕೊಡುವುದರಿಂದ ಎರಡು ಬಗೆಗಳಿಂದ ಲಾಭವಿದೆ. ಕಷ್ಟಕ್ಕೀಡಾದವರಿಗೆ ಪರಿಹಾರ ಕೊಟ್ಟಂತಾಗುವದಲ್ಲದೆ, ಅಧಿಕ ಆಹಾರ ಧಾನ್ಯ ಬೆಳೆಯಿರೆಂಬ ಯೋಜನೆಗೂ ಸಹಾಯವಾಗುವದು. ಈ ದಿಶೆಯಲ್ಲಿ ಕಂದಾಯ ಮಂತ್ರಿಗಳು ಹೆಚ್ಚು ಗಮನ ಕೊಡುತ್ತಿದ್ದು ಅಧಿಕ ಆಹಾರ ಬೆಳೆವುದಕ್ಕಾಗಿ ಮತ್ತು ಚಿಲ್ಲರೆ ನೀರಾವರಿಗಾಗಿ ೩೭ ಲಕ್ಷ ರೂಪಾಯಿಗಳನ್ನು ಮಂಜೂರ ಮಾಡಲಾಗಿದೆ. ನೆಲಸಮವಾದ ಕೆರೆಗಳ ದುರಸ್ತಿಗಾಗಿ ಸರಕಾರದವರು ಒಂದು ಮಸೂದೆಯನ್ನು ಮಂಡಿಸಲಿರುವರೆಂದು ತಿಳಿಯುತ್ತದೆ. ಜಮೀನದಾರಿ ನಿರ್ಮೂಲನ ಮಸೂದೆಯನ್ನೂ ಪಾಸುಮಾಡಿಸಿಕೊಂಡು ತಮ್ಮೀ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ಕಂದಾಯ ಮಂತ್ರಿಗಳು ಆಶಿಸಿರುವರು. ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಯೋಜಿಸುವ ಯಾವದೇ ಬಗೆಯ ಯೋಜನೆಯು ಸ್ವಾಗತಾರ್ಹವೇ ಆಗಿದೆಂದು ಬೇರೆ ಹೇಳಬೇಕಿಲ್ಲ.

ವಿಸಂಗತವಾಗದು

ಸ್ವತಂತ್ರ ಪ್ರಜಾರಾಜ್ಯವನ್ನು ಸಂಸ್ಥಾಪಿಸಲು ಹೊರಟ ಸ್ವತಂತ್ರ ಹಿಂದುಸ್ತಾನ ಸರಕಾರವು ಕಾಮನ್‌ವೆಲ್ತದಲ್ಲಿ ಉಳಿಯಬಲ್ಲುದೊ ಎಂಬುದು ರಾಜಕಾರಣಿಗಳ ತಲೆತಿನ್ನುತ್ತಿದೆ. ಘಟನಾ ಸಮಿತಿಯಲ್ಲಿ ಇದರ ಕೂಲಂಕಷ ಚರ್ಚೆಯಾಗಿ ಕೊನೆಯ ನಿರ್ಣಯ ಸ್ವೀಕೃತವಾಗಲಿದೆ. ಲಂಡನದಲ್ಲಿ ಕೂಡಿದ್ದ ಕಾಮನ್‌ವೆಲ್ತ ಮುಖ್ಯ ಮಂತ್ರಿ ಪರಿಷತ್ತಿನಲ್ಲಿ ಈ ಸಂಬಂಧದ ಚರ್ಚೆಯಾಗಿ ಇನ್ನು ಮುಂದೆ ಕಾಮನ್‌ವೆಲ್ತ ರಾಷ್ಟ್ರಗಳ ಸಂಬಂಧವೆಂತಿರಬೇಕೆಂಬುದರ ರೂಪರೇಷೆಯೂ ಗೊತ್ತಾಯಿತು. ಬ್ರಿಟಿಶ ಕಾಮನ್‌ವೆಲ್ತವೆಂಬುದರ ಬದಲು ಬರಿ ಕಾಮನ್‌ವೆಲ್ತ ಎಂಬದನ್ನಿಟ್ಟುಕೊಳ್ಳಬೇಕೆಂದೂ ಇದರಿಂದ ಯಾವ ಸ್ವತಂತ್ರ ರಾಷ್ಟ್ರದ ಸ್ವಾಭಿಮಾನಕ್ಕೂ ಕುಂದುಬರಲಾರದೆಂದೂ ಗೊತ್ತಾಯಿತು. ಈ ಕಾಮನ್‌ವೆಲ್ತ ರಾಷ್ಟ್ರಗಳ ಸದಸ್ಯತ್ವದಲ್ಲಿ ಭಿನ್ನ ಭಿನ್ನ ಪ್ರಕಾರಗಳು ಇರತಕ್ಕದ್ದಲ್ಲ ಎಂಬದಾಗಿ ಪಂಡಿತ ಜವಾಹರಲಾಲರೆ ಮೊದಲಾದವರು ಪರಿಷತ್ತಿನಲ್ಲಿ ಹೇಳಿ ಸ್ವತಂತ್ರ ಹಿಂದುಸ್ತಾನಕ್ಕೂ ಕಾಮನ್‌ವೆಲ್ತದಲ್ಲಿ ಅವಕಾಶವುಂಟೆಂಬದನ್ನು ಸಾಧಿಸಿಕೊಂಡಿರುವರು ಈ ಮೊದಲಿನಂತೆ ಬ್ರಿಟಿಶ ಕಾಮನ್‌ವೆಲ್ತದಲ್ಲಿ ಉಳಿದ ರಾಷ್ಟ್ರಗಳೂ ಅಧೀನರಾಷ್ಟ್ರಗಳಾಗಿ ಉಳಿಯದೆ ಶಾಂತಿಪ್ರಸ್ಥಾಪನೆಗಾಗಿ ಈ ಪರಿಷತ್ತಿನ ಕಾರ್ಯಕಲಾಪಗಳ ಸಂಬಂಧವಲ್ಲಿ ಪಂಡಿತ ಜವಾಹರಲಾಲರು ಮೊನ್ನೆ ಪತ್ರಿಕಾ ಪರಿಷತ್ತಿನಲ್ಲಿ ವಿವರಣೆ ಕೊಟ್ಟಿರುವರು. ಕಾಮನ್‌ವೆಲ್ತ ರಾಷ್ಟ್ರಗಳು ನಿರ್ಮಿಸಲ್ಪಡುವವು. ಈ ಮಾತನು ಜವಾಹರಲಾಲರು ಪತ್ರಿಕಾ ಪರಿಷತ್ತಿನಲ್ಲಿ ಸ್ಪಷ್ಟಪಡಿಸಿರುವರು. ಕಾಮನ್‌ವೆಲ್ತ ರಾಷ್ಟ್ರ ನಿರ್ಮಾಣವು ವಿಶ್ವಶಾಂತಿಸ್ಥಾಪನೆಯ ಒಂದು ಮಹತ್ವದ ಸಾಧನ, ಯುದ್ಧಾಸಕ್ತ ರಾಷ್ಟ್ರಗಳ ಅಪವಿತ್ರ ಮಿತ್ರಮಂಡಲ ಅದಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಧ್ಯೇಯದಿಂದ ಕಾಮನ್‌ವೆಲ್ತ ರಾಷ್ಟ್ರಗಳೆಲ್ಲ ಒಗ್ಗೂಡಿ ನಡೆಯಲು ಯಾವ ಅಡ್ಡಿಯಿದೆ? ಸ್ವತಂತ್ರ ಪ್ರಜಾರಾಜ್ಯ ಕಟ್ಟಬಯಸಿದ ಹಿಂದುಸ್ತಾನದ ಧೋರಣಕ್ಕಾಗಲಿ ಇಲ್ಲವೆ ಬೇರೆ ಯಾವದೇ ರಾಷ್ಟ್ರದ ಸ್ವತಂತ್ರ್ಯ ಧೋರಣಕ್ಕಾಗಲಿ ಇದೆಂತು ವಿಸಂಗತವಾಗಬಲ್ಲದು?

ಸರ್ವೋದಯಕ್ಕಾಗಿ ನಿಯಂತ್ರಣಗಳು

ಸರಕಾರದವರು ನಿಯಂತ್ರಣಧೋರಣವನ್ನು ಸ್ವೀಕರಿಸಿದರೆ ಒಂದು ವರ್ಗದ ಜನರು ಅವರನ್ನು ತೆಗಳುವರು; ನಿಯಂತ್ರಣವನ್ನು ತೆಗೆದು ಬಿಟ್ಟರೆ ಮತ್ತೊಂದು ವರ್ಗದವರು ಅವರನ್ನು ತೀಕ್ಷ್ಣವಾಗಿ ಟೀಕಿಸುವುದುಂಟು; ಅರೆವಾಸಿ ನಿಯಂತ್ರಣವನ್ನು ಹಾಕಿದರೆ ಇಲ್ಲವೆ ವಿನಿಯಂತ್ರಣವನ್ನು ಜಾರಿಯಲ್ಲಿ ತಂದರೆ ಎರಡೂ ವರ್ಗದವರು ಸರಕಾರದವರನ್ನು ತೆಗಳುವುದುಂಟು. ನಿಯಂತ್ರಣದ ಪುರಸ್ಕರ್ತರಾಗಲಿ ಅದರ ಪ್ರಶಂಸಕರಾಗಲಿ ಇಬ್ಬರೂ ಒಂದುಮಾತಿನಲ್ಲಿ ಏಕಾಭಿಪ್ರಾಯದವರಾಗಿದ್ದಾರೆ. ಸ್ವಾರ್ಥವನ್ನು ಬಿಟ್ಟು ಬೇರೆ ಯಾವುದನ್ನೂ ಗಮನಿಸದ ಜನಸಾಮಾನ್ಯ, ವ್ಯಾಪಾರಸ್ಥರು ಮತ್ತು ಅಧಿಕಾರಿವರ್ಗದೊಡನೆ ತಾವು ವ್ಯವಹರಿಸಬೇಕಾಗುವದೆಂದೂ ಅವರೆಲ್ಲರಲ್ಲಿ ನಾಗರಿಕ ಭಾವನೆಯು ಮತ್ತು ಪ್ರಾಮಾಣಿಕತನದ ಅಭಾವವಿರುವದೆಂದೂ ಎರಡೂವರ್ಗದವರು ಒಪ್ಪುವದುಂಟು. ನಿಯಂತ್ರಣಗಳನ್ನು ಹೆಚ್ಚು ಬಿಗಿ ಮಾಡಿ ಒಂದು ವರ್ಗದವರ ಸ್ವಾರ್ಥ ಭಾವನೆಗಳನ್ನು ಸತ್ತಿಕ್ಕಬೇಕೆಂದು ನಿಯಂತ್ರಣದ ಪುರಸ್ಕರ್ತರು ಅಭಿಪ್ರಾಯಪಟ್ಟರೆ, ಸ್ಪರ್ಧೆಗೆ ಬೇಕಾದಷ್ಟು ಅವಕಾಶ ಕೊಟ್ಟು ಎರಡನೇ ವರ್ಗದವರ ಉದ್ದೇಶವನ್ನು ನಿಷ್ಫಲಗೊಳಿಸಲು ನಿಯಂತ್ರಣದ ವಿರೋಧಕರು ಪ್ರವರ್ತಿಸುತ್ತಾರೆ.

'ಸಂತ್ರಸ್ತ' ಎಂಬ ಗುಪ್ತ ಹೆಸರಿನಿಂದ ಬರೆದ ಲೇಖವೊಂದನ್ನು ಗಾಂಧೀಜಿಗೆ ಕಳಿಸಬೇಕೆಂದು ಮಾಡಿದ ಲೇಖಕನೊಬ್ಬನು ಗಾಂಧೀಜಿಯವರಿಗೆ ಈ ಬಗೆಯ ಆಶ್ವಾಸನ ಕೊಡುತ್ತಾನೆ. ಗಾಂಧೀಜಿಯವರ ಕೊಲೆಯಾದ ಸುದ್ದಿಯನ್ನು ಅಂದೇ ಅವನು ಕೇಳಿದ್ದರಿಂದ ಆ ಲೇಖವನ್ನು ಅವರಿಗೆ ಕಳಿಸುವದಾಗಲಿಲ್ಲಂತೆ.

"ಬಂಡವಲುದಾರನಿಗಾಗಲಿ ಇಲ್ಲವೆ ವ್ಯವಹಾರಸ್ಥನಿಗಾಗಲಿ ವಿನಿಯಂತ್ರಣದಿಂದ ಯಾವದೇ ಬಗೆಯ ವೈಯಕ್ತಿಕ ಹಿತವಿಲ್ಲ ಅಥವಾ ಹಣದ ಲಾಭವೂ ಇಲ್ಲ ಮುಖ್ಯಾವಶ್ಯಕ ಆಹಾರ ಪದಾರ್ಥಗಳನ್ನು ಸಾಗಿಸುವಲ್ಲಿ ಆಗುವ ಅತೀವ ವಿಲಂಬ ಮತ್ತು ಅಕ್ಷಮತೆ ಅಧಿಕಾರಿಗಳಲ್ಲಿ ಮತ್ತು ಸಾರ್ವಜನಿಕರಲ್ಲಿ ಮನೆಮಾಡಿ ಆತ್ಯಂತಿಕ ಅನೀತಿ ಇವೆಲ್ಲ ಕಾರ್ಯಕಲಾಪಗಳಲ್ಲಿ ಹೆಚ್ಚುತಿರುವ ಕ್ರಮವುಂಟಾದ್ದರಿಂದ ಹೊಣೆಗಾರ ಸ್ಥಾನದಲ್ಲಿರುವ ಮತ್ತು ನಿಯಂತ್ರಣವನ್ನು ಸಮೀಪದಿಂದ ಪರೀಕ್ಷಿಸುತಿರುವ ಅವರಲ್ಲರಿಗೆ ತಲೆ ಬೇಸರಿಕೆ ಇದುತ್ತದೆ.

ಅವರು ನನಗೆ ಬರೆಯುತ್ತಾರೆ—

"ಗಾಂಧೀಜಿಯವರ ಮರಣದ ನಂತರ ಬಹಳಕಾಲ ಸಂದುಹೋಗಿದೆಆದರೆಅಲೇಖದಲ್ಲಿ ಮಾಡಿದ ಟೀಕೆ ಈಗ ಕೂಡ ಊರ್ಜಿತದಲ್ಲಿ ಇದೆ. ವಿಶಿಷ್ಟ ಹಿತ ಸಂಬಂಧಿಗಳು ಅನುಸರಿಸುತಿರುವ ವಿಲಂಬ ಧೋರಣದ ಮೂಲಕ ನಿಯಂತ್ರಣವನ್ನು ಅರ್ಥಮರ್ಥತೆಗೆದುಹಾಕುವರಿಂದಈಪಾಕ್ಷಿಕ ವಿನಿಯಂತ್ರಣವು ಅಯಶಸ್ವಿಯಾಗುವದೆಂದು ಆಗ ಅಭಿಪ್ರಾಯ ಪಡಲಾಗಿತ್ತು. ಆಹಾರ ಪದಾರ್ಥ ಮತ್ತು ಬಟ್ಟೆಗಳ ಈ ಪಾಕ್ಷಿಕ ವಿನಿಯಂತ್ರಣ ಅಯಶಸ್ವಿಯಾದುದು ಸಿದ್ಧವಾಗಿ, ನಿಯಂತ್ರಣಗಳನ್ನು ಮತ್ತೆ ಹೇರಲಾಗುತಿದೆ.

"ಪಂಡಿತಜಿ ಮತ್ತು ಸರದಾರ ವಲ್ಲಭಭಾಯಿ ಪಟೇಲರಂಥ ಶ್ರೇಷ್ಠ ಮಂತ್ರಿಗಳು ನಿಯಂತ್ರಣವನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ಸಾರ್ವಜನಿಕರನ್ನು ಕೇಳಿಕೊಳ್ಳುತಿರುವರು. ನಿಯಂತ್ರಣದ ಆಳಿಕೆಯಲ್ಲಿ ಅಶಕ್ಯವಿದ್ದುದನ್ನು ಅವರು ಸಾರ್ವಜನಿಕರಿಂದ ಅಪೇಕ್ಷಿಸುತಿರುವರು. ನಿಯಂತ್ರಣವೆಂದರೆ ಧಾರಣೆಗಳಲ್ಲಿ ಹೆಚ್ಚಳ, ಕೆಟ್ಟ ಆಹಾರ ಪದಾರ್ಥಗಳ ಪೂರಯಿಕೆ ಮತ್ತು ಕೊರತೆಯ ನೆವ ಮುಂದೆ ಮಾಡಿ ಸಾಕಷ್ಟು ಸೀದಾ ಕೊಡದಿರುವದು. ನಿಜವಾಗಿಯೂ ಕೊರತೆ ದೇಶದಲ್ಲಿದ್ದರೆ, ಕಳ್ಳಪೇಟೆಗಳಲ್ಲಿ ಪದಾರ್ಥಗಳು ಹೇಗೆ ದೊರೆಯುತಿದ್ದುವು? ನಿಯಂತ್ರಣವನ್ನು ಎತ್ತುವದರಿಂದ ತಾತ್ಪೂರ್ತಿಕವಾಗಿ ಧಾರಣೆಗಳು ಏರುವುವು. ಬಟ್ಟೆ ಮತ್ತು ಅದರಂಥ ಇತರ ಪದಾರ್ಥಗಳನ್ನು ಕೊಳ್ಳಬಾರದೆಂದು ಹೇಳುವದೇ ಇದಕ್ಕೆ ತಕ್ಕ ಉಪಾಯವಾಗುವದು. ದೊಡ್ಡ ದೊಡ್ಡ ಔದ್ಯೋಗಿಕ ನಗರಗಳಲ್ಲಿ ತಮ್ಮ ಧಾನ್ಯದ ಅಂಗಡಿಗಳ ಮುಖಾಂತರ ಮತ್ತು ಔದ್ಯೋಗಿಕ ಹಾಗು ವಾಣಿಜ್ಯ ಸಂಸ್ಥೆಗಳ ಮೂಲಕ ಕಡಿಮೆ ಬೆಲೆಗೆ ಸರಕಾರದವರು ಆಹಾರ ಪದಾರ್ಥಗಳನ್ನು ಹಂಚಬೇಕು; ಸಾಕಷ್ಟು ಪ್ರಮಾಣದಲ್ಲಿ ಇವನ್ನು ಹಂಚಬೇಕಲ್ಲದೆ ಮನಸ್ಸಿಗೆ ಬಂದ ಧಾರಣೆ ಮಾತ್ರ ತೆಗೆದುಕೊಳ್ಳಬಾರದು. ನಿಯಂತ್ರಣಗಳನ್ನು ಹೀಗೆಯೇ ಸಾಗಿಸುವದಕ್ಕಿಂತ ಮತ್ತು ಪ್ರಾಂತೀಯ ನಿರ್ಬಂಧಗಳನ್ನು ಹೇರುವುದಕ್ಕಿಂತ ಮೇಲೆ ಹೇಳಿದಂತೆ ಮಾಡಿದ್ದಾದರೆ ಪರಿಹಾರ ದೊರೆತ ಬಗ್ಗೆ ಸಮಾಧಾನವನ್ನು ಸಾರ್ವಜನಿಕರು ವ್ಯಕ್ತಪಡಿಸಬಹುದು. ಕಳ್ಳಪೇಟೆಯು ಚಟುವಟಿಕೆ ನಡೆಯುದಂತೆ ಸರಕಾರದವರು ಗಡಿ ಪ್ರಾಂತಗಳನ್ನಷ್ಟು ಕಾಯ್ದರೆ ಸಾಕು."

ನಾನು ಅವರ ಆ ಲೇಖನವನ್ನು ಮತ್ತು ಅನಂತರ ಅವರು ಬರೆದ ಮತ್ತೊಂದು ಲೇಖವನ್ನು ಓದಿರುವೆನು. ಅವು ಬಹಳ ದೀರ್ಘವಾಗಿರುವದರಿಂದ ಅವಕ್ಕೆ ಸ್ಥಳ ಸಿಕ್ಕಲಾರದೆಂಬುದಕ್ಕೆ ನಾನು ವಿಷಾದಿಸಬೇಕಾಗಿದೆ. ಅವರಿಗೆ ಇಂತೆನಿಸುತಿದೆ.

"ಕೇಂದ್ರ ಮಂತ್ರಿಗಳಿಗಾಗಲಿ ಪ್ರಾಂತೀಯ ಮಂತ್ರಿಗಳಿಗಾಗಲಿ ಸಾರ್ವಜನಿಕರ ಅಭಿಪ್ರಾಯ ಸ್ವಲ್ಪೂ ಗೊತ್ತಿರುವದಿಲ್ಲ; ಸಾಮಾಜಿಕ ನ್ಯಾಯವನ್ನು ದಯಪಾಲಿಸುವೆವೆಂದೂ ವಿಶಿಷ್ಟ ಹಿತಸಂಬಂಧಗಳನ್ನು ಹೊಡೆದುಹಾಕುವದಕ್ಕಾಗಿಯೂ ಅವರು ತಲೆಯಲ್ಲಿ ಏನೇನೋ ಹುಚ್ಚು ತುಂಬಿಕೊಂಡಿರುವರು. ತಮ್ಮೀ ಧೋರಣದಿಂದ ಹೊಸದೊಂದು ವಿಶಿಷ್ಟ ಹಿತಸಂಬಂಧ ವರ್ಗವನ್ನೇ ನಿರ್ಮಾಣ ಮಾಡುತ್ತೇವೆಂಬುದರ ಕಲ್ಪನೆಯೇ ಅವರಿಗೆ ಬಾರದಂತಾಗಿದೆ– ಯುದ್ಧ ಕಾಲದಲ್ಲಿ ಅವಶ್ಯವಾಗಿದ್ದ ನಿಯಂತ್ರಣಗಳನ್ನು ಕೊರತೆಯ ನೆವದಿಂದ ಮತ್ತು ಸಮವಾಗಿ ಹಂಚುವ ನೆವದಿಂದ ಹಾಗೆಯೇ ಮುಂದು ವರಿಸಲಾಗುತ್ತದೆ. ವ್ಯಾಪಾರಸ್ಥರು ಕಳ್ಳಪೇಟೆ ವ್ಯವಹಾರ ನಡೆಸುವರೆಂದೂ ಕಳ್ಳ ಸಂಗ್ರಹ ಮಾಡುವರೆಂದೂ ಲಾಭಬಡಕರಾಗಿರುವರೆಂದೂ ಆರೋಪಿಸಲಾಗುತ್ತದೆ. ಈ ಕಳ್ಳಪೇಟೆ ನಿರ್ಮಾಣವಾಗಲಿಕ್ಕೆ ಕಾರಣವೇನೆಂಬದನ್ನು ಹುಡುಕುವ ಪರಿಶ್ರಮ ಅವರು ತೆಗೆದುಕೊಂಡಿದ್ದರೆ, ತಮ್ಮ ಅಧಿಕಾರಿ ವರ್ಗದವರು ಮತ್ತು ಯಾವ ಬಡವರ್ಗದ ಸಲುವಾಗಿ ನಿಯಂತ್ರಣಗಳು ಇರಬೇಕೆಂದು ಸರಕಾರದವರು ಹೇಳುತಿರುವರೋ ಆ ಬಡ ಜನಸಾಮಾನ್ಯರೇ ಈ ಕಳ್ಳಪೇಟೆಗೆ ಕಾರಣರೆಂದು ಕಂಡು ಬರದಿರದು. ಹಳೆಯ ವ್ಯಾಪಾರೀ ವರ್ಗದಲ್ಲಿಯೂ ಕೆಲವು ಅಪ್ರಾಮಾಣಿಕ ಜನರಿರಬಹುದು ಆದರೆ ಬಹುಸಂಖ್ಯ ವ್ಯಾಪಾರೀ ವರ್ಗವೆಲ್ಲ ನಿಯಂತ್ರಣಾಧಿಕಾರಿಗಳಿಂದಲೆ ನಿರ್ಮಿತವಾದುದು– ಸಮಸ್ಯೆಗಳು ತೀರ ಸರಳವಿದ್ದಾಗ ಈ ನಿಯಂತ್ರಣಗಳು ಇದ್ದೇ ತೀರಬೇಕೆಂದು ಯಾರು ಬಯಸುತಿರುವರೊ ಅಂಥ ವರ್ಗದವರ ಕೂಡ ವಿಚಾರವಿನಿಮಯ ಅನವಶ್ಯವಾಗಿರುವಾಗ ಉಚ್ಚಾಧಿಕಾರಿಗಳು ಈಗ ಕೂಡ ಅಂಥವರೊಡನೆ ಚರ್ಚೆ ನಡೆಸಿರುವರೆಂದು ತಿಳಿಯುತ್ತದೆ. ನಿಯಂತ್ರಣವನ್ನು ಎತ್ತುವದರಲ್ಲಿಯೂ ಸ್ವೀಕರಿಸಿದ ವಿಲಂಬ ಧೋರಣದ ಮರ್ಮವೇ ತಿಳಿಯದಂತಾಗಿದೆ"

ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ಬಗೆಬಗೆಯ ದೋಷಗಳಿಗಾಗಿ ಮತ್ತು ತಪ್ಪು ಹೆಜ್ಜೆಗಾಗಿ ಕಟುತರವಾಗಿ ಟೀಕಿಸಿ ಅವರು ಹೀಗೆ ಎನ್ನುತ್ತಾರೆ–

"ಸಾಮಗ್ರಿಗಳನ್ನು ತೀವ್ರ ಸಾಗಾಟ ಮಾಡುವದರಲ್ಲಿಯೇ ಈ ಸಮಸ್ಯೆಯ ರಹಸ್ಯವು ಅಡಕವಾಗಿದೆ. ಯುದ್ಧಕಾಲದಲ್ಲಿ ರೇಲ್ವೆಗಳು ಸಾಮಗ್ರಿಗಳ ಸಾಗಾಟವನ್ನು ಯಶಸ್ವಿ ಮಾಡುತಿದ್ದವು; ಆದರೆ ಈಗ ಏಕೆ ಮಾಡಲಾರವೊ ತಿಳಿಯದಾಗಿದೆ! ರೇಲ್ವೆ ಕೆಲಸಗಾರರ ಮೇಲೆ ಸಾಕಷ್ಟು ಒತ್ತಾಯವನ್ನು ತಂದು, ಅಯೋಗ್ಯವಾದ ಮತ್ತು ಲಂಚಗುಳಿಗಳಾದ ಅಧಿಕಾರಿಗಳನ್ನು ಚೆನ್ನಾಗಿ ಶಿಕ್ಷಿಸಿದ್ದಾದರೆ ಈಗಿನಕಿಂತ ಹೆಚ್ಚು ಸಾಮಗ್ರಿಗಳ ಸಾಗಾಟವನ್ನು ನಾವು ಮಾಡಬಲ್ಲೆವೆಂಬುದು ನಿರ್ವಿವಾದವಾಗಿದೆ. ಆಹಾರ ಪದಾರ್ಥಗಳು, ಬೇಳೆಕಾಳುಗಳು, ಸಕ್ಕರೆ, ಬೆಲ್ಲ, ಬಟ್ಟೆ ಮೊದಲಾದವುಗಳಿಗೆಲ್ಲ ರೇಲ್ವೆಗಳಲ್ಲಿ ಪ್ರಥಮ ಪ್ರಾಶಸ್ತ್ಯ ಕೊಟ್ಟು ಉಳಿದವುಗಳಿಗಿಷ್ಟ ಪ್ರಾಶಸ್ತ್ಯವನ್ನೇಕೆ ತೆಗೆದು ಹಾಕತಕ್ಕದ್ದು. ಒಮ್ಮೆ ಇದನ್ನು ಕಾರ್ಯರೂಪದಲ್ಲಿ ತಂದು ಬಿಟ್ಟರೆ ರೇಲ್ವೆಯಲ್ಲಿಯ ಲಂಚಗುಳಿತನವೆಲ್ಲ ಮಾಯವಾಗಿ ಬಿಡುವದು.

ನಿಯಂತ್ರಣವಿಲ್ಲದೆ ಪರಿಸ್ಥಿತಿಯನ್ನು ಎಂತು ಸರಿಪಡಿಸಬಲ್ಲೆವೆಂಬುದಕ್ಕೆ ತಮಗೆ ಸರಿಯೆಂದು ತೋರಿದ ಹಲವು ಉಪಾಯಗಳನ್ನು ಸೂಚಿಸಿ ಈ ಲೇಖಕರು [illegible] ಅದನ್ನು ಮುಗಿಸುತ್ತಾರೆ.

"ವ್ಯಾಪಾರಸ್ಥರು ಮತ್ತು ಕಾರ್ಖಾನೆಕಾರರು ನಿಯಂತ್ರಣದಲ್ಲಿಯ ಈ ದೋಷಗಳಿಂದ [illegible]ತ್ತಿದ್ದಾರೆ. ನಿಯಂತ್ರಣಗಳ ದಿನಗಳೀಗ ಸಂದುಹೋದವು ಎಂಬುದು ಸುಸ್ಪಷ್ಟವಾಗಿದೆ. ಮತ್ತು ಯುದ್ಧಕಾಲದಲ್ಲಿ ಅದು ಅವಶ್ಯ ಎಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ. ಎಷ್ಟೇ ಬದಲಾವಣೆ ಮಾಡಿಯೂ ಈ ನಿಯಂತ್ರಣಗಳಿಗೆ ಜೀವದಾನ ಮಾಡುವದೆಂದರೆ ಈಗಾಗಲೆ ಗಡಚಾದ ಪೂರೆಯಿಕೆಯ ಪರಿಸ್ಥಿತಿಯನ್ನು ಮತ್ತಷ್ಟು ಬಿಗಿಮಾಡಿದಂತಾಗುವದು. ಜನತೆಗೆಲ್ಲ ಅನಿರ್ಬಂಧವಾಗಿ ಮತ್ತು ಕಡಿಮೆ ದರಗಳಲ್ಲಿ ಆಹಾರ ಪದಾರ್ಥಗಳು ಸಿಕ್ಕಬೇಕಾದರೆ ನಿಯಂತ್ರಣಗಳನ್ನು ಪೂರ್ಣವಾಗಿ ಎತ್ತಿದ ಹೊರತು ಗತ್ಯಂತರವಿಲ್ಲೆಂಬುದು ಸ್ಪಷ್ಟವಿದೆ. ಯುದ್ಧ ಕೊನೆಗಂಡ ಬಳಿಕವೂ ಈ ದೇಶದಲ್ಲಿಯ ಜನರು ತಮಗೆ ಬೇಕಾದ ಅತ್ಯಾವಶ್ಯಕ ಪದಾರ್ಥಗಳಿಗಾಗಿಯೂ ಅತ್ಯಂತ ತಾಳ್ಮೆಯಿಂದ ಎಲ್ಲಬಗೆಯ ತೊಂದರೆ ಕಷ್ಟಗಳನ್ನು ಅನುಭವಿಸಬೇಕು ಮತ್ತು ಕಾರ್ಯಕ್ಷಮವಲ್ಲದ ಹಾಗು ಲಂಚಗುಳಿಯಾದ ನಿಯಂತ್ರಣ ಸಂಸ್ಥೆಯು [illegible] ಆಡಳಿತದ ವೆಚ್ಚವನ್ನೆಲ್ಲ ಹೊರಬೇಕು ಎಂದು ಈ ದೇಶದ ದುರ್ದೈವೀ ಪ್ರಜೆಗಳನ್ನು ಕೇಳುವದೆಂದರೆ ಅದೆಂಥ ಸಲ್ಲದಮಾತು? ಜನತೆಯು ತಾಳ್ಮೆ ಚರಮಸೀಮೆಯನ್ನು ಮುಟ್ಟಿದೆ. ನಮ್ಮ ಮಿತ್ರರಿಂದ ನಮ್ಮನ್ನು ದಯಮಾಡಿ ರಕ್ಷಿಸಿರಿ ಎಂದು ಅವರು ಅರ್ತಧ್ವನಿಯಿಂದ ಕೂಗುತಿರುವರು."

ಈ ಬಗೆಯಾಗಿ ಬರೆದವರು ಇವರೊಬ್ಬರೇ ಅಲ್ಲ. ಇಂಗ್ಲೀಶ, ಹಿಂದೀ, ಉರ್ದು, ಗುಜರಾಥಿ, ಮರಾಠಿಯಲ್ಲಿಯೂ ಇದೇ ಬಗೆಯ ಬರೆಹಗಳು ಬಂದಿವೆ. ಅವರೆಲ್ಲರೂ ನಿಯಂತ್ರಣಗಳನ್ನು ಮತ್ತೆ ಹೇರುವವರ ವಿರುದ್ಧವಾಗಿಯೇ ಬರೆದಿರುವರು. ಪ್ರತಿಯೊಬ್ಬನು ಒಂದೊಂದು ಸೂಚನೆ ಮಾಡಿದ್ದಾನೆ. ನನ್ನನ್ನೂ ನಾನೂ ಇದರಿಂದ ಹೊರಪಡಿಸಬಯಸುವದಿಲ್ಲ. ಪಂಡಿತ ಜವಾಹರಲಾಲರು ಅಕಬರ ಮತ್ತು ಬೀರಬಲ್ಲನ ಕತೆಯನ್ನು ಮತ್ತೊಮ್ಮೆ ರಚಿಸುವದಾದರೆ, ದಿಲ್ಲಿಯ ಚಾಂದಣಿ ಚೌಕಿಗೆ ಒಬ್ಬ ಕಾರಕೂನನನ್ನು ಕಳಿಸಿ, ಪೇಟೆಗೆ ತಗಲಿದ ಸದ್ಯದ ಕಾಹಿಲೆಗೆ ಏನಾದರೂ ಉಪಾಯವಿದೆಯೊ ಎಂದು ಪ್ರತಿಯೊಬ್ಬ ದಾರಿಹೋಕನನ್ನೂ ಕೇಳಲು ವಿಧಿಸಿದ್ದಾದರೆ, ಪ್ರತಿಯೊಬ್ಬ ದಾರಿಹೋಕನೂ ಸೂಚಿಸಿದ ಒಂದೊಂದು ರಾಮಬಾಣ ಉಪಾಯದ ಹೊರೆತಕ್ಕೊಂಡು ಅವನು ಮರಳುವನೆಂಬುದು ನಿಃಸಂಶಯವಾಗಿದೆ. ಜಗತ್ತಿನಲ್ಲಿ ಡಾಕ್ಟರರಿಗೂ ಕೊರತೆಯಿಲ್ಲ. ಉಪಾಯಗಳಿಗೂ ಕೊರತೆಯಿಲ್ಲ ನಿಜವಾಗಿ ಕಾಹಿಲೆಗಳಿಗಿಂತ ರಾಮಬಾಣ ಉಪಾಯಗಳು ಮತ್ತು ಚಿಕಿತ್ಸಾ ಪದ್ಧತಿಯು ಹೆಚ್ಚಿಗಿವೆ.

ಅನೇಕ ಲೇಖಕರು ವಿನಿಯಂತ್ರಣವನ್ನು ಒಳ್ಳೆ ಜೋರಿನಿಂದ ಪ್ರತಿಪಾದಿಸುವರೆಂಬಲ್ಲಿ ಸಂದೇಹವಿಲ್ಲ ಆದರೆ ಒಬ್ಬ ಲೇಖಕನೂ ಸಂಪೂರ್ಣ ನಿಯಂತ್ರಣವನ್ನು ಪುರಸ್ಕರಿಸಿರುವದಿಲ್ಲ. ಆಯಾತ ಮತ್ತು ನಿರ್ಯಾತಗಳನ್ನು ನಿಯಂತ್ರಿಸುವದು, ಸಾಗಾಟವನ್ನು ನಿಯತಗೊಳಿಸುವದು ಮತ್ತು ಉಗ್ರ ಶಿಕ್ಷೆಯನ್ನು ವಿಧಿಸುವ ಪದ್ಧತಿ ಇವೇ ಮೊದಲಾದವುಗಳನ್ನು ಎಲ್ಲರೂ ಅಪೇಕ್ಷಿಸುವರು. ಯೋಗ್ಯ ಕೆಲಸವನ್ನು ಮಾಡಿದ ಮನುಷ್ಯನಿಗೆ ಮರ್ಯಾದೆಸಿಕ್ಕುವದು ಮತ್ತು ಕೆಟ್ಟ ಕೆಲಸವನ್ನು ಮಾಡಿದರೆ ಅದರ ದುಷ್ಪರಿಣಾಮವನ್ನು ಅವರು ಅನುಭೋಗಿಸಬೇಕಾಗುವದು; ಆದುದರಿಂದ ಇದನ್ನೆಲ್ಲ ಅವರಿಗೇ ಬಿಟ್ಟುಕೊಡಬಹುದು ಎಂಬ ಬಗ್ಗೆ ಯಾರಲ್ಲಿಯೂ ವಿಶ್ವಾಸವುಳಿದಿಲ್ಲ. ಮಾನವರನ್ನು ಅವರ ಪಾಡಿಗೆ ಬಿಟ್ಟದ್ದಾದರೆ ಸಭ್ಯ ನಾಗರಿಕರಂತೆ ಅವರು ವರ್ತಿಸಲಾರರು ಎಂದೇ ಎಲ್ಲರ ಅಭಿಪ್ರಾಯ.

ನಿಯಂತ್ರಣ ಮತ್ತು ದಂಡನೆಯ ಶಾಸನಗಳು ನನಗೆ ಸ್ವಲ್ಪೂ ಸೇರುವದಿಲ್ಲ; ನಿಯಂತ್ರಣಗಳನ್ನು ತೆಗೆಯಬೇಕೆಂಬ ಗಾಂಧೀಜಿಯ ಪ್ರತಿಪಾದನೆಯಲ್ಲಿಯೂ ನನಗೆ ವಿಶ್ವಾಸವಿದೆ, ಹೀಗಿದ್ದರೂ ಸದ್ಯದ ಪರಿಸ್ಥಿತಿಯಲ್ಲಿ, ಮೇಲೆ ಉಲ್ಲೇಖಿಸಿದ ಪತ್ರಕಾರನು ಹೇಳುವಷ್ಟು ಈ ಸಮಸ್ಯೆಯು 'ತೀರ ಸರಳ' ವಾಗಿರುವದಿಲ್ಲ ಎಂದು ನನಗೆನಿಸುತ್ತದೆ; ಅದು ಬಹಳ ತೊಡಕಿನದಾಗಿದೆ ಮತ್ತು ತನ್ನ ಅಭಿಪ್ರಾಯಗಳೇ ಸರಿಯಾಗಿ ಇವೆ ಎಂದು [illegible] ಅವರು ತಿಳಿಯದಾಗಿ ಹೇಳಬೇಕಾಗಿದ್ದರೂ ಅಲ್ಲ [illegible] ಇವೆಲ್ಲವುದರಲ್ಲಿ ತನಗಿಂತ ಸರಕಾರದವರಲ್ಲಿ ಹೆಚ್ಚು ಸಾಧನ ಸಾಮಗ್ರಿಗಳಿರುವದೆಂಬುದನ್ನು ಪ್ರತಿಯೊಬ್ಬ ಟೀಕಾಕಾರನು ಗಮನಿಸಲೇಬೇಕು. ಸಾಗಾಟವನ್ನು ಹೆಚ್ಚು [illegible] ಗೊಳಿಸುವದರಲ್ಲಿ ಇರುವ ಅನೇಕ ಅಡಚಣಿಗಳ, ರೇಲ್ವೆಯಲ್ಲಿಯ [illegible] ಕೊರತೆಗಳ ಮತ್ತು ಸರಕಾರದ ಎಲ್ಲ ಶಾಖೆಗಳಲ್ಲಿಯ ಲಂಚಗುಳಿತನವನ್ನು ನಿವಾರಿಸಲು ಸರಕಾರದಲ್ಲಿಯ ಅಧಿಕಾರಿಗಳ ಪರಿಶ್ರಮವು ಸಾಮಾನ್ಯ ಮನುಷ್ಯನಿಗೆ ಅರಿವಾದರೂ ಇದೆಲ್ಲವನ್ನು ಟೀಕಾಕಾರರು ತಿಳಿದುಕೊಳ್ಳಲೇಬೇಕು. ಮುಖ್ಯವಾಗಿ ಕೇಂದ್ರ ಸರಕಾರದ ಧುರೀಣರು ಮತ್ತು ಅವರ ಸಹಕಾರಿಗಳು ಅದೇ ರೀತಿಯಾಗಿ ಪ್ರಾಂತೀಯ ಸರಕಾರಗಳಲ್ಲಿಯ ಮಂತ್ರಿಮಂಡಳದಲ್ಲಿಯ ಜನರು ಸದ್ಯಕ್ಕಿರುವ ಇತರ ದೇಶಾಭಿಮಾನಿಗಳಿಗಿಂತಲೂ ಒಳ್ಳೆ ಬುದ್ಧಿವಂತರು, ಸಚ್ಚೀಲರು, ಜನಸೇವಾಪರರು ಮತ್ತು ಧ್ಯೇಯನಿಷ್ಠರು ಆಗಿರುವರಲ್ಲದೆ ಇಡೀ ರಾಷ್ಟ್ರದ ಸಾರಸರ್ವಸ್ವವೇ ಆಗಿರುವರೆಂಬುದನ್ನು ನಮ್ಮಲ್ಲಿಯ ಪ್ರತಿಯೊಬ್ಬನು ತಿಳಿದುಕೊಳ್ಳಲೇಬೇಕು. ಅವರು ತಪ್ಪು ಮಾಡುತಿರುವರೆಂದು ಎನಿಸಿದರೂ ಅವರು ಕೈಕೊಳ್ಳುವ ಪ್ರತಿಯೊಂದು ಯೋಜನೆ ಮತ್ತು ಸ್ವೀಕರಿಸುವ ಧೋರಣೆಯಲ್ಲಿ ಪ್ರಾಮಾಣಿಕತನದಿಂದ ಸಹಾಯ ಸಹಕಾರವನ್ನು ನಮ್ಮಲ್ಲಿಯ ಪ್ರತಿಯೊಬ್ಬನಿಂದ ಅಪೇಕ್ಷಿಸಲು ಅವರಿಗೆ ಹಕ್ಕುಂಟು; ಆ ಬಗೆಯ ಸಹಾಯ ಸಹಕಾರವನ್ನು ಸಲ್ಲಿಸುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಒಂದು ವೇಳೆ ಅವರು ಅಯಶಸ್ವಿಯಾದರೂ ನಾವು ಅದನ್ನು ಬಹುವಾಗಿ ತೆಗಳಲೋಣಬೇಡ, ನಾವು ಹಾಗೆಯೇ ಹೇಳಿದ್ದೆವು ಎಂದು ಎನ್ನೋಣಬೇಡ, ಅದೆಂದಿಗೂ ಯಶಸ್ವಿಯಾಗದು, ಎಂದು ಹೇಳಿ ಸರಕಾರದ ಯಾವದೊಂದು ಧೋರಣವನ್ನು ಅಯಶಸ್ವಿಗೊಳಿಸಲು ಜನರನ್ನು ಪ್ರೋತ್ಸಾಹಿಸೋಣ ಬೇಡ. ಈಗ ಆಳುತಿರುವ ಸರಕಾರವು ಜನತೆಯ ರಾಜ್ಯವೇ ಆಗಿದೆ, ಇನ್ನೊಂದು ತೆಗಳಿಕೆಗೆ ಪಾತ್ರವಾದ ನಿಯಂತ್ರಣಗಳು ಮತ್ತೆ ಹೇರಲ್ಪಡುವದಕ್ಕೆ ಲಂಚಗುಳಿ ವ್ಯಾಪಾರಸ್ಥನಾಗಲಿ ಸರಕಾರೀ ಸೇವಕನಾಗಲಿ ಹೊಣೆಗಾರನಿದ್ದಷ್ಟೇ ತಾನೂ ಹೊಣೆಗಾರನು ಎಂಬುದಾಗಿ ಪ್ರತಿಯೊಬ್ಬ ನಾಗರಿಕನು ತಿಳಿದುಕೊಳ್ಳಲಿ. ನಿಯಂತ್ರಣ ನಿಯಮಾನುಸಾರ ಪ್ರಾಮಾಣಿಕವಾಗಿ ನಡೆಯುವದೇ ಅವುಗಳನ್ನು ತೆಗೆದು ಹಾಕುವದಕ್ಕೆ ಯೋಗ್ಯಮಾರ್ಗವಾಗಿದೆ; [illegible] ಲಂಚ ಇಲ್ಲವೆ ಖುಶಿ ಕೊಟ್ಟು ನಿಯಂತ್ರಣಗಳ ಪ್ರಯೋಜನ ಪಡೆಯಲಪೇಕ್ಷಿಸದೆ ತನ್ನ ಸರತಿಗಾಗಿ ಕಾಯುವದು ತನಗೆ ಬಂದ ಪಾಲಿನಿಂದಲೆ ಸಂತುಷ್ಟನಿರುವದು ಮತ್ತು ಅನವಶ್ಯವೆನಿಸಿದರೆ ತನ್ನ ಪಾಲಿನ ಮೇಲಿನ ಹಕ್ಕನ್ನು ಬಿಟ್ಟುಕೊಡುವದು ಇವೇ ಮೊದಲಾದ ಬಗೆಗಳು ನಿಯಂತ್ರಣಗಳನ್ನು ತೆಗೆದು ಹಾಕುವದಕ್ಕೆ ಯೋಗ್ಯ ಮಾರ್ಗಗಳಾಗಿವೆ.

೧) ಕಳ್ಳಪೇಟೆ ಇರುವದನ್ನು ನೋಡಿದರೆ ಸಾಮಗ್ರಿಗಳ ಅಷ್ಟೇ ಏಕೆ ಆಹಾರ್ಯಪದಾರ್ಥಗಳ ಕೊರತೆ ಕೂಡ ಇಲ್ಲವೆಂದು ಸಿದ್ಧವಾಗುತ್ತದೆ, ೨) ನಿಜವಾಗಿ ಪ್ರಾಮಾಣಿಕತನದ ಅಭಾವ ಹೆಚ್ಚಿಗಿದೆ, ನೆರೆಯವರ ಬಗ್ಗೆ ಆದರಭಾವದ ಅಭಾವವಿದೆ; ಮತ್ತು ನಾಗರಿಕ ಕರ್ತವ್ಯದ ನಿಜವಾದ ಅರಿವಿನ ಅಭಾವವಿದೆ ಮತ್ತು ೩) ಈ ನೈತಿಕ ಕೊರತೆಗಳನ್ನು ತುಂಬಿಕೊಳ್ಳುವದಕ್ಕಾಗಿ ನಿಯಂತ್ರಣ ಹಾಗೂ ದಂಡನೆಯ ವಿಧಾನಗಳ ಮೂಲಕ ಪ್ರಯತ್ನಿಸುತಿರುತ್ತೇವೆ. ಇವನ್ನೆಲ್ಲ ನಾನು ಒಪ್ಪುತ್ತೇನೆ. ಆದರೆ ಎರಡನೆಯದನ್ನು ಕಾರ್ಯರೂಪದಲ್ಲಿ ತರುವದರಿಂದಲೆ ಕೊನೆಯದನ್ನು ಹೋಗಲಾಡಿಸುವದು ಶಕ್ಯವಿದೆ; ಮತ್ತು ಇದು ಸಾಧ್ಯವಾಗಬೇಕಾದರೆ ಮೊದಲನೆಯದು ಕಾರ್ಯಕಾರಿಯಾಗಬೇಕೆಂಬುದು ಸಿದ್ಧವಾಗುತಿದೆ. [illegible] ಎಲ್ಲ ಸಾಮಗ್ರಿಗಳನ್ನು ಪೇಟೆಗೆ ತಂದು [illegible] ಧಾರಣೆಗಳಿಗೆ ಮಾರುವದು ಮತ್ತು [illegible] ವೃತ್ತಿ ಎಂಬುದೇ ಇದರ ಅರ್ಥ. [illegible] ನಿಯಂತ್ರಣದೊಂದು ಒಂದರ್ಥದಲ್ಲಿ

೧೧ ನೇ ಪುಟಕ್ಕೆ

ಪಾನನಿರೋಧದ ಆರ್ಥಿಕ ಮತ್ತು ಶಾಸ್ತ್ರೀಯ ಸಮಾಲೋಚನೆ

ಕಾಂಗ್ರೆಸ ಮುಂತ್ರಿ ಮಂಡಲವು ರಾಜ್ಯದ ಅಧಿಕಾರದ ಸೂತ್ರಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡ ಕೂಡಲೆ ಎಲ್ಲ ಪ್ರಾಂತಗಳಲ್ಲಿಯೂ ಕೈಕೊಂಡ ಹಾಗೂ ಮುಂದಿನಲ್ಲಿ ತಂದ ಅನೇಕ ಸಾಮಾಜಿಕ ಉಪಾಯಗಳಲ್ಲಿ ಪಾನ ನಿರೋಧದ ಬಗ್ಗೆ ತೀವ್ರಾರ್ಜಿತದ ಕಾನೂನು ಒಳ್ಳೆ ಮಹತ್ವದ್ದು, ದೂರ ದೃಷ್ಟಿಯುಳ್ಳ ಕ್ರಾಂತಿಕಾರಕವೂ, ಸಾಹಸವೂ ಆಗಿದೆಯೆಂದು ಧಾರಾಳವಾಗಿ ಹೇಳಬಹುದು. ಪಾನನಿರೋಧದ ವಿಷಯವು ಗಾಂಧೀಜಿಯವರಿಗೆ ಅತ್ಯಂತ ಪ್ರಿಯಕರವಾಗಿತ್ತು. ದೇಶದ ದಾರಿದ್ರ್ಯವನ್ನು ಪಾನನಿರೋಧದಿಂದ ನಿವಾರಿಸಬಹುದೆಂದು ಅವರು ನೆರೆ ನಂಬಿದ್ದರು. ಗ್ರಾಮಾಂತರದ ಕ್ಲಿಷ್ಟ ಹಾಗೂ ದೊಡ್ಡ ಉದ್ದಿಮೆಗಳ ಹೀನ ಯುಕ್ತಿಯ ಅಸಂಖ್ಯಾತ ಭಾಗ್ಯಹೀನರು ಮದ್ಯ ಪಾನದ ಮೂಲಕ ಇನ್ನಷ್ಟು ಗತಿಗೇಡಿಗಳಾಗು ವದನ್ನೂ ಅಸುಖಿಗಳೂ ದುರ್ಬಲರೂ ಆಗು ತ್ತಿರುವದನ್ನೂ ಅವರು ಕಣ್ಣಾರೆ ಕಂಡು ಈ ತೀರ್ಮಾನಕ್ಕೆ ಬಂದಿದ್ದರು.

ಪಾನನಿರೋಧದ ಯೋಜನೆಯು ಜನತೆಯ ನೈತಿಕ ಮಟ್ಟವನ್ನು ಎತ್ತರಿಸುವದಲ್ಲದೆ ಜನ ಸಾಮಾನ್ಯರ ಕಲ್ಯಾಣಕ್ಕೆ ಕಾರಣವೂ ಆಗುವಲ್ಲಿ ಸಂದೇಹವಿಲ್ಲ. ಆದರೆ ಇದರಿಂದ ಸರಕಾರದ ಉತ್ಪನ್ನದಲ್ಲಿ ಕೊಟ್ಯವಧಿ ಕೋಟಿ ರೂಪಾಯಿಗಳ ಕಡಿತ ಬೀಳುತ್ತದೆ. ಈ ಮೊದಲಿನ ಕಾಲದಲ್ಲಿ ಕಾಂಗ್ರೆಸ ಮಂತ್ರಿ ಮಂಡಲವು ಅಧಿಕಾರದಲ್ಲಿದ್ದಾಗ, ಮದ್ರಾಸದ ಆಗಿನ ಮುಖ್ಯ ಮಂತ್ರಿಗಳಾದ ಶ್ರೀ ರಾಜಗೋಪಾಲಾಚಾರ್ಯರು, (ಈಗ ಭಾರತದ ಗವರ್ನರ ಜನರಲರು) ಈ ಅಪರಂಪಾರವಾದ ಕೊರತೆಯನ್ನು ತುಂಬಿ ತೆಗೆಯಲು ಮಾರಾಟಕರವನ್ನು ಬಳಕೆಗೆ ತಂದರು. ಇದರಿಂದ ಅದೆಷ್ಟೋ ಪರಿಹಾರವೂ ದೊರಕಿತೆನ್ನಬೇಕು.

೧೯೪೭ ಆಗಸ್ಟ ೧೫ ನೇ ತಾ. ನಿಂದಂತೂ ದೇಶದಾದ್ಯಂತವೂ ವಿಚಾರವಂತರು, ಪಾನನಿರೋಧವನ್ನು ಕೂಡಲೇ ಕೈಕೊಳ್ಳತಕ್ಕದ್ದೆಂದೂ ಪಾನ ಪ್ರವೃತ್ತಿಯ ಪರಿಣಾಮವು ಬಡವರ ಮೇಲೆ ಅತ್ಯಂತ ಭೀಕರವಾಗುತ್ತ ಸಾಗಿದ್ದರಿಂದ ಈ ಪ್ರಶ್ನೆಯ ಬಗ್ಗೆ ಎಳ್ಳಷ್ಟು ವಿಲಂಬ ಮಾಡತಕ್ಕದ್ದಲ್ಲವೆಂದೂ ಅಭಿಪ್ರಾಯ ಪಡುತ್ತಿದ್ದಾರಲ್ಲದೆ ಈ ಬಗ್ಗೆ ತಕ್ಕ ಪರಿಹಾರೋಪಾಯವನ್ನೂ ಕೂಡಲೆ ಯೋಜಿಸಬೇಕೆಂದು ಒತ್ತಾಯ ಪಡಿಸುತ್ತಾರೆ. ಅದ್ದರಿಂದ ಪಾನನಿರೋಧವು ರಾಷ್ಟ್ರೀಯ ಪುನರ್ನಿರ್ಮಾಣದ ಮತ್ತು ಪುನರ್ನಿರ್ಮಾಣದ ಮುಖ್ಯಾಂಗವೆಂದು ಪರಿಗಣಿಸಲ್ಪಟ್ಟಿದೆ. ಈ ಧೋರಣೆಗನು ಗುಣವಾಗಿ ಈಗಾಗಲೇ ಕಾರ್ಯಾರಂಭವೂ ಆಗಿ ಹೋಗಿದೆ. ಈ ಪ್ರಶ್ನೆಗೆ ಹಳೆಯ ಮುತ್ಸದ್ದಿಗಳ ಹಾಗೂ ಮುಂದಾಳುಗಳೆಲ್ಲರ ಸಂಪೂರ್ಣ ಬೆಂಬಲವೂ ಇದೆ.

ಪಾನನಿರೋಧದಿಂದ ಅನೇಕ ಸಮಸ್ಯೆಗಳು ಉದ್ಭೂತವಾಗಿದ್ದು ಅವುಗಳನ್ನು ಸರಿಯಾಗಿ ಪರಾಮರ್ಶಿಸಿಯೂ ಇಲ್ಲ ಸಮರ್ಪಕವಾಗಿ ಬಿಡಿಸಿಯೂ ಇಲ್ಲ ಎಂದು ಹೇಳಬೇಕಾಗಿದೆ. ದೇಶದ ಇಂದಿನ ಪರಿಸ್ಥಿತಿಯಲ್ಲಿ ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ, ಪುನರುತ್ಥಾನವಾಗುವದು ಅತ್ಯವಶ್ಯವೆಂದು ಬೇರೆ ಹೇಳಬೇಕಾಗಿಲ್ಲ ಇದಕ್ಕೆಲ್ಲ ತುಂಬುಹಂಬಲದ ಯೋಜನೆಗಳು ಸಿದ್ಧಗೊಳಿಸಲ್ಪಟ್ಟಿವೆ. ಪಾನನಿರೋಧದಿಂದ ಉಂಟಾದ ಭೀಕರ ಕೊರತೆಯು ಪ್ರಾಂತಿಕ ಸರಕಾರಗಳನ್ನು ಗೊಂದಲಗೆಡಿಸುವಂತಹದಾಗಿದೆ. ಹಿಂದುಸ್ತಾನದ ಸಾಮಾನ್ಯ ನಾಗರಿಕನ ದಿನದ ಗಳಿಕೆಯ ಪರಿಮಿತಿಯು ತೀರ ಕೀಳ್ಮಟ್ಟದ್ದಿದೆ. ಇಂತಹದರಲ್ಲಿ ಅವನಿಂದ ಹೊಸ ಹೊಸ ಕರಭಾರವನ್ನು ಎಷ್ಟರಮಟ್ಟಿಗೆ ಹೇರ ಬಹುದೆಂಬುದು ವಿಚಾರಾರ್ಹ ವಿಷಯವೇ ಆಗಿದೆ. ಅದಕ್ಕೂ ಒಂದು ಮಿತಿ ಬೇಡವೆ?

ಸಿಂದಿಯ ರಸತೆಗೆಯುವದು, ಅದನ್ನು ಸಾಗಿಸುವದು, ಹಂಚುವದು, ಇವೇ ಮೊದಲಾದ ಕೆಲಸಗಳಲ್ಲಿ ಅನೇಕರು ತೊಡಗಿ ಉದರ ನಿರ್ವಾಹ ಮಾಡಿ ಕೊಳ್ಳುತ್ತಾರಲ್ಲದೆ ಈ ಕೆಲಸಗಳು ಕೆಲ ಸಂದರ್ಭಗಳಲ್ಲಿ ಆನುವಂಶಿಕ ಉದ್ದಿಮೆಗಳಾಗಿ ಪರಿಣಮಿಸಿ ಬಂದಿವೆ. ಇವರು ಈಚಲದಿಂದೂ ತಾಳೆಯ ಮರಗಳಿಂದಲೂ ರಸ ತೆಗೆವ ಕಲೆಯಲ್ಲಿ ಪ್ರಾವೀಣ್ಯ ಪಡೆದವರು ತ್ತಾರೆ. ಇಂತಹರ ಗತಿಯೇನು? ಈ ಮುಷ್ಟಿ ದರಾಲದಿದ್ದಾರೆ, ಹೆಣ್ಣು ಹೆಣ್ಣು ಗುತ್ತಿಗೆದಾರರಿದ್ದಾರೆ, ಆಗುಂಡಿಕಾರರಿದ್ದಾರೆ, ಹಂಚುವವರಿದ್ದಾರೆ ಬಯಸುಷ್ಟರಿದ್ದಾರೆ, ಇವರ ಪರಿಷ್ಟಿತಿ ಗಳನ್ನು ಹೇಗೆ ನೀಗಿಸಬೇಕು? ಸುಸಂಘಟಿತವಾದ ಈ ಸಮಗ್ರ, ಪ್ರಕಾಂಡ ಉದ್ಯೋಗವೇ ನಿರ್ನಾಮವಾಗಲಿದೆ. ಇದರಿಂದ ಲಕ್ಷಾವಧಿ ಜನರು ತಮ್ಮ ಜೀವನಾಧಾರಕ್ಕೆ ಎರವಾಗಿ ಬಿಡುವರು.

ಈಗ ತಂತ್ರಜ್ಞರೂ, ಶಾಸ್ತ್ರಜ್ಞರೂ ಮುಂದೆ ಬರಬೇಕು. ಅವರು ಈ ಬಗ್ಗೆ ಕೂಡಲೇ ಎರಡು ಮಹತ್ಕಾರ್ಯಗಳನ್ನು ಸಾಧಿಸಬೇಕಾಗಿದೆ. ಒಂದೆಂದರೆ, ಪರಂಪರಾಗತವಾಗಿ ಬಂದ ಈ ಉದ್ಯೋಗದ ಸಂಘಟನೆಯು ಕುಸಿಯದಂತೆ ನೋಡಿ ಕೊಳ್ಳಬೇಕು ಹಾಗೂ ಕಾರ್ಯ ಪ್ರವೃತ್ತವಾಗಿರುವಂತೆ ಮಾಡಬೇಕು. ಎರಡನೆಯದಾಗಿ ಸಿಂದಿಯನ್ನು ಸಂಪದುತ್ಪಾದಕವಾದ ಪದಾರ್ಥವಾಗಿ ಹೇಗೆ ಮಾರ್ಪಡಿಸಬಹುದು ಎಂಬುದನ್ನು ಕಂಡು ಹಿಡಿಯಬೇಕು.

ಬಡವರ್ಗದ ಕುಡುಕರು ಸಿಂದಿಯಲ್ಲಿರುವ ಹುಳಿಸುವ ಗುಣಕ್ಕೂ ಅದರಲ್ಲಿರುವ ಮಾದಕತೆಗೂ ಮದ್ಯವನ್ನು ಸೇವಿಸುವದುಂಟು. ಹುಳಿಸದ ರಸಕ್ಕೆ ನೀರಾ ಎನ್ನುತ್ತಾರೆ. ಇದರಲ್ಲಿ ಶರೀರ ಪೋಷಣಕ್ಕೂ ಆರೋಗ್ಯವರ್ಧನಕ್ಕೂ ಅನುಕೂಲವಾದ ಅಮೌಲ್ಯ ಸತ್ವಾಂಶಗಳುಂಟೆಂದು ಪ್ರಾಚೀನ ಕಾಲದಿಂದಲೂ ತಿಳಿದ ಸಂಗತಿ. ಈ ನೀರಾ ರಸವನ್ನು ವೈದ್ಯರು ಪಾಂಡುರೋಗಕ್ಕೂ ಉಷ್ಣ ರೋಗಗಳಿಗೂ ಚಿಕಿತ್ಸೆಯೆಂದೂ ಶಕ್ತಿವರ್ಧಕವೆಂದೂ ಕೊಡುತ್ತ ಬಂದಿದ್ದಾರೆ. ಇದು ಉತ್ಸಾಹವರ್ಧಕ ಪಾನಕವೂ ಆಗಿದೆ. ತಾಳೆಯ ಮತ್ತು ಈಚಲದ ರಸವನ್ನು ಬೆಲ್ಲ ಮಾಡಲೂ ಬಳಸಲಾಗುತ್ತದೆ. ಅದಕ್ಕಾಗಿ ಈ ರಸವನ್ನು ದೊಡ್ಡ ಕೊಪ್ಪರಿಗೆಯಲ್ಲಿ ಹಾಕಿ ಕಾಸುತ್ತಾರೆ. ಹೀಗೆ ಕಾಸಿ ಉಳಿದ ಕಪ್ಪು ಕರಣಿಗಳನ್ನು ವೈದ್ಯರೂ ಹಕೀಮರೂ, ತಮ್ಮ ಅನೇಕ ಬಲವರ್ಧಕ ಔಷಧಗಳಲ್ಲಿ ಮಿಶ್ರ ಮಾಡುವದುಂಟು. ವೈದ್ಯಶಾಸ್ತ್ರದೃಷ್ಟಿಯಿಂದ ಈ ತಾಳೆಯ ಬೆಲ್ಲವು ಕಬ್ಬಿನ ಬೆಲ್ಲಕ್ಕಿಂತಲೂ ಶ್ರೇಷ್ಠವೆಂದು ಪರಿಗಣಿಸಲಾಗುತ್ತದೆ. ಸಕ್ಕರೆಯನ್ನು ಸಿದ್ಧಗೊಳಿಸಲು ಈ ತಾಳೆಯ ಬೆಲ್ಲವನ್ನು ಈ ಮೊದಲು ಸಾಕಷ್ಟು ಪ್ರಮಾಣದಲ್ಲಿ ಬಳಸಲಾಗುತ್ತಿತ್ತು. ಪಾನನಿರೋಧದ ಯೋಜನೆ ಅಮಲಿನಲ್ಲಿ ಬಂದಂದಿನಿಂದಂತೂ ಈ ಬೆಲ್ಲವು ಇನ್ನಷ್ಟು ಪ್ರಚುರ ಪ್ರಮಾಣದಲ್ಲಿ ದೊರಕುವಲ್ಲಿ ಸಂದೇಹವಿಲ್ಲ. ಯಾಕಂದರೆ ಪ್ರಾಂತಿಕ ಸರಕಾರಗಳು ಆರ್ಥಿಕ ಅಭಿವೃದ್ಧಿಯ ಒಂದು ಪ್ರತ್ಯಕ್ಷ ಉಪಾಯವೆಂದು ಈಗಾಗಲೇ ತಾಳೆಯ ಬೆಲ್ಲವನ್ನು ದೊಡ್ಡ ಪ್ರಮಾಣದಲ್ಲಿ ಸಿದ್ಧಗೊಳಿಸಲು ಉದ್ಯುಕ್ತವಾಗಿ ಹಾಗೆ ಯೋಜನೆಗಳನ್ನೂ ಸಿದ್ಧಗೊಳಿಸಲಾಗಿದೆ. ಇದನ್ನು ಸಿದ್ಧಗೊಳಿಸಲು ಎಷ್ಟು ವೆಚ್ಚ ತಗಲುತ್ತದೆಂಬ ಬಗ್ಗೆಯೂ ಕಬ್ಬಿನ ಬೆಲ್ಲದೊಡನೆ ಇದು ಸ್ಪರ್ಧೆಗೆ ನಿಲ್ಲಬಹುದೇ ಎಂಬ ಬಗ್ಗೆಯೂ ಸಾಕಷ್ಟು ಲೆಕ್ಕಾಚಾರವಿನ್ನೂ ತಿಳಿದು ಬಂದಿಲ್ಲ.

ಈ ಸಮಸ್ಯೆಯನ್ನು ಅತ್ಯಂತ ಯಶಸ್ವಿಯಾಗಿ ಬಿಡಿಸುವ ರಹಸ್ಯವು, ಹುಳಿಸಿದ ಈ ರಸಕ್ಕೆ ಬರುವ ಬೆಲೆಯು ಇದರಿಂದ ಉತ್ಪಾದಿಸಿದ ವಸ್ತುವಿಗೂ ಬರಬೇಕು ಎಂಬುದರಲ್ಲಿಯೇ ಅಡಗಿದೆ. ಹೀಗೆ ಉತ್ಪಾದಿಸಿದ ಪದಾರ್ಥದಲ್ಲಿ ಸಾಮಾಜಿಕ ಮತ್ತು ವೈಯಕ್ತಿಕ ಜೀವನದ ಅಧೋಗತಿಗೆ ಕಾರಣವಾಗಿರುವ ಮಾದಕತೆ ಮಾತ್ರ ಇರಕೂಡದೆಂಬುದನ್ನು ಮರೆಯಲಾಗದು. ಈ ರಸವನ್ನು ವಿಪುಲ ಜೀವನ ಸತ್ವಗಳಿಂದ ಹಾಗೂ ಇನ್ನಿತರ ಪೋಷಕ ದ್ರವ್ಯಗಳಿಂದ ಕೂಡಿದ ಖಾದ್ಯ ಯೋಗ್ಯಹಳುಕಗಳನ್ನಾಗಿಯೋ ಇಲ್ಲವೇ ಪೆನ್ಸಿಲಿನ್ನಿನಂತಹ ಮಹೌಷಧಿಯನ್ನಾಗಿಯೋ ಮಾರ್ಪಡಿಸಿ ಬಂದರೆ ಬಂಗಾರವೇ. ಈ ರಸದಲ್ಲಿ ೧೦೦ ಕ್ಕೆ ೧೦ ರಿಂದ ೧೫ ರಷ್ಟು ಸಕ್ಕರೆ ಹೊರಡುವದರಿಂದ ಸಿಟ್ರಿಕ್ ಮತ್ತು ಲ್ಯಾಕ್ಟಿಕ್ ಎಸಿಡ್‌ಗಳ ಉಪಯೋಗವಿರುವ ಹಾಗೂ ಹುಳಿಸಿ ಸಿದ್ಧಗೊಳಿಸಬಹುದಾದ ಎಷ್ಟೋ ಉದ್ಯೋಗಗಳಿಗೆ ಇದು ಅತ್ಯಮೌಲ್ಯ ಕಚ್ಚಾವಸ್ತುವಾಗಬಲ್ಲದು. ಈ ರಸದಿಂದ ಮುಂದೆ ಅದಾವುದೇ ಪದಾರ್ಥ ಸಿದ್ಧವಾಗಲಿ, ಕೈಕೊಳ್ಳುವಂತಹ ಎರಡು ದೊಡ್ಡ ತೊಡಕುಗಳು ನಮ್ಮೆದುರು ಬಂದು ನಿಲ್ಲುತ್ತವೆ. ಮೊದಲನೆಯ ಅಂತಕವೆಂದರೆ, ಸಿಂದಿಯ ರಸವು ಅತಿ ಶೀಘ್ರವಾಗಿ ಹುಳಿಸಹತ್ತುತ್ತದೆ ಎಂಬುದು. ಇದು ಅದರ ಸ್ವಭಾವಸಿದ್ಧ ಗುಣವೇ ಆಗಿದೆ. ಇನ್ನೊಂದೆಂದರೆ ಈಚಲದ ಹಾಗೂ ತಾಳೆಯ ಗಿಡಗಳು ವ್ಯವಸ್ಥಿತವಾಗಿ ಒಂದು ಸಾಲಾಗಿಯೋ ಗುಂಪಾಗಿಯೋ ಬೆಳೆಸಿದವುಗಳಲ್ಲ ಅವು ಸ್ವಾಭಾವಿಕ ಬೆಳೆದು ಅಲ್ಲಿ ಇಲ್ಲಿ ಹರಡಿಕೊಂಡಿರುವವಲ್ಲದೆ ಒಂದೆಡೆಯ ಸಲ ಅವುಗಳಲ್ಲಿಗೆ ಹೋಗುವದು ಕೂಡ ಸುಲಭಸಾಧ್ಯವಾಗಿರುವದಿಲ್ಲ. ಈ ಗಿಡಗಳು ಬೆಳೆದ ಪ್ರದೇಶ ಒಂದು ಪದ್ಧತಿಗನುಗುಣವಾಗಿ ನಿಯಮಬದ್ಧವಾಗಿ ಹಬ್ಬಿಲ್ಲ. ಈ ಗಿಡಗಳ ಪರಿಸ್ಥಿತಿಯ ಮೂಲಕ ಈ ಗಿಡಗಳಿಗೆ ಕಚ್ಚು ಹಾಕುವದು, ರಸ ಶೇಖರಿಸುವದು, ಸ್ಥಳದಿಂದ ಸ್ಥಳಕ್ಕೆ ಸಾಗಿಸುವದು ಇವೆಲ್ಲಕ್ಕೂ ಬಹಳ ಶ್ರಮಪಡಬೇಕಾಗುವದಲ್ಲದೆ ಪ್ರಮಾಣ ಮೀರಿ ಕಾಲವ್ಯಯವನ್ನೂ ಮಾಡಬೇಕಾಗುವದು ಮತ್ತು ಧನವ್ಯಯವನ್ನೂ ಮಾಡಬೇಕಾಗುವದು.

ಹೀಗೆ ಈ ರಸವನ್ನು ಅತಿ ವಿಸ್ತಾರವಾದ ಹಾಗೂ ಅಸ್ತಿತ್ವ ಚದುರಿಹೋದ ಪ್ರದೇಶಗಳಿಂದ ಅದು ಕೆಡುವ ಮೊದಲೇ ಕೂಡಿಸಿ ಒಂದು ಕೇಂದ್ರವರ್ತಿಯಾದ ಸ್ಥಳಕ್ಕೆ ಸಾಗಿಸುವ ಬಗ್ಗೆಯೂ ಆ ಮೇಲೆ ಅಲ್ಲಿ ಆ ರಸವನ್ನು ರಾಸಾಯನಿಕ ಪದ್ಧತಿಯಿಂದ ಬಾಳಿಕೆ ಬರುವಂತೆ ಮಾರ್ಪಡಿಸುವ ಬಗ್ಗೆಯೂ ಶಾಸ್ತ್ರಜ್ಞರೂ ತಾಂತ್ರಿಕ ತಜ್ಞರೂ ಕೂಡಲೆ ಸಂಶೋಧನೆ ನಡೆಸಬೇಕಾಗಿದೆ. ಬೌದ್ಧಿಕವಾಗಿಯಲ್ಲದೆ ಈ ಸಮಸ್ಯೆ ಸಮರ್ಪಕವಾಗಿ ಬಗೆಹರಿಯದು. ಈ ರಸದಲ್ಲಿದ್ದ ಸತ್ವಗಳನ್ನೂ ಒಳ್ಳೆಯ ಗುಣಗಳನ್ನೂ ಕೆಡಿಸದೆ ಇದು ಈಗಿನಕಿಂತ ಹೆಚ್ಚು ಕಾಲ ನೈಸರ್ಗಿಕ ಸ್ಥಿತಿಯಲ್ಲಿ ಉಳಿವಂತೆ ಮತ್ತು ಹುಳಿಸದಂತೆ ಉಪಾಯ ಹುಡುಕಿಕೊಟ್ಟವರಿಗೆ ೧೦ ಸಾವಿರ ರೂಪಾಯಿಗಳ ಬಹುಮಾನ ಕೊಡುವದಾಗಿ ಇತ್ತೀಚೆ ಮುಂಬಯಿ ಸರಕಾರವು ಸಾರಿದೆ.

ಈ ಬಗ್ಗೆ ಹೊಸದಿಲ್ಲಿಯ ಕೃಷಿಸಂಶೋಧನ ಸಂಸ್ಥೆಯಲ್ಲಿಯೂ ಬೆಂಗಳೂರಲ್ಲಿಯ ಭಾರತ ಸಂಶೋಧನ ಸಂಸ್ಥೆಯಲ್ಲಿಯೂ ಈಗಾಗಲೇ ರಭಸದ ಪ್ರಯೋಗಗಳು ನಡೆದಿವೆಯೆಂದು ತಿಳಿಯುತ್ತದೆ. ಅದೇ ತೆಗೆದ ಮತ್ತು ಜೋಪಾನವಾಗಿ ಶೇಖರಿಸಿದ ನೀರಾರಸದಲ್ಲಿ ಬಿ ಗುಂಪಿನ ಜೀವನ ಸತ್ವಗಳ ಅಂಶಗಳು ವಿಪುಲ ಪ್ರಮಾಣದಲ್ಲಿರುವವೆಂದೂ ರೋಗೋತ್ಪಾಟನಕ್ಕೂ ಪೋಷಣೆಗೂ ಇವು "ಮೂಲ್ಯ" ಸತ್ವಕ್ಕೆ ಸಂಗಟ್ಟುವಂತಿವೆಯೆಂದೂ ಬೆಂಗಳೂರ ಸಂಶೋಧನೆಯಿಂದ ತಿಳಿದುಬಂದಿದೆ. ಈ ಪ್ರಾಸ್ತಾವಿಕ ಸಂಶೋಧನದಿಂದ ನೀರಾ ರಸವು ಆರೋಗ್ಯದಾಯಕ ಪೇಯವೆಂದು ಪ್ರಾಚೀನ ಕಾಲದಿಂದಲೂ ಇದ್ದ ನಂಬುಗೆಗೆ ಇನ್ನಷ್ಟು ಪುಷ್ಟಿ ದೊರಕಿದೆ. ಆರ್ಥಿಕ ದೃಷ್ಟಿಯಿಂದಲೂ ಈ ರಸವನ್ನು ಅತ್ಯಂತ ಲಾಭಪ್ರದವಾಗಿ ಮಾಡಬಹುದೆಂಬ ಹೊಸಪ್ರಯೋಗಗಳನ್ನೂ ಸಿದ್ಧಾಂತಗಳನ್ನೂ ಈ ಸಂಶೋಧನೆಗಳು ಕೊಡಬಹುದೆಂದು ನಿರೀಕ್ಷಿಸಲಾಗಿದೆ.

ಈ ಸಮಸ್ಯೆಯ ಒಂದು ಅಂಗವನ್ನು ಮಾತ್ರ ಹೆಚ್ಚು ವಿಶದವಾಗಿ ಸಮಾಲೋಚಿಸುವ ತಕ್ಕುದಾಗಿದೆ.. ತಾಳೆಯ ರಸವು ಸಕ್ಕರೆಯ ತಯಾರಿಕೆಗೆ ಒಳ್ಳೇ ಅನುಕೂಲ ಕಚ್ಚಾವಸ್ತುವಾಗಿದೆಯಲ್ಲದೆ ಕೆಲವೊಂದು ಅನಿರೀಕ್ಷಿತ ಸೌಕರ್ಯಗಳನ್ನೂ ಈ ವಸ್ತುವು ಒದಗಿಸುವಂತಿದೆ. ಮೊದಲನೆಯದಾಗಿ, ಕಬ್ಬಿನ ಸಕ್ಕರೆಯ ತಯಾರಿಕೆಗೆ ಬೇಕಾಗುವ ಬಹು ಬೆಲೆಯ ಕಬ್ಬು ಹಿಂಡುವ ಯಂತ್ರವು ಅದರ ಸಿಬ್ಬಂದಿಯೂ ತಾಳೆಯ ರಸದಿಂದ ಸಕ್ಕರೆ ತಯಾರಿಸಲು ಬೇಕಾಗುವದಿಲ್ಲ. ತಾಳೆಯ ರಸವು ಗಿಡಕ್ಕೆ ಸರಿಯಾಗಿ ಕಚ್ಚು ಹಾಕುವದರಿಂದಲೇ ಉಂಟಾಗುವದರಿಂದ ಈ ಕೆಲಸಕ್ಕೆ ನುರಿತ ಒಳ್ಳೆ ನಿಪುಣರೇ ಬೇಕೆಂಬುದೇನೋ ನಿಜ. ಎರಡನೆಯದಾಗಿ ಈ ರಸವು ಸ್ವಾಭಾವಿಕವಾಗಿಯೇ ಸಾಕಷ್ಟು ಸ್ವಚ್ಛವೂ ಅದಾವುದೇ ಬಗೆಯ ಮಲಿನ ವರ್ಣಕಣಗಳಿಂದ ವಿರಹಿತವೂ ಇದ್ದುದರಿಂದ ಇದರ ಶುದ್ಧೀಕರಣದ ವಿಧಾನವು ಬಹು ಸುಲಭವಾಗಿಬಿಡುವದು. ಮೂರನೆಯದಾಗಿ, ಈ ರಸದಲ್ಲಿ ಸಕ್ಕರೆಯ ವಿಪರ್ಯಾಸ ಉತ್ಸೇಚಕ ಕಣಗಳು (Inverting enzymes) ಇಲ್ಲದಿರುವದರಿಂದ ಕಾಕಂಬಿಯ ಕೆಲಸವನ್ನು ತಗ್ಗಿಸುತ್ತದೆ. ನಾಲ್ಕನೆಯದಾಗಿ, ಕಬ್ಬಿನ ಸಕ್ಕರೆಗೆ ಪ್ರತಿವರ್ಷವೂ ಕಬ್ಬು ಬೆಳೆಯಲು ತಗಲುವ ವೆಚ್ಚವಾವುದೂ ಈ ತಾಳೆಯ ಹಾಗೂ ಈಚಲದ ಬೆಳೆಗಾಗಿ ತಗಲುವದಿಲ್ಲ. ಈ ತಾಳೆಯ ಜಾತಿಯ ಗಿಡಗಳ ಬೆಳೆಯೊಂದು ಇಂದು ನಮಗೆ ಪ್ರಕೃತಿದೇವಿಯು ವಿನಾಮೂಲ್ಯವಾಗಿ ದಯಪಾಲಿಸಿದ ವಿಪುಲ ವರದಾನವೇ ಸರಿ. ಈ ಗಿಡವು ದುರ್ಲಕ್ಷಿಸಲ್ಪಟ್ಟ ಸುರು ಪ್ರದೇಶದಲ್ಲಿಯೂ ತಾನಾಗಿ ಬೆಳೆದು ೬೦-೭೦ ವರ್ಷಗಳ ವರೆಗೂ ಸ್ವಾದಿಷ್ಟ ರಸವನ್ನು ಸುರಿಸುತ್ತದೆ. ಇಷ್ಟಿಷ್ಟು ಜೋಪಾನವಾಗಿ ಅದನ್ನು ನೋಡಿಕೊಂಡರೆ ತಾಳೆಯ ಜೀವನವು ಇನ್ನಷ್ಟು ದೀರ್ಘವೂ ಫಲಪ್ರದವೂ ಆಗುವದರಲ್ಲಿ ಸಂದೇಹವಿಲ್ಲ. ಇವೆಲ್ಲ ಮಾತು ತಾಳೆಯು ಸತತವಾಗಿ ಶರ್ಕರಾ ದಾನಮಾಡುವ ಒಂದು ಅಮೌಲ್ಯ ವೃಕ್ಷವೆಂದು ಕಂಡು ಬಂದ ಆ ಮೇಲೆ ಸಮಾಲೋಚಿಸತಕ್ಕಂತಹದೇ ಸರಿ.

ಒಂದು ಸೋಜಿಗದ ಸಂಗತಿಯೆಂದರೆ, ೧೯೦೮ ರಲ್ಲಿಯೆ, ಖಾಂಡ್ಸಾ ಸಕ್ಕರೆಯ ಕಾರಖಾನೆಯೆಂಬ (ದಿ ಖಾಂಡ್ಸಾ ಸುಗರ ವರ್ಕ್ಸ್ ಫ್ಯಾಕ್ಟರಿಂಗ ಕಂ.) ಒಂದು ಸಂಸ್ಥೆಯು ಮದ್ರಾಸ ಪ್ರಾಂತದಲ್ಲಿ ತಾಳೆಯಿಂದ ಸಕ್ಕರೆ ತಯಾರಿಸುವ ಉದ್ಯಮಕ್ಕೆ ಪ್ರೋತ್ಸಾಹ ಕೊಡಲು ಯತ್ನಿಸಿತು. ಆದರೆ ಕಾರ್ಯಗಳು ಏಕೆ ಅಯಶಸ್ವಿಯಾದವೆಂಬುದು ತಿಳಿದು ಬಂದಿಲ್ಲ. ಆ ಕಾರಣಗಳನ್ನು ಹುಡುಕಿ ತೆಗೆದರೆ ಈ ಸಂದರ್ಭದಲ್ಲಿ ಮಾರ್ಗದರ್ಶಕವಾಗಬಹುದು. ಪ್ರತಿಯೊಂದು ಗಿಡದಿಂದ ಪ್ರತಿ ವರ್ಷ ಎಷ್ಟು ರಸ ಹೊರಡುವದೆಂಬ ಬಗ್ಗೆ ನಿಶ್ಚಿತ ಅಂಕೆ ಸಂಖ್ಯೆ ಗೊತ್ತಾಗಿಲ್ಲ. ಸರಿಯಾಗಿ ಪೋಷಣೆ ಹೊಂದಿದ ಒಂದು ಗಿಡದಿಂದ ಪ್ರತಿ ವರ್ಷ ೧ ಮಣ ಸಕ್ಕರೆ ಸಿದ್ಧಗೊಳಿಸಲು ಸಾಕಾಗುವಷ್ಟು ರಸ ಹೊರಡುವದೆಂದು ಸ್ಥೂಲಮಾನದಿಂದ ಹೇಳಲಾಗುತ್ತಿದೆ. ಈಗಿನ ಪೇಟೆಯ ದರದಂತೆ ೧ ಮಣ ಸಕ್ಕರೆಯ ಬೆಲೆ ೩೦ ರೂಪಾಯಿ ಯಾಗುವದು. ಒಂದು ಎಕರೆ ಭೂಮಿಯಲ್ಲಿ ಸುಮಾರು ೧೦೦ ಗಿಡಗಳನ್ನು ಶಾಸ್ತ್ರೋಕ್ತವಾಗಿ ಬೆಳೆಯಿಸಿದರೆ ಸ್ಥೂಲಮಾನದಿಂದ ೩೦೦೦ ರೂ. ವಾರ್ಷಿಕ ವರಮಾನ ಬರಬಹುದು. ಇಷ್ಟು ಉತ್ಪನ್ನವೆಂದರೆ ನಿಜವಾಗಿಯೂ ಅದ್ಭುತವೇ ಸರಿ. ಅಂಕೆ ಸಂಖ್ಯೆಗಳ ಸತ್ಯಾಸತ್ಯತೆಯನ್ನು ಸೋಸಿ ನೋಡಬೇಕೇನೊ ನಿಜ. ಆದರೆ ಈ ಉದ್ದಿಮೆಯಲ್ಲಿ ಬೇಕಾದಷ್ಟು ಧನೋತ್ಪಾದನೆಯಾಗಬಲ್ಲದೆಂಬ ಅಂಶವನ್ನು ಅಲ್ಲಗಳೆಯಲು ಬಾರದು. ಒಳ್ಳೆ ಹಿಡಿತದಿಂದ ಲೆಕ್ಕ ಹಾಕಿದರೂ ನಮ್ಮ ದೇಶದಲ್ಲಿ ೪ ಕೋಟಿ ತಾಳೆಯಮರ ಮತ್ತು ಈಚಲಮರಗಳಿವೆಯೆಂದು ತಿಳಿದು ಬಂದಿದೆ. ಈ ನೈಸರ್ಗಿಕ ಸಂಪತ್ತನ್ನು ಸೂರೆಗೊಳ್ಳದೆ ಹಾಗೇ ಹಾಳುಗೆಡಹ ಕೂಡದು. ಸ್ವಯಂಭುವಾದ ಮತ್ತು ಸತತ ರಸಧಾರೆಯನ್ನು ಸುರಿಸುವ ಈ ನಿಸರ್ಗದ ಸಂಪತ್ತನ್ನು ಹೇಗೆ ಧನೋತ್ಪಾದಕವಾಗಿ ಮಾಡಬೇಕೆಂಬ ಬಗ್ಗೆ ಪ್ರಾಂತಿಕ ಸರಕಾರಗಳು ಒಂದು ಕೇಂದ್ರ ಸಲಹೆ ಸಮಿತಿಯನ್ನು ರಚಿಸಬೇಕೆಂದು ನಾವು ಆಗ್ರಹಪೂರ್ವಕವಾಗಿ ಸೂಚಿಸ ಬಯಸುತ್ತೇವೆ. ಪಾನ ನಿರೋಧದಿಂದ ಅನೇಕರಿಗೆ ಒದಗುವ ನಿರುದ್ಯೋಗವನ್ನು ತೊಲಗಿಸಿ ಈ ಸರಕಿನ ಈಗಿನ ವ್ಯಾಪಾರ ಸಂಘಟನೆ ಇನ್ನಷ್ಟು ಅಧುನಿಕವಾಗುವಂತೆಯೂ ಈ ಸಮಿತಿಯು ನೋಡಿಕೊಳ್ಳಬೇಕೆಂದು ಸೂಚಿಸ ಬಯಸುತ್ತೇವೆ.

['ಕರಂಟ ಸಾಯಿನ್ಸ' ಎಂಬ ಪತ್ರಿಕೆಯ ಸಪ್ಟೆಂಬರ ೧೯೪೮ ರ ಸಂಪಾದಕೀಯ]

(೯ ನೇ ಪುಟದಿಂದ)

ಹೇಳಬಹುದು. ಅಂದರೆ ಎಲ್ಲರ ಕಲ್ಯಾಣವೆಂದೇ ಅದರ ಅರ್ಥ. ಅದು ಸ್ವಯಂವಿಹಿತವಾಗದಿದ್ದರೆ ಲೋಕಾನುವರ್ತಿ ಸರಕಾರಗಳು ಅದನ್ನು ಹೇರಲು ಪ್ರಯತ್ನಿಸುವವು. ಅವರಿಗೆ ಅನ್ಯ ಮಾರ್ಗವೇ ಉಳಿಯುವದಿಲ್ಲ. ಸರಕಾರದ ನಿಯಂತ್ರಣವನ್ನು ಕಿತ್ತೊಗೆಯಬೇಕಾದರೆ ನಾವೆಲ್ಲ ಆತ್ಮಸಂಯಮಿಗಳಾಗಲು ನಿರ್ಧರಿಸುವಾ—

ಮುಂಬಯಿ

೧೧—೧೧—೪೮ ಕಿ. ಘ. ಮಶ್ರೂವಾಲಾ

ಭಾಷಾನುಗುಣ ಪ್ರಾಂತರಚನೆಯ ಬಗ್ಗೆ

ದರ್ ಸಮಿತಿಯ ಅಭಿಪ್ರಾಯ?

ದರ್ ಸಮಿತಿಯವರು ಭಾಷಾನುಗುಣ ಪ್ರಾಂತರಚನೆಯ ಬಗ್ಗೆ ಅನುಕೂಲಾಭಿಪ್ರಾಯ ಉಳ್ಳವರಾಗಿದ್ದಾರೆಂದೂ ಆದರೆ ವಿವಿಧ ಪ್ರಾಂತಗಳಲ್ಲೆಲ್ಲ ಸರಕಾರಿ ಭಾಷೆ ಮಾತ್ರ ಒಂದೇ ಇರಬೇಕೆಂದೂ ಸೂಚಿಸಲಿದ್ದಾರೆಂದೂ ತಿಳಿಯುತ್ತದೆ. ಈ ಸಮಿತಿಯ ಅಭಿಪ್ರಾಯವೇನೇ ಇದ್ದರೂ ಹಿಂದುಸ್ತಾನದ ಪ್ರಚಲಿತ ಪರಿಸ್ಥಿತಿಯ ಮೂಲಕ ಸರಕಾರವು ಆಡಳಿತದ ಈ ಸ್ಥಿತ್ಯಂತರವನ್ನು ಬೇಗ ಮಾಡಲಿಕ್ಕಿಲ್ಲವೆಂದು ಊಹಿಸಲಾಗಿದೆ.

ರೂಪರಂಗ

ದೊಡ್ಡ ದಡ್ಡರು

ಬಾಲ್ಯದಲ್ಲಿ ನೆಪೋಲಿಯನ್ನನು ಅವನ ವರ್ಗದಲ್ಲಿ ೪೨ ನೆಯವನಾಗಿದ್ದನು. ಅಂದರೆ ನೀವೇ ತಿಳಿದುಕೊಳ್ಳಬಹುದು ಅವನ ಬುದ್ಧಿಪ್ರಮಾಣವೆಷ್ಟೆಂಬುವದನ್ನು! ರಾಬರ್ಟ್ ಕ್ಲೈವನಂತೂ ಶತದಡ್ಡನಿದ್ದನಂತೆ; ಮೃತ್ಪಿಂಡ ಬುದ್ಧಿ ಎಂದು ಉಪಾಧ್ಯಾಯರು ಅವನನ್ನು ಹಳಿಯುತ್ತಿದ್ದರು!

ನ್ಯೂಟನ್ನನ ಕಥೆಯೇನು ಗೊತ್ತೇ? ಓದುವುದಕ್ಕೂ ಅವನಿಗೂ ಎಣ್ಣೆಸೀಗೆಯ ಸ್ನೇಹ. ಜ್ಯಾಮಿತಿಯೆಂದರೆ ಅವನಿಗೆ ವಿಷ ಹಾಗಲು ಪಲ್ಯ. ಅವನ ವರ್ಗದಲ್ಲಿ ಅವನ, ಉಪಾಂತ್ಯ ಶಿಷ್ಯ. ಆದರೆ ಕಡೆಗೆ? ಅವನು ಜಗತ್ಪ್ರಸಿದ್ಧ ವಿಜ್ಞಾನಿ! ಶೇಕ್ಸ್‌ಪಿಯರ್ ಶಾಲೆಗೆ ಚಕ್ಕರ ಹೊಡೆಯುವುದರಲ್ಲಿ ನಿಸ್ಸೀಮನಂತೆ. ಗ್ರೀಕ್ ಮತ್ತು ಲ್ಯಾಟಿನ್ನೆಂಬ ಐರೋಪ್ಯ ಅಭಿಜಾತ ಭಾಷೆಗಳು ಅವನ ಪಾಲಿಗೆ ಕಬ್ಬಿಣದ ಕಡಲೆಗಳು. ಗೋಲ್ಡ್‌ಸ್ಮಿತ್ತೆಂಬ ಮಹಾಸಾಹಿತಿಯಾದರೂ ಹೀಗೇ. ಬಾಲ್ಯದಲ್ಲಿ ಶಿಕ್ಷಕರ ಬುದ್ಧಿಗೆ ಶಿಕ್ಷೆ ಕೊಡುವ ಗೋರ್ಕಲ್ಲೇ ಆಗಿದ್ದನು.

ಶೆಲ್ಲಿಯೇನು ಹೆಚ್ಚಿನವನಿದ್ದನೆ? [illegible] ವಿಶ್ವವಿದ್ಯಾಲಯದಲ್ಲಿ ಪರೀಕ್ಷೆಗೆ [illegible] ಅವನ [illegible] "[illegible]" ಅಂತ [illegible] ಕೊಟ್ಟರು. ಅವನು [illegible] ನೋಡಿಯುವನಿದ್ದ [illegible] ಮಾಡುತ್ತಿದ್ದರು. "[illegible]" ಎನ್ನುತ್ತಿದ್ದರು ಬೇರೆ ಅವನನ್ನು? ಆದರೆ ಕಡೆಗವನು ಜಗತ್ಪ್ರಸಿದ್ಧ ಕವೀಶ್ವರನಾದ. ನಿಜವಾಗಿ ದಡ್ಡರಿಗೆಲ್ಲ ಇಂಥ ಮಹಾಕವಿ [illegible] ತಮ್ಮಂತೆಯೇ ಇದ್ದನೆಂಬುದು [illegible] ಎಷ್ಟು ಹೆಮ್ಮೆಯುಂಟಾಗಬಹುದು! ಸುಪ್ರಸಿದ್ಧ ಆಂಗ್ಲ ಪಾಗ್ಮಿಯೆನಿಸಿದ ಶೆರಿಡನನ ಕತೆಯೇನು? ಶಿಕ್ಷಕರು ಇವನನ್ನು ತಿದ್ದುವುದೇ ಅಸಾಧ್ಯವೆಂದು ಮನೆಗಟ್ಟಿದರು ಶಾಲೆಯಿಂದ. ಜಾರ್ಜ ಇಲಿಯೆಟ್ಟೆಂಬ ಲೇಖಿಕೆಯಾದರೂ ಹಾಗೇ ಅವಳಿಗೆ ಓದುವುದೆಂದರೆ ಹಿಮಾಲಯ ಪರ್ವತವನ್ನು ಹತ್ತಿದಂತೆ ಹಾಗಾಗುತ್ತಿತ್ತು. 'ನುಸುರಿ ತೊಳೆ ಹೋಗು' ಎಂದು ಶಿಕ್ಷಕರು ಅವಳನ್ನು ಬೈದಿದ್ದರು. ಕೊನೆಗೆ ಅವಳು ರಸಿಕ ಲೋಕದ [illegible] ಪಾತ್ರಳಾಗಿ ಅವಳ ದಡ್ಡತನ ಮರೆತು ಹೋಯಿತು. ಎಮರ್ಸನ್ನನಿಗೆ ಲೆಕ್ಕವೇ ಬರುತ್ತಿರಲಿಲ್ಲ. ಎತ್ತಣೋ ಧ್ಯಾನ, ಎಲ್ಲಿಯೋ ಮನಸ್ಸು [illegible] ಆಗಿತ್ತು ಅವನ ತಲೆ. ಅವನ ನಿಸ್ಮರಣಶಕ್ತಿ ಅದ್ಭುತವಾಗಿತ್ತು. ಅವನು ಪ್ರಸಿದ್ಧ ಲೇಖಕನಾದ ಮೇಲೂ [illegible] ಅವನ ಗೆಳೆಯನೊಬ್ಬ ಸತ್ತಾಗ ಹೃದಯದ ಪ್ರವಕವಾಣಿಯಿಂದ ಭಾಷಣ ಮಾಡಿದರೂ ಕಡೆಯಲ್ಲಿ ಅವನ ಹೆಸರೇ ಮರೆತು ಹೋಗಿ ಭಾಷಣ ಮುಗಿಸುವಾಗ ಬಹಳ ಪೇಚಾಡಿಬಿಟ್ಟ! ಅನಟೋಲ್ ಫ್ರಾನ್ಸನಿಗೆ ಪರೀಕ್ಷೆಯೆಂದರೆ, ಅಗ್ನಿಪರೀಕ್ಷೆಯೇ ಆಗಿತ್ತಂತೆ. ಒಂದರಲ್ಲೂ ಅವನು ಮೊದಲ ಬಾರಿಗೆ ಉತ್ತೀರ್ಣನಾಗಲಿಲ್ಲ.

ವಿಜ್ಞಾನಿಗಳಲ್ಲಿ ಕೇಳಿರಿ; ಬೇಕಾದರೆ ಅವರಲ್ಲೂ ಇದೇ ಹಾಡು. ಉಗಿಯಂತ್ರ ನಿರ್ಮಿಸಿದ ಜೇಮ್ಸ್‌ವ್ಯಾಟನು ವರ್ಗದಲ್ಲಿ 'ಢ' ಆಗಿದ್ದನು. "ಅಂದರೆ ಕೋ ಅನ್ನಲು ಬರುತ್ತಿರಲಿಲ್ಲ ಶುದ್ಧ ವಿದ್ಯಾವಿಹೀನಃ ಪಶುಃ" ಆಗಿದ್ದ. ಅವನಿಗೆ ಸೋಮಾರಿ ರಾಜ ಎಂದರೆ ಒಪ್ಪುತ್ತಿತ್ತು. ಮಾತೇ ಬಾರದು ಅವನಿಗೆ. ಯಾವಾಗಲೂ ಚಹದ ತಪ್ಪಲಿಯಲ್ಲಿ ನೀರು ಕುದಿಯುವುದನ್ನು ಅದರ ಮುಚ್ಚಳ ಗಡಬಡಿಸುವುದನ್ನು ನೋಡುವುದೇ ಅವನ ನಿತ್ಯೋದ್ಯೋಗವಾಗಿತ್ತಂತೆ ಆದರೆ ಅದೇ ಮುಂದೆ ಅವನ ವಿಜ್ಞಾನ ಪ್ರತಿಭೆಗೆ ಸ್ಫೂರ್ತಿ ಕೊಟ್ಟಿತು. ಅಜ್ಞಾನಿ ಶಿರೋಮಣಿಯೆನಿಸಿದ್ದ ಮೊದಲು ಎಡಿಸನ್. ಕಡೆಗೆ ಅವನು ತಿಳಿಯದ ವೈಜ್ಞಾನಿಕ ವಿಚಾರವೇ ಇಲ್ಲವೆಂದು ಹೊಗಳಿಸಿಕೊಂಡನು. ಐನ್‌ಸ್ಟೀನ್ ಎಂಬ ವಿಜ್ಞಾನ ಸಮ್ರಾಟನ ಹೆಸರನ್ನು ಕೇಳದವರಿರಲಾರರು. ಅಣುಶಕ್ತಿ ಪಿತಾಮಹನವನು ಅಂಥವನು ಬಾಲ್ಯದಲ್ಲಿ ಮಾತುಬರದ ಜಡಭರತನಾಗಿದ್ದ. ಈಗ ಅವನ Theory of Relativity– ತಾರತಮ್ಯವಾದವನ್ನು ಜಗತ್ತಿನಲ್ಲಿ ಹನ್ನೆರಡು ಜನರು ಮಾತ್ರ ಅರ್ಥ ಮಾಡಿಕೊಂಡಿದ್ದಾರೆ. ಆದರೆ ವಿವರಣದ ಬಗ್ಗೆ ೯೦೦ ಪುಸ್ತಕಗಳನ್ನು ಬರೆಯಲಾಗಿದ್ದರೂ ಜಗತ್ತಿನಲ್ಲಿ ಅದು ವಿದ್ವದೌಷಧವೆನಿಸಿದೆ. ಚರ್ಚಿಲ್ ಮಹಾಶಯರು, ವಲ್ಲಭಭಾಯಿ ಪಟೇಲರು, ಸರ್ ಸಿ. ವೈ. ಚಿಂತಾಮಣಿ ಮುಂತಾದ ಮುಖಂಡರ ಬಾಲ್ಯದ ಪ್ರತಾಪವಾದರೂ ಇದೇ ಮಾದರಿಯದಿತ್ತು. 'ಚಳಿಯಿಸಲಮರಾಚಳವಂ ಕುಳುಂಕಲಂಭೋ ನಿಧಾನಮಂ, ಹೊರಟ ವೀರರೆನಿಸಿದವರು ಕಡೆಯಲ್ಲಿ ಅವರು— ದನಗಾಹಿಯೆನಿಸಿದ್ದ ಗೋಪಾಲಕೃಷ್ಣ ಉಪನಿಷತ್ಸಾರ ಬೋಧಕ ಜಗದ್ಗುರುವಾದಂತೆ!

ಈ ಸಮಾಚಾರವನ್ನು ಕೇಳಿ ಹಿಗ್ಗಿ ಹೀರೆಯಾಗುವ "ಬೆಲ್ಲದ ಬಾಡ ಉಪ್ಪಿನ ಕುದಿ" (=ಬೆಪ್ಪ) ಎಂದರೇನೆಂಬುದನ್ನು ಅರಿಯದೆ "ಚಿಕ್ಕನಾಯಕನ ಹಳ್ಳಿಯ ಬೆಳ್ಳಿಯ ಕಪ್ಪ" (=ಚಿಪ್ಪ) ಅರ್ಹರಾದ ಹುಡುಗ ಹುಡುಗಿಯರು ಒಮ್ಮಿಂದೊಮ್ಮೆ "ಓದು ಬರಹ, ಅದರ ಗಿರಹ, ಕೆಲಸವೆಲ್ಲ ವಜಾ" ಎಂದು ಶಾಲೆಗೆ ಚಕ್ಕರ್ ಹೊಡೆಯಲು ಶುರು ಮಾಡಿದರೆ ಬಹಳ ಮೋಸವಾದೀತು. ದಡ್ಡರೆಲ್ಲರೂ ಪ್ರತಿಭಾವಂತರಾಗುವರು ಎಂಬ ತೀರ್ಪಿಗೆ ಅವರು ಬಂದರೆ "ಮೂರ್ಖೋ ಮಮರ್ಖೋ ಗರ್ದಭಶ್ಚೈಕರಾಶಿಃ" ಎಂಬ ಮಾತಿಗೆ ನಿದರ್ಶನವಾದಾರಲ್ಲವೆ? ಆದರೆ ನಮ್ಮಲ್ಲಿಯ ದಡ್ಡರಲ್ಲಿ ಯಾರೂ ಅಷ್ಟು ದಡ್ಡರಲ್ಲವೆಂದು ನನಗೆ ಖಂಡಿತವಾಗಿ ಗೊತ್ತಿದೆ! —ದಡ್ಡರ ಗೆಳೆಯ

ಬ

ರಸಿಕತೆ

Logic is the science of sciences ತರ್ಕಶಾಸ್ತ್ರ ಸರ್ವಶಾಸ್ತ್ರಗಳ ಅಡಿಗಲ್ಲು ಎಂಬಂತೆ ಸಾಹಿತ್ಯವು ಸರ್ವ ಕಲೆಗಳ ನೆಲಗಟ್ಟೆಂಬುದು ಸ್ವತಃಸಿದ್ಧವಾದುದು. ಈ ಮಾತನ್ನು ಅರಿತವರು ತೀರ ವಿರಳವೆಂಬುದು ಅತ್ಯಂತ ಶೋಚನೀಯ. ಉಳಿದ ಕಲೆಗಳೆಲ್ಲ ಕುರುಡು ಅಥವಾ ಮೂಕ ಕಲೆಗಳು; ಅವುಗಳ ಸಾಧನೆಗೆ ಮತ್ತು ಗ್ರಹಣಕ್ಕೆ ಸಾಹಿತ್ಯ ಸಂಸ್ಕಾರ ಅಗತ್ಯ. ಸಾಹಿತ್ಯವು ಬುದ್ಧಿ ಹೃದಯಗಳ ಸಾಮರಸ್ಯದಿಂದ ಜನಿಸಿದ ಕಲೆ. ಸರ್ವಜೀವಿ ಸಹಜವಾದ ಹೃದಯ ಶಕ್ತಿ ಮತ್ತು ಮನುಷ್ಯನಿಗೇ ವಿಶಿಷ್ಟವಾದ ಬುದ್ಧಿಶಕ್ತಿ ಈ ಎರಡರ ವಿಕಾಸವೂ ಸಾಹಿತ್ಯದಲ್ಲಿ, ಸಾಹಿತ್ಯದಿಂದ ಸಾಧಿಸಿದೆ, ಸಾಧಿಸಿಕೊಳ್ಳಬಹುದು. ನವರಸಗಳ ಸ್ಥಾಯಿಗಳ ಕಲ್ಪನಾವಿಲಾಸದ ಜ್ಞಾನ, ವೈವಿಧ್ಯ ಚಮತ್ಕಾರದ ಅಭಿಜ್ಞತೆಯಲ್ಲದೆ ಶಬ್ದ, ಅರ್ಥ, ಧ್ವನಿ, ಭಾವಗಳ ಸೌಂದರ್ಯ ವ್ಯಂಜನಶಕ್ತಿ ಹೃದ್ಗತವಾದ ಹೊರತು ನಿಕ್ಕ ಕಲೆಗಳ ಆರಾಧನೆ ಪೂರ್ಣಸಿದ್ಧಿಯನ್ನು ಕೊಡದು.

ಒಂದು ಗೋವು ಬಹಳ ಸುಂದರವಿರಬಹುದು, ಆದರೆ ಅದಕ್ಕೆ ಕುರೂಪಿಯಾದ [illegible] ಮಾನವನ ರಸಿಕ ಹೃದಯದ ಸೌಂದರ್ಯ ಇರುವುದೇ? ಸುರೂಪ, ಮಧುರ ಸ್ವರ, ಆಕರ್ಷಣೀಯ ಅಂಗವಿನ್ಯಾಸ ಈ ಯಾವುದೂ [illegible] ಪ್ರೇರಣೆಯಿಂದ ಅಂತರ್ಗತವನ್ನು ವ್ಯಕ್ತ ಮಾಡಿದಲ್ಲದೆ ಸಾರ್ಥಕನೆನಿಸಲಾರವು. [illegible]ನಿಲ್ಲದದ್ದೈಹಿಕ ಅಥವಾ ಮಾನಸಿಕ ಕಾರ್ಯ [illegible] ಜಡ, ಅದರಿಂದಲೇ ಅದು ಅರ್ಥಹೀನ; [illegible] ಸುಂದರವಾದುದೆಲ್ಲ ಅದಕ್ಕೇ ಅರ್ಥನಿರುವುದು. ಈ ಜೀವ ಸಂಚಾರ ಕಲೆಗಳಲ್ಲಿ ಕಂಡು ಬರಬೇಕಾದರೆ, ಕಾಣಬೇಕಾದರೆ ಜೀವಕ್ರಿಯೆಗೆ ಕಾರಣವಾದ ಅದನ್ನು ಜ್ಞಾನಜ್ಯೋತಿ ಇರುವುದು ಅವಶ್ಯಕ.

ಇಂದು ಮೈಸೂರು ಸಂಗೀತವೆಂದ ಕೂಡಲೆ ಮೂಕ ಭಕ್ತಿರಸದ ಕೀರ್ತನಗಳು, ಸಿನೆಮವೆಂದ ಕೂಡಲೆ ಹುಡುಗರು ಗೊಂಬೆಯಂತೆ ನಿಲ್ಲುವ ಹುಡುಗಿಯರನ್ನು ಕಾಮಿಸುವ ಶೃಂಗಾರಾಭಾಸ, ನೃತ್ಯವೆಂದರೆ ಕೇವಲ ಹೆಣ್ಣಿನ ಮಾಂಸಖಂಡ ಪ್ರದರ್ಶನ, ಚಿತ್ರವೆಂದರೆ ಹೆಣ್ಣಿನ ಬತ್ತಲೆ ಚಿತ್ರ ಇಷ್ಟಕ್ಕೆ ಬಂದು ನಿಂತಿದೆ ನಮ್ಮ ಕಲಾಭಿಜ್ಞತೆ! ಇದಕ್ಕೆ ರಸಿಕತೆಯೆಂದರೆ ರಸಿಕತೆಯೆಂಬ ಶಬ್ದಕ್ಕೆ ಮೂರ್ಖತೆಯೆಂದು ಶಬ್ದಕೋಶದಲ್ಲಿ ಅರ್ಥ ಬರೆದಿಡಬೇಕಾದೀತು! ಭಾವ ವೈವಿಧ್ಯಗಳು ಸಾತ್ವಿಕ ಕಲ್ಪನೆಯಿಂದ, ಸದಾನಂದಭರ ಹೃದಯದಿಂದ ಹೊರಬೀಳದಲ್ಲಿ ಕಲೆಯೆಲ್ಲಿ ಬಂತು, ರಸಿಕತೆಯೆಲ್ಲಿ ಬಂತು?

ಶೃಂಗಾರ ಬೀಭತ್ಸಗಳನ್ನು ಪ್ರತ್ಯೇಕಿಸಿ ತಿಳಿಯಲಾರದ, ವೀರ ರುದ್ರಭಾವಗಳನ್ನು ಪರಿಚ್ಛೇದಿಸಿ ಆಸ್ವಾದಿಸಲಾರದ ಸಾಮಾಜಿಕರು ಸಂಸ್ಕೃತರು ಹೇಗಾದಾರು? ಶಾಂತತೆಗೂ ಜಡತೆಗೂ, ಪರಾಕ್ರಮಕ್ಕೂ ಕ್ರೌರ್ಯಕ್ಕೂ, ವಿನಯಕ್ಕೂ ದಾಸ್ಯಕ್ಕೂ, ಸಾತ್ವಿಕತೆಗೂ ನಿರ್ವೀರ್ಯತೆಗೂ ಭೇದವಿರುವುದನ್ನು ಅಭಿನಯ, ಸರ್ವಭೇದ, ಮುಖಭಾವ, ಅಂಗಭಂಗಿಗಳಲ್ಲಿ ಗುರುತಿಸಲಾರದ ಪ್ರೇಕ್ಷಕರೇ ಇಂದು ಬಹಳ ಇದನ್ನು ಒಮ್ಮೆ ಕಂಡ ಕವಿ—

> "ಯಾವಕರದ ಮುಳ್ಳುಗಳನು ಕೊಟ್ಟರು
> ಕೊಡು, ಕಮಲಜ, ಅರಸಿಕರೆದುರು—
> ಕವಿತೆಯನೋದುವ ಬಿಡಿಯ ಹಣೆಯಲಿ
> ಬರೆಯದಿರೆಂದೂ ಬರೆಯದಿರು!"

—ಎಂದು ಗೋಳೋ ಎಂದು ಅತ್ತುಬಿಟ್ಟ.

ಅಳಬೇಕಾದ ಕರುಣಾಜನಕ ಸನ್ನಿವೇಶದಲ್ಲಿ ನಗುವುದು, ನಗಬೇಕಾದ ಮೃದುಹಾಸ್ಯದ ಸನ್ನಿವೇಶದಲ್ಲಿ ರೊಚ್ಚಿಗೇಳುವದು ಮುಂತಾದ ಭಾವವಿಕಾರವನ್ನು ಹೊಂದುವ ಸಭಿಕರಿಗೇನು ಹೇಳಬೇಕು? ವಿದ್ಯಾವಂತರೂ ವಸ್ತ್ರಾಭರಣ ಭೂಷಿತರೂ ಧನವಂತರೂ ಎಂಬ ಗೌರವ ಭಾರದಿಂದ ಬದುಕುವ ನಾಗರಿಕರಲ್ಲಿ ಇಂತಹ ಅಸಾತ್ವಿಕ, ಅಸ್ವಾಭಾವಿಕ ಪ್ರತಿಕ್ರಿಯೆಯನ್ನುಂಟುಮಾಡುವ "ಕಲಾದರ್ಶನ"ದ ಆಸಕ್ತಿ ಹೆಚ್ಚಿದ್ದರಿಂದ ನಮ್ಮ ಸಿನೆಮ ಮತ್ತು ನೃತ್ಯಗಳು ಹೀನಕೆಗಿಳಿದು ಅಭಾಸಿಕವೂ ಅಶ್ಲೀಲವೂ ಆಗಿಬಿಟ್ಟವು. ಆದರ್ಶ ಸಾಹಿತ್ಯದ ಪರಿಚಯವಿಲ್ಲದವರೆಂದು ರಸವಿಮರ್ಶಕರೆಂದು ಜನರನ್ನು ಅಡ್ಡ ಹಾದಿಗೆಳೆದ ಪ್ರಯತ್ನ ಮಾಡುವದೂ ಬೇಕಾದಷ್ಟು ನಡೆದಿದೆ– ನಮ್ಮ ತರುಣ ತರುಣಿಯರು ಈ ಕುಜಾಲದಿಂದ ತಪ್ಪಿಸಿಕೊಂಡು ಶುದ್ಧರಾಗಿ ಉಳಿಯುವದು ದುಸ್ಸಾಧ್ಯವಾಗಿದೆ.

ರಸಿಕತೆಯ ಮುಖ್ಯವಾದ ಗುಟ್ಟಿರುವುದು ಔಚಿತ್ಯಜ್ಞತೆಯಲ್ಲಿ. . ಗಂಡಹೆಂಡಿರಾಗಿರದ, ಆಗಲು ಯೋಗ್ಯತೆಯಿರದ ವಿಷಮ ಮತ್ತು ಅನೈತಿಕ ಪ್ರಕೃತಿಯುಳ್ಳ ಸ್ತ್ರೀ ಪುರುಷರ "ಶೃಂಗಾರ" ವನ್ನು ಮೆಚ್ಚುವುದು ರಸಿಕತೆಯೆನಿಸದು. ದುರ್ಬಲ ವ್ಯಕ್ತಿಯನ್ನು ಸಾಕಷ್ಟು ನ್ಯಾಯವಾದ ದೈಹಿಕ ಅಥವಾ ಮಾನಸಿಕ ಕಾರಣಗಳಿಲ್ಲದೆ ಅತಿಯಾಗಿ ಶಿಕ್ಷಿಸುವುದು ಪರಾಕ್ರಮವೆಂದು ತಿಳಿದು ಆನಂದಿಸುವುದು ರಸಿಕತೆಯಲ್ಲ. ಸೋಮಾರಿತನದಿಂದ ಧ್ಯೇಯರಹಿತರಾಗಿ ಬಾಳುವ ಸ್ತ್ರೀ ಪುರುಷರ ಜೀವನಕ್ರಮದಲ್ಲಿ ವಿರಕ್ತಭಾವದ ಶಾಂತಿಯನ್ನು ಕಾಂಬ ಕಣ್ಣು ರಸಿಕರ ಕಣ್ಣಲ್ಲ; ಅತ್ಯಂತ ಅಸಂಭಾವ್ಯವಾದ ಅತಿಮಾನುಷ ಸಾಹಸಗಳನ್ನು ಕಂಡು ಆಶ್ಚರ್ಯವೆಂದು ಆನಂದಿಸುವುದು ರಸಿಕತೆಯೆಂದರೆ ಹುಚ್ಚರಿಗೂ ಮಕ್ಕಳಿಗೂ ಪಿಶಾಚರಿಗೂ ಕುಡುಕರಿಗೂ ರಸಿಕತೆಯಲ್ಲಿ ಅಗ್ರಪೂಜೆ ಸಲ್ಲಿಸಬೇಕಾದೀತು! ಈ ಔಚಿತ್ಯ ಜ್ಞಾನವನ್ನು ಸಂಪಾದಿಸಬೇಕಾದರೆ ಸಾತ್ವಿಕ ಸಂಸ್ಕಾರ ಚಿಕ್ಕಂದಿನಿಂದ ಸಿಕ್ಕಿರಬೇಕು; ಭಾರತೀಯತೆಯೆನಿಸುವ ನಮ್ಮ ಧರ್ಮ ಸಂಸ್ಕಾರ ಹೃದ್ಗತವಾಗಿರಬೇಕು. ಅದೇ ರಸಿಕತೆಯ ಉಸಿರು, ಜೀವನಾಡಿ— ಮಹಾಭಾರತ ರಾಮಾಯಣಗಳೇ ಅದರ ಆಕರ.

—ರಸರಾಜ

ಚಂದಾದಾರರಲ್ಲಿ ವಿನಂತಿ

—೦—

ಯಾವದೆ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆವೆಚ್ಚ ಸಹಿತ (ಚಂದಾ ಹಣ ಮುಂಗಡ)

೧ ವರ್ಷ	[illegible]
೬ ತಿಂಗಳಿಗೆ . . .	೩–೮–೦
೩ „ . . .	೧–೧೨–೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೭ ಆಣೆ ಹೆಚ್ಚಿಗೆ ಬೀಳುವದು.

[illegible]

[illegible] ಗಳಲ್ಲಿ ಜದಕ್ಕೆ [illegible] ಆದ [illegible] ಕೋಟಿಗಳಷ್ಟು [illegible] ಗಿದೆ. [illegible] ಮರಿಯ [illegible] ಭೂಮಿಯಲ್ಲಿ [illegible] ಗುತ್ತದೆ. ಆಕ್ಕಿಯಲ್ಲಿ [illegible] ಜನರು [illegible] ಶಕ್ತಿ ಮತ್ತು ಧನಸಂಚಯದ [illegible] ಜನರಿಗೆ ಭಯಂಕರ ನಷ್ಟವಾಗುವ ರೀತಿಯಲ್ಲಿ ಗಿರಣಿ [illegible] ಮಾಡಲಾಗಿದೆ.

ವಿಶಿಷ್ಟ ಹಿತಸಂಬಂಧವುಳ್ಳವರು ಗ್ರಾಮೋದ್ಯಮಗಳು ಆತ್ಮಾವಲಂಬಿಗಳಾಗಲಾರವೆಂದೂ ಅವು ಗಿರಣಿಗಳೊಡನೆ ಸ್ಪರ್ಧಿಸಲಾರವೆಂದೂ ಬೊಟ್ಟುಮಾಡಿ ತೋರಿಸುವದನ್ನು ಎಂದೂ ಬಿಡತಕ್ಕವರಲ್ಲ. ಅಂಥ ವಿಘ್ನ ಮತ್ತು ಅಡಚಣೆಗಳಿದ್ದರೂ ಆತ್ಮಕಥೆ ಹೇಳಲು [illegible] ಗ್ರಾಮೋದ್ಯಮಗಳು ಬದುಕಿರುವದು ಅಚ್ಚರಿಕರವೇ. ಬೆಲ್ಲದ ಉದ್ಯಮವನ್ನು ಅವರಲ್ಲೊಂದು. ತಿಂದಿ ಬೆಲ್ಲ (ಓಲೆ ಬೆಲ್ಲ) ವನ್ನು ಸುಧಾರಿಸಲು ಸರಕಾರ ಎಷ್ಟು ಹಣ ಖರ್ಚು ಮಾಡಿದೆ ?

ತಾಳೆ, ಖರ್ಜೂರದಂತಹ ಓಲೆಮರಗಳನ್ನು ಬೆಳೆಸಲು ಕಾಳು ಕಡಿ ಬೆಳೆಸುವ ಭೂಮಿ ಅಗತ್ಯವಿಲ್ಲ. ಅವು ಅಪ್ರಯೋಜಕ ಭೂಮಿಯಲ್ಲಿ ಬೆಳೆಯುತ್ತವೆ. ಹೆಂಡ ಇಳಿಸುವ ಕೆಲಸ ಕಳೆದುಕೊಂಡ ನಿರುದ್ಯೋಗಿಗಳಿಗೆ ಅದು ಯೋಗ್ಯ ಕೆಲಸ ಕೊಡಬಲ್ಲುದಾಗಿ ಪಾನನಿರೋಧ ಶ್ರಮಕ್ಕೆ ಒಂದು ಪೂರಕ ಅಂಗವೆನಿಸುವದು.

ಪ್ರಾಂತದ ಸಕ್ಕರೆ ಗಿರಣಿಗಳಿಗೆ [illegible] ಕಬ್ಬಿನ ಮೇಲೆ ಬಂಗಾಲಿ ಮಣ ಒಂದಕ್ಕೆ ೬ ಆಣೆಯಂತೆ ಮುಂಬಯಿ ಸರಕಾರ [illegible] ಹಾಕಲು ಬಯಸುವುದೆಂದು ಹೇಳಲಾಗಿದೆ. ಇದು ಒಂದು ಕೋಟಿ ರೂಪಾಯಿಯಷ್ಟಾಗುವುದೆಂದೂ ಇದನ್ನು ಆ ಉದ್ಯಮವನ್ನು ಅಭಿವೃದ್ಧಿಗೊಳಿಸಲು ಬಳಸಬಹುದೆಂದೂ ತರ್ಕಿಸಲಾಗಿದೆ. ಜನತೆಯನ್ನು ನಷ್ಟಕ್ಕೆ ಗುರಿಮಾಡಿ ಈ ಬಂಡವಾಳಶಾಹಿ ಗಿರಣಿಗಳಿಗೆ ಈ ರೀತಿ [illegible] ರಣೆಯಿಂದ ಗುಟುಕು ಹಾಕುವುದಕ್ಕೆ ಕೊನೆಯೇ ಇಲ್ಲವೇನು? ಅವನ್ನೀಗ ಜನತೆಯ [illegible] ಸ್ವಾವಲಂಬಿಗಳನ್ನಾಗಿ ಮಾಡಿದುವಾಗ ಜನರ ಅನುಕೂಲಕ್ಕಾಗಿ ಇನ್ನೂ ಹೆಚ್ಚು [illegible] ಮಾಡಲು ಬೇಕಾದ ಹಣವನ್ನು ಅವೇ ತೆರುವಂತೆ ಮಾಡಬೇಕು.

ಅತಿಪ್ರಸರಣವನ್ನು ತಡೆಯುವ ಕ್ರಮವೆಂದು ಹಿಂದೀ ಸರಕಾರ ಸಕ್ಕರೆಯ ಬೆಲೆಯನ್ನು ಇಳಿಸಲು ಯೋಚಿಸುತ್ತಿದೆ; ಆದರೆ ಅದರಿಂದ ಗಿರಣಿಗಳ ಲಾಭಕ್ಕೆ ನ್ಯೂನತೆ ಯುಂಟಾಗಬಹುದೆಂಬುದರಿಂದ, [illegible] ಕಲೆಯ ಮೇಲೆ ಆ ಹೊರೆ ಬೀಳದಂತೆ [illegible] ಬೆಲೆಯಲ್ಲಿ ಕಡಿತ ಮಾಡಬಾರದೇಕೆಂದು ಅನ್ನುತ್ತಿದೆಯಂತೆ! "ಇಲ್ಲದವನಿಂದ ಅವನಲ್ಲಿ ಇದ್ದ ಅಲ್ಪಸ್ವಲ್ಪವನ್ನೂ [illegible] ಕೊಡುವುದೇ" ಸರಕಾರದ [illegible] ವಂತೆ ತೋರುತ್ತದೆ.

— ಜೆ. ಸಿ. ಕುಮಾರಪ್ಪ

([illegible] [illegible])

ಸಂಜೀವಿನಿ ಪ್ರಕಾಶನ

ಹುಬ್ಬಳ್ಳಿ

. 'ಉತ್ತರ'ದ ಕರುಣಾಯ '[illegible]' [illegible] [illegible] ರಿಗೂ ರಜಿಸ್ಟರ ಪೋಸ್ಟದಿಂದ [illegible] [illegible] ಬೇಕು [illegible]

ನೈವೇದ್ಯ

[illegible],

[illegible] ಹೊದರವಲ್ಲ; [illegible] ಕೊಳೆ ಕುರೂಪ [illegible] ಈ ಮಾತನ್ನು ತಿಳಿ [illegible] ಗೆಳೆಯುಗೆಳತಿಯು [illegible] ಬಂಗಾರದ [illegible] ಮಾತ್ರಕ್ಕೆ [illegible] ತಿಳಿವವರೇ ಹೆಚ್ಚು [illegible]

[illegible] ಎದುರಿಗೆ ಒಬ್ಬ [illegible] ಮನುವನ್ನೆತ್ತಿಕೊಂಡು [illegible]

[illegible]

—ಮಾವ

ಯುದ್ಧ

[illegible] ಮಾಡುವ ಕೆಲಸಗೆ ಜಗಳ [illegible] ಚಿಕ್ಕವರು [illegible] ಒಳ್ಳೆಯ ಅಥವಾ ಕೆಟ್ಟ ಕೆಲಸ [illegible] ಬಾಳಕಷ್ಟವಾದರೂ ಚಿಕ್ಕವೇ. ಹಾಗೆ [illegible] ಮಾಡುವ ಒಳ್ಳೆಯ [illegible] ಕೆಲಸ [illegible]ದರಿಂದ [illegible] ಸಂತೋಷ ಮತ್ತು [illegible]. ನಾವು ಮತ್ತು ನೀವು ಜಗಳವಾಡಿದರೆ ಅಂಗಿ ಮತ್ತು ಕುಪ್ಪಸಗಳು ಹರಿಯಬಹುದು, [illegible]ಗೂ ಒಂದೆರಡು ಗಾಯಗಳಾಗಬಹುದು; ಆದರೆ ಕಡೆಗೆ ಅವರು ಅದನ್ನೆಲ್ಲ ಮರೆತು ಪುನಃ ಅವನು ತನಗೆ ಕೊಟ್ಟ ತಿನಿಸನ್ನು ಅವಳಿಗೂ ಅವಳು ತನಗೆ ಕೊಟ್ಟ ತಿನಿಸನ್ನು ಅವನಿಗೂ ಕೊಟ್ಟು ಹೆಗಲಮೇಲೆ ಕೈಹಾಕಿಕೊಂಡು ನಗುತ್ತ ಸ್ನೇಹದಿಂದ ಆಡಬಹುದು. ಆದರೆ ದೊಡ್ಡವರ ಜಗಳ ಇಷ್ಟು ಸುಲಭವಲ್ಲ. ಅವರ ಸ್ನೇಹ ಬಹಳ ಕಾಲ ನಿಲ್ಲದು, ಚಿಕ್ಕವರಲ್ಲಾದರೆ ವೈರ ಬಹಳ ಕಾಲ ನಿಲ್ಲದು, ಸ್ನೇಹ ಬಹಳಕಾಲ ನಿಲ್ಲುತ್ತದೆ. ಅದುದ್ದರಿಂದ ದೊಡ್ಡವರಿಗಿಂತ ಚಿಕ್ಕವರೇ ವಾಸಿಯಲ್ಲವೆ? ಖಂಡಿತವಾಗಿ ಹೌದೇ ಹೌದು! ಅದರಿಂದಲೇ ನಮ್ಮಲ್ಲೊಬ್ಬ ಕವಿ ಹೇಳಿದ್ದಾನೆ—

"ಚಿಕ್ಕವರಾಗಿಹ ನರರೇ ಚಿನ್ನ;
ದೊಡ್ಡವರಾದರೆ ಹೊಯ್ವರು ಕನ್ನ!"

ಮಹಾಯುದ್ಧ ಮೊನ್ನೆ ನಡೆಯಿತೆಂದು ದೊಡ್ಡವರು ಮಾತಾಡುವುದನ್ನು ಪತ್ರಿಕೆಗಳಲ್ಲಿ ಬರೆದಿರುವುದನ್ನು ನೀನು ಓದಿರಬಹುದು. ಈ ಮಹಾಯುದ್ಧದಲ್ಲಿ ಕೋಟ್ಯನುಕೋಟಿ ಪ್ರಾಯದ ತರುಣ ತರುಣಿಯರು (ತರುಣಿಯರಿಗಿಂತ ಹೆಚ್ಚಾಗಿ ತರುಣರು) ಸತ್ತರು. ಇದರಿಂದ ಗೆದ್ದ ಮತ್ತು ಸೋತ ರಾಷ್ಟ್ರಗಳೆಲ್ಲಕ್ಕೂ ಬಹಳ ನಷ್ಟವಾಯಿತು. ಆದರೂ ಅಲ್ಲಿಯ ಬುದ್ಧಿವಂತರಿಗೆ ಬುದ್ಧಿ ಬಂದಂತೆ ತೋರುವುದಿಲ್ಲ. ಮಾತಿಗೆ ಮಾತಾಡಿ ಒಬ್ಬರನ್ನೊಬ್ಬರು ಸಮಾಧಾನ ಮಾಡುವ ವಿವೇಕ ಬೆಳೆದಿಲ್ಲ. ಅದಕ್ಕಾಗಿಯೇ ಪ್ರತಿನಿತ್ಯ ಅಮೇರಿಕ ಮತ್ತು ರಶಿಯುಗಳು ಪರಸ್ಪರ ಜೈಪಾಡುತ್ತಲೇ ಇವೆ. ಇಂಥ ಸ್ವಾರ್ಥ ಒಬ್ಬನಿಗಾಗಲಿ, ಒಂದು ದೇಶಕ್ಕಾಗಲಿ ಲಾಭಕ್ಕಿಂತ ನಷ್ಟವನ್ನೇ ತಂದುಕೊಡುತ್ತದೆ. ನಿನಗೆ ಇಂಥ ಸ್ವಾರ್ಥ ಬುದ್ಧಿ ಇಲ್ಲವೇ ಇಲ್ಲ ಎಂಬುದನ್ನು ಬಲ್ಲೆ. ನೀನು ನಿನ್ನಲ್ಲಿರುವದನ್ನು ಬೇರೆಯ ಒಳ್ಳೆಯವರಿಗೆ ಕೊಟ್ಟು ಆ ದೊಡ್ಡ ಗುಣಕ್ಕೆ ಬದಲಾಗಿ ಅವರಿಂದ ೧ಕ್ಕೆ ೧೦ ಪಟ್ಟು ಪಡೆಯುವೆ! ಹೌದೋ ನೋಡು ಒಳ್ಳೆಯವರಿಗೆ ಕೊಟ್ಟು—ನನ್ನ ಮುಗೂ!

—ಅಕ್ಕ

ಸುತ್ತಲೂ ಜನ: ಆದರೂ ಏಕಾಕಿ

(೫ ನೇ ಪುಟದಿಂದ)

ಕೆಲಸ [illegible] ಹೋಗುತ್ತಾನೆ?" ಎಂದು ಹಲ ಗೆಳೆಯರು ಕೇಳುತ್ತಾರೆ. ನನಗೂ ಬಗೆಹರಿಯದಾಗಿದೆ.

ಆನಂದಭವನದ ಕಾಲ

ಅಸಹಕಾರದ ಆ ಹಳೆಯ ಕಾಲದಲ್ಲಿ ಜನತೆಯು ಅಭಾಗ್ಯಮೂರ್ತಿಯಾದ ಜವಾಹರ ಆ ಜನತೆಗಾಗಿ ಆನಂದದಿಂದ ತನ್ನ ರಕ್ತವನ್ನು ಚೆಲ್ಲಲು ಸಿದ್ಧನಾಗಿದ್ದ, ಅವರಾದರೂ ಅವನಿಗಾಗಿ ಜೀವ ಕೊಡಲು ಹಿಂಜರಿಯುತ್ತಿರಲಿಲ್ಲ. ಬಡವ–ಬಲ್ಲಿದ, ರೈತ–ರಾಜರೆಂಬ ಭೇದವಿಲ್ಲದೆ ಬೇಕಾದವರು ಅವನನ್ನು ಕಾಣಬಹುದಾಗಿತ್ತು. ಆನಂದಭವನದ ಹೆಬ್ಬಾಗಿಲಿನಿಂದ ಯಾರೂ ಹೊರದೂಡಲ್ಪಟ್ಟದ್ದಿಲ್ಲ. ಗುರು ಬಾಪೂಜಿಯಂತೆ ಉಪವಾಸ ಪ್ರಾರ್ಥನೆಗಳಲ್ಲಿ ಅವನು ಪ್ರಸಕ್ತನಾಗದಿದ್ದರೂ ನಿಷ್ಠೆಯಿಂದ, ನಿರಾಡಂಬರದಿಂದ ಅವನ ಬಾಳು ಸಾಗಿತ್ತು. ಅವನ ಪೆಟ್ಟಿಗೆಯಲ್ಲಿ ಒಮ್ಮೆಗೆ ಆರು ಅಂಗಿ ಆರು ಧೋತರಗಳಿಗಿಂತ ಹೆಚ್ಚು ಎಂದೂ ಇರುತ್ತಿದ್ದಿಲ್ಲವಾದರೂ ಯಾರಾದರೂ ನಿರ್ಗತಿಕರು ಬಂದರೆ ಅದರಲ್ಲೊಂದನ್ನು ಕೊಟ್ಟುಬಿಡಲು ಯಾವಾಗಲೂ ಅವನು ಸಿದ್ಧನಾಗಿದ್ದ. ಒಕ್ಕಲಿಗರು ಅವನನ್ನು ಕಾಣಲೆಂದು, ತಮ್ಮ ತೊಡಕುಗಳನ್ನು ಕುರಿತು ಕೇಳಲೆಂದು, ದೂರದೂರದಿಂದ ನಡೆದುಕೊಂಡು ಬರುತ್ತಿದ್ದರು. ಅವನು ಅವರ ನಡುವೆ ಹೊರಗೆ ಹುಲ್ಲು ನೆಲದ ಮೇಲೆ ಕುಳಿತು ಅವರ ಮಾತಿನಲ್ಲೆ ಮಾತಾಡಿ, ತನ್ನ ವಾಣಿಯಿಂದಲೂ ನಿರ್ವ್ಯಾಜಸ್ನೇಹದ ಮುಗುಳುನಗೆಯಿಂದಲೂ ಅವರಲ್ಲಿ ಆಶೆಯನ್ನು, ಧೈರ್ಯವನ್ನು ತುಂಬಿ ಕಳಿಸುತ್ತಿದ್ದನು. ಹೀಗಿದ್ದನು ಜನತೆಯ ಹೃದಯವಿಗ್ರಹ, ಅವರ ಅನಭಿಷಿಕ್ತ ಸಮ್ರಾಟ.

ಮುಖ್ಯಮಂತ್ರಿ ಜವಾಹರನಾದರೂ ಅಧಿಕಾರ ಗ್ರಹಣ ಮಾಡಿದೊಡನೆ ಬದಲಾಗಲಿಲ್ಲ. ಹೊಸ ದಿಲ್ಲಿಯ ಯಾರ್ಕ ರೋಡಿನ ಅವನ ನಿವಾಸದ ಬಾಗಿಲಿಂದ ಯಾರೂ ಅಟ್ಟಲ್ಪಟ್ಟವರಿಲ್ಲ. ಅವನ ಒಂದು ಸಕೃದ್ದರ್ಶನಕ್ಕಾಗಿ ಗಂಡಸರು ಹೆಂಗಸರು, ಬಾಲಕರು ಅಲ್ಲಿ ಬಂದು ಮುಸುರಿ ತಾಸುಗಟ್ಟಲೆ ಕಾಯುತ್ತಿದ್ದರು. ಜವಾಹರ ಜನರಲ್ಲಿ ತುಂಬುತ್ತಿದ್ದ ಪ್ರೀತಿವೇಗ ಅಂಥದು. ಆಮೇಲೆ ಬಂತು ಹುಚ್ಚೆದ್ದ ಜನರ ಸಂಹಾರ ಕಾಂಡ. ಆಗ ಜಾತಿಮತವೆನ್ನದೆ ಬಾಲಿಶ ವಿಶ್ವಾಸವನ್ನಿಟ್ಟು ನಿರಾಶ್ರಿತರು ಆಶ್ರಯಿಸುತ್ತಿದ್ದ ಬಾಗಿಲೆಂದರೆ ಜವಾಹರನದು. ಅವನ ಮನೆ ಎಲ್ಲರಿಗೂ ತೆರವಾಗಿತ್ತು. ಅವನು ಈ ಜನತೆಗೆ ಸೇರಿದವನು; ಅವರಿಗಾಗಿ ಬಾಳನ್ನು ಮೀಸಲಿಟ್ಟವನು; ಅವರನ್ನು ಕಂಡರೆ ಹೆದರುತ್ತಿರಲಿಲ್ಲ; ಹಿಂದುಗಳು–ಮುಸ್ಲಿಮರು ತನ್ನ ದೇಶಬಾಂಧವರೆಂದುಕೊಳ್ಳುತ್ತಿದ್ದ. ನಿತ್ಯವೂ ಅವನ ಪ್ರಾಣಹೀರುವ ಬೆದರಿಕೆ ಹಾಕಿ ಪತ್ರಗಳು ಬರುತ್ತಿದ್ದರೂ ಅವನು ಅಂಗರಕ್ಷಕರ ದಲ ಬೇಡವೆಂದನು. ತನ್ನ ಜನರ ವಿರುದ್ಧವೇ ತಾನು ಅಂಗರಕ್ಷಕರನ್ನು ಹೇಗೆ ಇಟ್ಟುಕೊಳ್ಳಲಿ? ಅ ವಿಚಾರವೇ ಅಕಲ್ಪನೀಯವಾಗಿತ್ತು.

೩೦ ನೇ ಜನೆವರಿ ಬಂತು, ಗಾಂಧೀಜಿಯ ವಧೆಯಾಯಿತು. ಭಾರತದ ತಂದೆ ಹೋದನು, ಆದರೆ ಜವಾಹರನ ಸರ್ವಸ್ವವೂ ಹೋದಂತೆ ತೋರಿತು. ಈ ಘಟನೆಯಿಂದ ಅವನು ನಿಶ್ಚೇಷ್ಟಿತ ವಿಮೂಢನಂತಾಗಿ, ಕನಸಿನಲ್ಲಿ ಓಡಾಡುವವರ ಹಾಗೆ, ಹೋದುದೆಲ್ಲಿ, ಮಾಡಿದುದೇನು, ತಿಂದದ್ದೇನು, ಮಲಗಿದ್ದೆಂದು ಎಂಬ ಅರಿವಿಲ್ಲದೆ ಇದ್ದನು. ಹಲ ದಿನಗಳ ವರೆಗೆ ನಿದ್ರಾದೇವಿ ಅವನ ಬಳಿ ಹಾಯಲಿಲ್ಲ. ಅವನ ಕಣ್ಣುಗಳಲ್ಲಿ ಅಸೀಮ ವಿಷಾದ, ನಿರಾಶೆ ಮನೆ ಮಾಡಿದವು. ಇನ್ನು ಅವತಾರ ಮುಗಿಯಿತು, ಈ ಹೊರೆಯನ್ನು ಹೊರುವ ಚೈತನ್ಯ ಅವನಲ್ಲಿ ಉಳಿದಿಲ್ಲವೆಂದು ನಾವು ಎಣಿಸಿದವು ಕೂಡ. ಆದರೆ ನಮ್ಮ ತಿಳಿವಳಿಕೆ ತಪ್ಪಾಗಿತ್ತು. ಆಶೆಯೂ ನಿರ್ಧಾರವೂ ನಸುನಸುವೆ ಮರಳಿದವು; ಆದರೆ ಜವಾಹರ ಮಾತ್ರ ಬದಲಾಗಿದ್ದ. ಅವನು ನಿಷ್ಠುರನಾಗಿದ್ದ. ವಗುವೆಂಬುದೊಂದಿದೆಯೆಂಬುದನ್ನೇ ಅವನು ಮರೆತಂತೆ ಕಂಡಿತು. ಬಿಮ್ಮನೆ ಬಿಗಿದ ಮುಖದಿಂದ ಕಾರ್ಯಾಸಕ್ತನಾಗತೊಡಗಿದ.

ಚಿಂತಾಕ್ರಾಂತರಾದ ಗೆಳೆಯರೂ ಬಳಗದವರೂ ಅಂಗರಕ್ಷಕರನ್ನಿಟ್ಟುಕೊಳ್ಳಲು ಅವನನ್ನು ಕಾಡಿಬೇಡಿ ಒಪ್ಪಿಸಿದರು. ಆದರೆ ಭಯವಿದೂರನಾದ ಅತನ ಮನಸ್ಸು ಇದರಿಂದ ಬಹಳವಾಗಿ ನೊಂದುಕೊಂಡಿತು. ಅಲ್ಲದೆ ತನಗೂ ತನ್ನವರನ್ನಾಗಿ ಮಾಡಿಕೊಂಡಿದ್ದ ಜನರಿಗೂ ನಡುವೆ ಒಂದು ಗೋಡೆಯನ್ನು ಏರಿಸುವ ಇಚ್ಛೆ ಅವನಿಗಿದ್ದಿಲ್ಲ. ಆದರೂ ಅದು ಅನಿವಾರ್ಯವಾಗಿತ್ತು ಮತ್ತು ಮುಖ್ಯ ಮಂತ್ರಿ ತನ್ನ ಜನರಿಂದ ವಿಚ್ಛಿನ್ನನಾಗಬೇಕಾಯಿತು. ಇನ್ನು ಬೇಕುಬೇಕಾದಾಗ ಅವರು ಅವನ "ದರ್ಶನ"ಕ್ಕಾಗಿ ಹೋಗುವಂತಿದ್ದಿಲ್ಲ, ಒಂದು ಅಲ್ಪ ಉತ್ಸಾಹ ವಚನಕ್ಕಾಗಿ ಅವನ ಬಳಿ ಸಾರುವಂತಿದ್ದಿಲ್ಲ. ಅವರ ಪ್ರೀತಿಯ ಮುತ್ತೀ ಇನ್ನು ದೂರದಿಂದ, ರಕ್ಷಕರ ಬಂಧುಕಿನಾಚೆಯಿಂದ, ನೋಡಿ, ಗೌರವಿಸಿ, ನಲಿಯಬೇಕಾದ ಅವರ ಮುಖ್ಯ ಮಂತ್ರಿ ಮಾತ್ರ. ಈ ಪರಿವರ್ತನೆಯ ಅರ್ಥ ಅವರಿಗಾಗಲಿಲ್ಲ.

ಈ ತಿಂಗಳುಗಳಲ್ಲಿ ಅವನಲ್ಲಿ ಕೆಲ ಬದಲಾವಣೆಗಳಾಗಿವೆ. ಬಂಡುಗಾರ ಜವಾಹರನಿಗೆ ಮಧ್ಯಮಾರ್ಗವೆಂದರೆ ಗೊತ್ತೇ ಇದ್ದಿಲ್ಲ ಆದರೆ ಮುಖ್ಯ ಮಂತ್ರಿ ಜವಾಹರಲಾಲ ದೂರ ದೃಷ್ಟಿಯಿಂದ ತನ್ನ ವಿಚಾರಗಳೇಗೊಂಡು ಮಿತಿ ಹಾಕಬೇಕೆಂದು, ಹಿಂದೆ ತಾನು ಸಾಧಿಸುತ್ತಿದ್ದ ತತ್ವಗಳನ್ನು ಬಂಧಿಸಿಪ್ಪ ಸಡಲಿಸಬೇಕೆಂದು ಮನಗಂಡಿದ್ದಾನೆ. ಅವನ ಹತ್ತಿರದ ಗೆಳೆಯರನೇಕರಿಗೆ ಕೂಡ ಅವನ ವೃತ್ತಿ ಅರ್ಥವಾಗದೆ ಹೋಗಿದೆ. ಆದರೆ ಅವನು ಇನ್ನೂ ಜನತೆಯ ಪ್ರೀತಿಪಾತ್ರನಾಗಿಯೇ ಇದ್ದಾನೆ.

ಏಕಾಕಿ, ಏಕಾಕಿ

ಜವಾಹರನನ್ನು ಅವನ ಪ್ರಶಂಸಕರು ಸುತ್ತುವರಿದಿದ್ದರೂ ಅವನಿಂದು ಭಾರತದಲ್ಲಿಲ್ಲ ಅತ್ಯಂತ ಏಕಾಕಿಯಾದ ಮನುಷ್ಯನೆಂದು ಹೇಳಬಹುದು. ಅವನ ಹೃದಯದ ಈ ಏಕಾಕಿ ಭಾವವನ್ನು ಅವನ ಬಾಗಿದ ಭುಜಗಳಲ್ಲಿ ಪಾಪಟಿಗಳನ್ನೇರುವಾಗಿನ ಅವನ ಸೋತ ನಡಿಗೆಯಲ್ಲಿ ಕೋಣೆಯಲ್ಲಿ ಒಬ್ಬನೇ ಕುಳಿತಾಗ ಅವನ ಕಣ್ಣಲ್ಲಿ ಕಾಣುವ ಆ ನಿರ್ವಿಣ್ಣ ದೃಷ್ಟಿಯಲ್ಲಿ ಗುರುತಿಸಬಹುದು. ಈಗಲ್ಲಿ ಭಾರತದ ಮುಖ್ಯಮಂತ್ರಿಯಿಲ್ಲ, ಜನತೆಯ ಹೃದಯಮೂರ್ತಿಯೂ ಇಲ್ಲ; ಬರಿ ಬಳಲಿ ಬೆಂಡಾದ ಒಂದು ವ್ಯಕ್ತಿಯನ್ನು, ನೆರವಿಯ ನಡುವೆಯೂ ಒಬ್ಬಂಟಿಗನಾದ ಒಬ್ಬ ಮನುಷ್ಯನನ್ನು ಕಾಣುವಿರಿ. ಯಾರೋ ಹೇಳಿದಂತೆ, "ವೀರಪಟ್ಟಕ್ಕೆ ಹುಟ್ಟಿದವನಲ್ಲ ಈತ, ಹುತಾತ್ಮನಾಗಲು ಹುಟ್ಟಿದವ. ಇವನೂ ತನ್ನ ಜನರಿಗಾಗಿ ಸಿಲುಬೆಯನ್ನೇರಲು ಸಿದ್ಧನೇ–ತನ್ನ ಗಂಟಲಿಗೆ ವಧಕುಠಾರವನ್ನು ಬೀಸುವವನ ಕೈ ತಡೆಯಲು ಬೆರಳು ಕೂಡ ಎತ್ತಲಾರ."

ಕರ್ನಾಟಕ

ಧಾರವಾಡ

ಹುಬ್ಬಳ್ಳಿಯ ಮ್ಯಾಲ್ಮಿಂಗ್ಸ್‌ನ್ ಹಾಯಸ್ಕೂಲಿನಲ್ಲಿ ಕಳೆದ ತಿಂಗಳು ೨೫ ರಿಂದ ೨೭ ರ ವರೆಗೆ ನಡೆದ ನೇತ್ರಯಜ್ಞದಲ್ಲಿ ಒಟ್ಟಾರೆ ೨೦೭೭ ಜನರ ಕಣ್ಣುಗಳ ಪರೀಕ್ಷೆಯಾಯಿತು. ಅವರಲ್ಲಿ ೬೯೯ ಜನರನ್ನು ಆಸ್ಪತ್ರೆಯಲ್ಲಿಟ್ಟುಕೊಳ್ಳಲಾಯಿತು. ೬೩೬ ಶಸ್ತ್ರಕ್ರಿಯೆ ನಡೆಯಿತು. ಬಡರೋಗಿಗಳಿಗೆಲ್ಲ ಪುಕ್ಕಟೆ ಅನ್ನ ಕೊಡಲಾಯಿತು. ಈ ನೇತ್ರಯಜ್ಞದಲ್ಲಿ ಬಗೆಬಗೆಯಿಂದ ಸಹಾಯಕರಾದವರಿಗೆ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತೇವೆ ಎಂದು ಧಾರವಾಡದ ಸಿವಿಲ್ ಸರ್ಜನರು ಪ್ರಕಟಿಸುತ್ತಾರೆ.

ಗದಗ—ಬೆಟಗೇರಿಯಲ್ಲಿ ಶ್ರೀ ದೇವಲ ಮಹರ್ಷಿಯ ಜಯಂತಿ ಕಳೆದ ರವಿವಾರ ಆಚರಿಸಲ್ಪಟ್ಟಿತು. ಸಾಯಂಕಾಲ ಶ್ರೀ ಫಕೀರಪ್ಪಾ ಬರದ್ವಾಡರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ನಾಯಕ ವೆಂಕಟರಾಯರ ಮುಖ್ಯ ಭಾಷಣವಾಯಿತು. ಸದ್ಯದ ಪರಿಸ್ಥಿತಿಯಲ್ಲಿ ಧರ್ಮ ಮತ್ತು ರಾಷ್ಟ್ರೀಯತ್ವವನ್ನು ಹೇಗೆ ಸಮನ್ವಯಿಸಿಕೊಂಡು ಹೋಗಬೇಕೆಂಬುದನ್ನು ಅವರು ಒಳ್ಳೆ ಸುಂದರವಾಗಿ ವಿಮರ್ಶಿಸಿದರು. ಸೇಲಂದ ಸಾಂಬಲಿಂಗಸ್ವಾಮಿಗಳು ಮಹರ್ಷಿಗಳ ಚರಿತ್ರವನ್ನು ಹೇಳಿದರು. ಪುರುವಂತ ಎಂಬ ವಿದ್ಯಾರ್ಥಿ ದೇವಾಂಗರು ಈಗ ಮಾಡಬೇಕಾದುದೇನೆಂಬುದನ್ನು ತಿಳಿಸಿದರು

ಧಾರವಾಡ ಕೆ ಈ ಬೋರ್ಡ ಆರ್ಟ್ಸ ಕಾಲೇಜಿನ ಕಟ್ಟಡದ ಶಂಕು ಸ್ಥಾಪನೆಯು ಮುಖ್ಯಮಂತ್ರಿ ಶ್ರೀ ಬಾಳಾಸಾಹೇಬ ಖೇರರಿಂದ ಬರುವ ೫ ನೇ ತಾರೀಕಿಗೆ ಜರಗುವದು. ಈ ಕಟ್ಟಡಕ್ಕಾಗಿ ಎರಡು ಲಕ್ಷ ರೂಪಾಯಿಗಳ ಯೋಜನೆ ಮಾಡಲಾಗಿದೆ. ಅಲ್ಲದೆ ಕಾಲೇಜಿನಲ್ಲಿ ಕೆಮಿಸ್ಟ್ರಿ, ಬಾಯಾಲಜಿ, ಫಿಜಿಕ್ಸಗಳನ್ನು ತೆರೆಯುವದಕ್ಕಾಗಿ ೨ ಲಕ್ಷ ರೂ. ಹೀಗೆ ನಾಲ್ಕು ಲಕ್ಷ ರೂಪಾಯಿಗಳು ಬೇಕಾಗಿದ್ದು ಕೊಡುಗೈದೊರೆಗಳು ಸಹಾಯ ಮಾಡಬೇಕೆಂದು ಶ್ರೀ ರಾ. ಶ್ರೀ. ಹುಕ್ಕೇರಿಕರರು ಬಿನ್ನವಿಸಿಕೊಳ್ಳುತ್ತಾರೆ.

ಧಾರವಾಡ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆಯೊಂದನ್ನು ಹೊರಡಿಸಿ ಭತ್ತ ಬೆಳೆಯುವ ಪ್ರದೇಶದಲ್ಲಿ ಭತ್ತ ಮತ್ತು ಅಕ್ಕಿಯ ಮಾರಾಟವನ್ನು ನಿರ್ಬಂಧಿಸಿದ್ದಾರೆ ಮತ್ತು ಅವುಗಳ ಖರೀದಿಯನ್ನು ನಿರ್ಬಂಧಿಸಿದ್ದಾರೆ.

ಮುಂಬಯಿ ಶಾಸನ ಸಭೆಯವರು ಸ್ವೀಕರಿಸಿದ ಹೊಲಸಾಗುವಳಿ ತಿದ್ದುಪಡೆ ಮಸೂದೆಗೆ ಮನ್ನಣೆ ಕೊಡಬಾರದೆಂದು ಧಾರವಾಡ ಜಿಲ್ಲಾ ವತನದಾರ ಕುಲಕರ್ಣಿ ಸಂಘದವರು ಗವರ್ನರ ಜನರಲ್ಲರಿಗೆ ಬಿನ್ನವಿಸಿಕೊಂಡಿರುವರೆಂದು ತಿಳಿಯುತ್ತದೆ.

ಹುಬ್ಬಳ್ಳಿ ನಗರ ಸಭೆಯ ಸಭೆ ಸೇರಿ ವಿವಿಧ ಉಪಸಮಿತಿಗಳನ್ನು ರಚಿಸಲಾಯಿತು. ಆಯಾ ಉಪಸಮಿತಿಗಳ ಚೆಅರಮನ್‌ರು: ಸ್ಟ್ಯಾಂಡಿಂಗ, ಶ್ರೀ ಆರ್. ಎಚ್. ಗೂಡವಾಲಾ, ಹಾಯಸ್ಕೂಲ: ಶ್ರೀ ವ್ಹಿ. ಆರ್. ದೇಶಪಾಂಡೆ, ಸ್ಯಾನಿಟರಿ: ಶ್ರೀ ಆಯ. ಕೆ. ಶಾಬ್ದಿ, ಡಿಸ್ಪೆನ್ಸರಿ: ಡಾ. ಸೊನಟಕ್ಕೆ, ಫಾಯನಾನ್ಸ: ರಾ. ಸಾ. ತಂಬದ (ಅಧ್ಯಕ್ಷರು) ಟೌನ ಇಂಪ್ರೂವಮೆಂಟ: ಶ್ರೀ ಭೀಮನಗೌಡಾ ಪಾಟೀಲ, ವೆಟರ್ನರಿ: ಶ್ರೀ ಜಿ. ಎಂ ಕುಂದನ್ನಹಳ್ಳಿ, ಮಾರ್ಕೆಟ: ವಿ ಆರ್. ಮಾಳವದೆ ಮತ್ತು ಗಾರ್ಡನ: ಶ್ರೀ ಉಳ್ಳೇಕಾಶಿ.

ಮುಂದಿನ ತಿಂಗಳು ೫ ನೇ ತಾರೀಕಿಗೆ ಮುಂಬಯಿ ಹಾಯಕೋರ್ಟಿನ ಮುಖ್ಯ ನ್ಯಾಯಾಧೀಶರು ಹುಬ್ಬಳ್ಳಿಗೆ ಬಂದಾಗ ಅವರಿಗೆ ಮಾನಪತ್ರ ಕೊಡಬೇಕೆಂದು ಹುಬ್ಬಳ್ಳಿ ನಗರ ಸಭೆ ನಿರ್ಣಯಿಸಿದೆ.

ಎಂ. ಎಸ್. ಎಂ. ರೇಲ್ವೆ ಸಲಹೆ ಸಮಿತಿಗೆ ಹುಬ್ಬಳ್ಳಿ ನಗರ ಸಭೆಯ ಪರವಾಗಿ ಶ್ರೀ ವಿ. ಆರ್. ದೇಶಪಾಂಡೆಯವರು ಪ್ರತಿನಿಧಿಗಳಾಗಿ ಆರಿಸಲ್ಪಟ್ಟಿರುವರು.

ಕರ್ನಾಟಕಯೋಜನಾಸಮಿತಿಯ ಸಭೆಸೇರಿ ಶ್ರೀ ಹುಕ್ಕೇರಿಕರರು ಅಧ್ಯಕ್ಷ, ವಿ. ಎಸ್. ಜಿಸವನಾಳರು ಉಪಾಧ್ಯಕ್ಷ ಮತ್ತು ಅಕಳವಾಡಿ ಹಾಗು ಕೌದಿಯವರು ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಬಳ್ಳಾರಿ

ಶ್ರೀ ಬಸರೀಗಿಡದ ವೀರಪ್ಪನವರು ಮತ್ತು ತಲ್ಲೂರ ರಾಯನಗೌಡರು ೧೪ ನೇ ತಾರೀಕು ಪಂಪಾಪತಿಯ ದರ್ಶನ ತೆಗೆದುಕೊಂಡು ಪಂಡಿತ ಜವಾಹರಲಾಲರಿಗೆ ದೀರ್ಘಾಯುರಾರೋಗ್ಯ ದಯಪಾಲಿಸಬೇಕೆಂದು ಪ್ರಾರ್ಥಿಸಿದರು.

ಬಳ್ಳಾರಿ ಮೋಟರ ಕೆಲಸಗಾರರ ಸಮ್ಮೇಲನ ಕಳೆದ ಸೋಮವಾರ ಶ್ರೀ ಕೆ. ಎಸ್. ರಾಘವಾಚಾರ್ಯರ ಅಧ್ಯಕ್ಷತೆಯಲ್ಲಿ ಸೇರಿ ಪ್ರಾಂತದಲ್ಲಿ ಮೋಟಾರ ಸಾರಿಗೆಯು ರಾಷ್ಟ್ರೀಕರಣವಾಗಬೇಕೆಂಬ ನಿರ್ಣಯ ಸ್ವೀಕೃತವಾಯಿತು.

ಎಮ್ಮಿಗನೂರಲ್ಲಿ ಪಂಡಿತ ಜವಾಹರಲಾಲರ ೬೦ ನೇ ವರ್ಷದ ಜಯಂತಿಯು ಒಳ್ಳೆ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮುಂಜಾನೆ ಧ್ವಜವಂದನೆ, ಮಧ್ಯಾಹ್ನ ಮೆರವಣಿಗೆ ಸಾಯಂಕಾಲ ಸಾರ್ವಜನಿಕ ಸಭೆ ಜರುಗಿತು. ಅನೇಕರು ಮಾತಾಡಿ ಪಂಡಿತರಿಗೆ ದೀರ್ಘಾಯುರಾರೋಗ್ಯವನ್ನು ಕೋರಿದರು

ಬಳ್ಳಾರಿಯಲ್ಲಿ ಪಂಡಿತ ಜವಾಹರಲಾಲರ ಷಷ್ಟ್ಯಬ್ದವು ಒಳ್ಳೆ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು.

ಬಳ್ಳಾರಿಗೆ ಬಂದಿದ್ದ ಶಿಕ್ಷಣಶಾಖೆಯ ಡಾಯರೆಕ್ಟರರಾದ ಶ್ರೀ ಡಿ. ಎಸ್. ರೆಡ್ಡಿಯವರನ್ನು ಬಳ್ಳಾರಿ ವೀರಶೈವ ಕಾಲೇಜಿನ ಪರವಾಗಿ ಆದರ ಅಧ್ಯಕ್ಷ ಶ್ರೀ ಪಾಯ ಮಹಾಬಳೇಶ್ವರಪ್ಪನವರು ಸ್ವಾಗತಿಸಿದರು. ಆಗ ಡಾಯರೆಕ್ಟರರು ಶಿಕ್ಷಣ ಶಾಖೆಯ ಹೊಸ ಧೋರಣವನ್ನು ವಿವರಿಸಿದರು.

ಬೆಳಗಾಂವಿ

ಬೆಳಗಾವಿಯ ಜನರಲ್ ಲಾಯಬ್ರರಿಯ ಶತ ಸಾಂವತ್ಸರಿಕೋತ್ಸವವು ದಿಸೆಂಬರ ೬ಕ್ಕೆ ಜರುಗಲಿದ್ದು ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಮುಖ್ಯ ಅತಿಥಿಗಳಾಗಿ ಈ ಸಮಾರಂಭಕ್ಕೆ ಬರುವರು. ಈ ವಾಚನಾಲಯವನ್ನು ಊರ್ಜಿತ ಸ್ಥಿತಿಗೆ ತರಲು ಕಾರಣರಾಗಿರುವ ಶ್ರೀ ದತ್ತೋಪಂತ ಬೆಳವಿ, ದಿವಂಗತ ವಂಟಮುರಿ ಸರದೇಸಾಯಿ ಮತ್ತು ಬಾಪೂಸಾಹೇಬ ಜೋಗ ಇವರ ತೈಲಚಿತ್ರದ ಅನಾವರಣ ಸಮಾರಂಭವೂ ಜರಗುವದು. ಮಹಿಲಾವಿದ್ಯಾಲಯದ ಬೆಳ್ಳಿಹಬ್ಬವೂ ಅಂದು ಸಂಜೆಗೆ ಜರಗುವುದು.

ಆಚೆ ಸೋಮವಾರ ಯರಗುಪ್ಪಿಯ ಸುಪ್ರಸಿದ್ಧ ಪಾತೆಪ್ಪ ಗೋವಿಂದಪ್ಪಾ ನ್ಯಾಮಗೌಡರ (ಗುದ್ದಿ) ಇವರು ಯಾದವಾಡದಿಂದ ಯರಗುಪ್ಪಿಗೆ ಸಾಯಕಲ್ ಮೇಲೆ ಹೊರಟಾಗ ದಾರಿಯಲ್ಲಿ ಅಮಾನುಷ ರೀತಿಯಿಂದ ಅವರ ಕೊಲೆಯಾಗಿದೆ. ಮರು ದಿನ ಕೌಜಲಗಿಯಲ್ಲಿಯೂ ಒಂದು ಕೊಲೆಯಾಗಿದೆಯೆಂದು ತಿಳಿಯುತ್ತದೆ.

ಮಿರಜಿಯ ಶ್ರೀ ಪಿ ಎನ್ ಮಹಾಬಳರು ಸುರಕ್ಷಿತತೆ ಕಾಯದೆಯ ನ್ವಯ ಬಂಧಿಸಲ್ಪಟ್ಟು ಸ್ಥಾನಬದ್ಧತೆಯಲ್ಲಿ ಇಡಲ್ಪಟ್ಟದಾರೆ.

ಜಿಲ್ಲಾ ನ್ಯಾಯಾಧೀಶರ ಪದಕ್ಕೆ ಮುಂಬಯಿ ಹಾಯಕೋರ್ಟಿನವರು ನಾಲ್ಕು ಪ್ರಮುಖ ವಕೀಲರನ್ನು ಕರ್ನಾಟಕದಿಂದ ಸಂದರ್ಶನಕ್ಕೆ ಕರೆಸಿದ್ದರು ಅವರಲ್ಲಿ ಬೆಳಗಾವಿಯ ಶ್ರೀ ದಾತಾರ ಬಳವಂತರಾಯರೊಬ್ಬರು. ಆವ ೨ ನ್ಯಾಯಮೂರ್ತಿಗಳನ್ನು ಸಂದರ್ಶಿಸಿ ತಾವು ಕರ್ನಾಟಕದ ಸಾರ್ವಜನಿಕ ಜೀವನದಲ್ಲಿ ಭಾಗವಹಿಸುವದರಿಂದ ಹಿಂದುಳಿದ ಕರ್ನಾಟಕದ ಸೇವೆ ಅವಶ್ಯವಿದ್ದುದರಿಂದ ಜಿಲ್ಲಾ ನ್ಯಾಯಾಧೀಶ ಪದವನ್ನು ವಿನಿಯಪೂರ್ವಕ ನಿರಾಕರಿಸುವದಾಗಿ ತಿಳಿಸದರೆಂದು ತಿಳಿಯುತ್ತದೆ. ನ್ಯಾಯಮೂರ್ತಿಗಳು ಶ್ರೀ ದಾತಾರರ ಹೇಳಿಕೆಯನ್ನು ಬಹಳ ಮಟ್ಟಿಗೆ ಮೆಚ್ಚಿದರೆಂದೂ ತಿಳಿಯುತ್ತದೆ.

ಬೆಳಗಾವಿಯ ಕಲೆಕ್ಟರರು ಗೋಕಾಕಕ್ಕೆ ಹೋದಾಗ ೧೦ ನೇ ತಾರೀಖು ನಗರ ಸಭೆಯನ್ನು ಸಂದರ್ಶಿಸಲು ತಮ್ಮ ಆಜ್ಞೆಗಳನ್ನು ಮೀರಿ ನಡೆಯುತ್ತಿದ್ದ ಬಗ್ಗೆ ಮತ್ತೂ ಆಡಳಿತದ ಬಗ್ಗೆ ಕಲೆಕ್ಟರರು ಅಸಮಾಧಾನವನ್ನು ವ್ಯಕ್ತ ಪಡಿಸಿದರೆಂದು ತಿಳಿಯುತ್ತದೆ.

ವಿಜಾಪುರ

ಸೀತೀಮನೆಯ ಕಲ್ಯಾಣ ಧರ್ಮರ ಮಠದಲ್ಲಿ ಎರಡು ವಾರಗಳ ಹಿಂದೆ ಹಗಲು ಹಾಡೇ ೩೦–೪೦ ಜನರು ಶಸ್ತ್ರಾಸ್ತ್ರ ಸಹಿತ ನುಗ್ಗಿ ೮–೧೦ ಸಾವಿರ ರೂಪಾಯಿಗಳ ಬೆಲೆ ಬಾಳುವ ವಸ್ತುಗಳನ್ನು ಅಪಹರಿಸಿಕೊಂಡು ಹೋಗಿರುವರೆಂದು ತಿಳಿಯುತ್ತದೆ. ಧರ್ಮರ ಮಠದವಾರ ಸರದಾರ ಶ್ರೀ ಬಾಬಾಸಾಹೇಬರನ್ನು ಕೊಲ್ಲಲು ಅವರು ಹವಣಿಸಿದರು. ಆದರೆ ಊರ ಹೆಣ್ಣುಮಕ್ಕಳೆಲ್ಲಾ ಅವರನ್ನು ಸುತ್ತುಗಟ್ಟಿ ದರೋಡೆಗಾರರನ್ನು ಅಂಗಲಾಚಿ ಬೇಡಿಕೊಂಡು ಅವರನ್ನು ಉಳಿಸಿದರು. ಈ ದರೋಡೆಗಾರರು ಅಜನೂರವರೆಂದು ಹೇಳಿದರೂ ಅಪರಾಧಿಗಳ ಶೋಧ ಪ್ರಗತಿಪರವಾಗಿ ಸಾಗಿಲ್ಲೆಂದು ಸುದ್ದಿ.

ವಿಜಾಪುರದ ರುಕ್ಮಾಂಗದ ನಾಟ್ಯ ಸಂಸ್ಥೆಯವರು ಕಳೆದ ವಾರ ಸ್ವಾತಂತ್ರ್ಯ ದರ್ಶನವೆಂಬ ನಾಟಕವನ್ನಾಡಿ ಬಂದ ಉತ್ಪನ್ನವನ್ನು ಇಲ್ಲಿಯ ವಿದ್ಯಾವರ್ಧಕ ಸಂಘಕ್ಕೆ ಸಹಾಯ ಸಲ್ಲಿಸಿದರು. ಈ ನಾಟಕದಲ್ಲಿ ಈಗಿನ ಸಮಾಜದ ಚಿತ್ರವನ್ನು ಚಿತ್ರಿಸಲಾಗಿದೆ. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿಗಳಾದ ಶ್ರೀ ಕೌಜಲಗಿ ಕೃಷ್ಣರಾಯರು ಈ ಸಂಘಕ್ಕೆ ೭೫ ರೂ. ಕಾಣಿಕೆ ಕೊಟ್ಟರು.

ದಕ್ಷಿಣ ಕನ್ನಡ

ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ದಿನಾಂಕ ೧೩ ರಂದು ಸಂಜೆ ನೆಹರುಗಳ ೬೦ ನೇ ಜನ್ಮ ದಿನೋತ್ಸವವು ಶ್ರೀ ಮುಚ್ಚಮಲೆ ಶಂಕರ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಶಾಲೆಯ ಕನ್ನಡ ಪಂಡಿತ ಶ್ರೀ ಪಿ. ಕೆ. ನಾರಾಯಣ ವಿದ್ವಾನ್ ಅವರು ಸ್ವಾಗತ ಮಾಡಿದ ಮೇಲೆ ಅಧ್ಯಕ್ಷರು ನೆಹರುಗಳ ಜೀವನ ಮತ್ತು ಸಂದೇಶಗಳ ಕುರಿತು ಮಾತನಾಡಿದರು. ಇನ್ನು ಹಲವರ ಭಾಷಣವಾದ ಬಳಿಕ ನೆಹರು ಅವರಿಗೆ ದೀರ್ಘಾಯುರಾರೋಗ್ಯವನ್ನು ಕೋರುವ ಗೊತ್ತುವಳಿ ಸ್ವೀಕೃತವಾಯಿತು.

ಮಂಗಳೂರಿನಲ್ಲಿ ದಿನಾಂಕ ೧೧ ರಂದು ದ. ಕ. ಜಿಲ್ಲಾ ಕಾಂಗ್ರೆಸ್ ಮಂದಿರದಲ್ಲಿ ಜಿಲ್ಲೆಯ ಪ್ರಮುಖರದೊಂದು ಸಭೆಯು ಜರಗಿತು. ಈ ಸಭೆಗೆ ಡಾ|| ಯು. ಪಿ. ಮಲ್ಯ ಎಂ. ಎಲ್. ಎ. ಯವರು ಅಧ್ಯಕ್ಷರಾಗಿದ್ದರು. ಶ್ರೀಯುತರು ಕೆ. ಆರ್. ಕಾರಂತ, ಕೆ. ಕೆ. ಶೆಟ್ಟಿ, ಎಂ. ಗಿರಿಯಪ್ಪ ಜಿ. ಕೆ. ಗೋವಿಂದ ಭಟ್ಟ ಮುಂತಾದವರು ಮಾತನಾಡಿದ ಮೇಲೆ ಆಹಾರ ಪರಿಸ್ಥಿತಿ ಸಂಬಂಧದಲ್ಲಿ ಮದ್ರಾಸ ಸರಕಾರಕ್ಕೆ ಕಳಿಸುವ ಮನವಿಯ ಕರಡನ್ನು ತಯಾರ ಮಾಡಲಾಯಿತು. ಅದರಲ್ಲಿ ಹೊಸದುರ್ಗ ಉಪತಾಲೂಕಿನಲ್ಲಿ ಮಾತ್ರ ನಿಯಂತ್ರಣ ಮತ್ತು ಸೀದಾ ಪದ್ಧತಿಯನ್ನು ಈಗಿನಂತೆ ಇರಿಸಿ ಉಳಿದ ಭಾಗದ ನಿಯಂತ್ರಣವನ್ನು ತೆಗೆದು ಹಾಕಬೇಕು. ಅಕ್ಕಿಯ ಬೆಲೆಯನ್ನು ಮುಡಿಗೆ ರೂ ೧೫ ಎಂದು ನಿರ್ಣಯಿಸಿ ರೈತರು ಮಾರುವುದಾದರೆ ಸರಕಾರಕ್ಕೆ ಮಾತ್ರ ಮಾರುವಂತೆ ಮಾಡಬೇಕು. ಈ ಸೂಚನೆಗಳನ್ನು ಸರಕಾರವು ಅಂಗೀಕರಿಸದಿದ್ದರೆ ಈಗಿನ ಪದ್ಧತಿಯಲ್ಲಿ ೧/೨ ಸೇರು ಅಕ್ಕಿ ಪ್ರತಿಯೊಬ್ಬನಿಗೂ ಸಿಗುವಂತಾಗಬೇಕು ಮುಂತಾದ ವಿಷಯಗಳು ಅಡಕವಾಗಿವೆ. ಇದನ್ನು ಮಂತ್ರಿಗಳ ಮುಂದಿಡಲು ಒಂದು ಸಮಿತಿಯು ನೇಮಕವಾಯಿತು.

ಪುತ್ತೂರಲ್ಲಿ ದಿನಾಂಕ ೭ ರಂದು ಜರಗಿದ ಕೃಷಿಕರ ಪರಿಷತ್ತಿನಲ್ಲಿ ರೈತನ ಮನೆಯ ಖರ್ಚು ಮತ್ತು ಕೃಷಿಯ ವೆಚ್ಚವನ್ನು ಲೆಕ್ಕಿಸದೆ, ಅವನು ಗೇಣಿಕೊಡತಕ್ಕ ಎಲ್ಲಾ ಧಾನ್ಯವನ್ನು ಕಡ್ಡಾಯವಾಗಿ ಎತ್ತಿ ಆಮೇಲೆ ಅವನಿಗೆ ಹಸುಗೆ ಅಂಗಡಿಗಳಿಂದ ಹೆಚ್ಚು ಬೆಲೆಕೊಟ್ಟು ಕೊಂಡುಕೊಳ್ಳುವಂತೆ ಮಾಡುವ ಸರಕಾರದ ಈಗಿನ ಧೋರಣೆಯು ಸರಿಯಲ್ಲವೆಂದು ಸಾರಲಾಯಿತು. ಅಲ್ಲದೆ ಸೀದಾ ಪದ್ಧತಿಯಲ್ಲಿ ಕೆಲವೊಂದು ಬದಲಾವಣೆಗಳನ್ನು ಸೂಚಿಸಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಆಹಾರ ಸಮಿತಿಯ ಸಭೆಯು ಕಳೆದವಾರ ಮಂಗಳೂರಲ್ಲಿ ಕಲೆಕ್ಟರರ ಕಚೇರಿಯಲ್ಲಿ ಜರಗಿದಾಗ ಉತ್ಪತ್ತಿಯನ್ನು ಹೆಚ್ಚಿಸುವ ಸಲುವಾಗಿ ರೈತರಿಗೆ ಪಂಪುಗಳನ್ನೂ ಕ್ರೂಡ್ ಆಯಿಲ್‌ನ್ನೂ ಒದಗಿಸಬೇಕೆಂದು ನಿರ್ಣಯವಾಯಿತಲ್ಲದೆ ಅಕ್ಕಿಯ ಮೇಲಿನ ನಿರ್ಬಂಧವು ತೆಗೆದುಹಾಕುವುದು ಸಾಧ್ಯವಿಲ್ಲವೆಂದೂ ನಿರ್ಣಯಿಸಲಾಯಿತು.

ಭಾರತ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುಗಳ ೬೦ ನೇ ಜನ್ಮ ದಿನೋತ್ಸವವು ಮಂಗಳೂರಿನಲ್ಲಿ ದಿನಾಂಕ ೧೪ ರಂದು ಸಂಜೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪಿ. ಎಲ್. ನಾಯ್ಕರವರ ಅಧ್ಯಕ್ಷತೆಯಲ್ಲಿ ಜರುಗಿತು. ಅನೇಕರು ಅವರ ಗುಣಗಾನ ಮಾಡಿದರು.

ಸಂಜೆಯ ರೈಲಿಗೆ ಬಂದಿದ್ದ ಮದ್ರಾಸು ಸರಕಾರದ ಕೈಗಾರಿಕೆ ಮತ್ತು ಮಜೂರ ಮಂತ್ರಿಗಳಾದ ಶ್ರೀಮಾನ್ ಎಚ್. ಸೀತಾರಾಮರೆಡ್ಡಿಯವರೂ ನೆಹರುಗಳ ಜನ್ಮ ದಿನ ಉತ್ಸವದಲ್ಲಿ ಭಾಗವಹಿಸಿ ಭಾಷಣ ಮಾಡಿದರು.

ಉತ್ತರ ಕನ್ನಡ

ಕಾರವಾರದಲ್ಲಿ ಶ್ರೀ [illegible]

ಹಳ್ಳಿಯ ಕಮ್ಯುನಿಸ್ಟ ಧುರೀಣನಾದ ಶ್ರೀ [illegible] ತಿರುಗುತ್ತಿದ್ದರು.

ಕಾರವಾರದಿಂದ ಗೋವೆಗೆ [illegible] ಗೋವಾ ಸರಕಾರದ ಸಹಾಯವನ್ನು ಕೋರಲಾಗಿದೆ.

ಮುಂಬಯಿಯಿಂದ ೨೦೦೦ ಗ್ಯಾಲನ ಪೆಟ್ರೋಲ ಸಂಗ್ರಹ ತೆಗೆದುಕೊಂಡು ಪಶ್ಚಿಮದ ಯಾವದೋ ಒಂದು ಬಂದರಕ್ಕೆ ಹೊರಟಿದ್ದ ಒಂದು ಹಡಗವು ದಾರಿಯಲ್ಲಿ ಮಾಯವಾಗಿದೆಂದು ವರದಿಯಾಗಿದೆ.

ಕನ್ನಡ ಸಂಸ್ಥಾನ

ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಪಂ. ಜವಾಹರಲಾಲರು ಮೈಸೂರು ವಿಶ್ವವಿದ್ಯಾಲಯದವರು ದಯಪಾಲಿಸಿದ ಡಾಕ್ಟರ ಆಫ್ ಲಾ ಪದವಿಯನ್ನು ಸ್ವೀಕರಿಸಲು ಡಿಸೆಂಬರ ಕೊನೆಯ ವಾರದಲ್ಲಿ ಬೆಂಗಳೂರಿಗೆ ಬರಲಿರುವರು. ಆಗ ಬೆಂಗಳೂರು ನಗರ ಸಭೆಯವರು ಅವರಿಗೆ ಮಾನಪತ್ರ ಕೊಡುವರು.

ಕಲಬುರ್ಗಿಯಲ್ಲಿ ನೆಹರು ಇವರ ಷಷ್ಠ್ಯಬ್ದಪೂರ್ತಿಯ ಉತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮಾಯಾ ಮಂದಿರದಲ್ಲಿ ಹರಿಜನರು ಪ್ರವೇಶಿಸಿದರು. ಸಾಯಂಕಾಲ ಜಾಹೀರ ಸಭೆ ಸೇರಿ ಹಲವರ ಭಾಷಣಗಳಾದವು.

ದಾವಣಗೇರಿಯ ಶಂಕರ ಟೆಕ್ಸ್ಟಾಯಿಲ್ ಮಿಲ್ಸ, ಚನ್ನಗಿರಿ ಗಡಿಯಾರ ಗೋಪುರ ಮತ್ತು ಚಿಗಟೇರಿ ಆಸ್ಪತ್ರೆ ಮೊದಲಾದವುಗಳ ಪ್ರಾರಂಭೋತ್ಸವ ಜರುಗಿಸಲು ಮೈಸೂರಿನ ಮಹಾರಾಜರು ಶೀಘ್ರದಲ್ಲಿಯೇ ಬರಲಿದ್ದು ಅವರ ಸ್ವಾಗತದ ಸಿದ್ಧತೆ ಭರದಿಂದ ನಡೆದಿದೆ.

ಶಿವಮೊಗ್ಗಿಯ ಎಚ್. ರಾಮಕೃಷ್ಣರಾಯರು ಬರೆದ ಸ್ವಪ್ನಮಂತ್ರಿಗಳು ಎಂಬ ಪುಸ್ತಕವನ್ನು ಜಪ್ತ ಮಾಡಲಾಗಿದೆ. ಪೋಲೀಸರು ಅವರ ಮನೆ ಝಡ್ತಿ ಮಾಡಿ ಆ ಪುಸ್ತಕದ ಪ್ರತಿಗಳನ್ನು ತೆಗೆದುಕೊಂಡು ಹೋದರು.

ಬ್ರಿಗೇಡಿಯರ ಘಾಟಿಯಾ ಮತ್ತು ರಾಯಚೂರ ಕಲೆಕ್ಟರರು ಗಂಗಾವತಿಗೆ ಬಂದಾಗ ಅಲ್ಲಿನ ವ್ಯಾಪಾರಸ್ಥರು ಮತ್ತು ಉಳಿದ ನಾಗರಿಕರು ಅವರಿಗೆ ೧೦೦೦ ರೂಪಾಯಿ ಮಹಾಪೂರ ನಿಧಿಗಾಗಿ ಸಮರ್ಪಿಸಿದರು.

ಕೊಲ್ಲಾಪುರ [illegible] ಶ್ರೀ [illegible] ಕಾಳೆಯವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಮುಂಬಯಿಯೊಳಗೊಂಡು ಸಂಯುಕ್ತ ಮಹಾರಾಷ್ಟ್ರ ಪ್ರಾಂತವನ್ನು ರಚಿಸಬೇಕೆಂದು ನಿರ್ಣಯಿಸಲಾಯಿತು.

ಹೈದರಾಬಾದ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ರಮಾನಂದ ತೀರ್ಥರು ರಾಯಚೂರ ಜಿಲ್ಲೆಯಲ್ಲಿ ಸಂಚಾರ ಮಾಡಿ [illegible] ತಿಳಿದುಕೊಂಡರು.

[illegible]

[illegible]

[illegible]

ಹಿಂದುಸ್ತಾನ

ಮುಂಬಯಿ

ಹಿಂದುಸ್ತಾನದ ಆಧೀನಕ್ಕೆ ಕೊಡಲಾದ ಸೂರತದ ೨ ಫ್ರೆಂಚ ವಸಾಹತುಗಳು ಅಕ್ಟೋಬರ ೩೧ ರಿಂದ ಮುಂಬಯಿ ಪ್ರಾಂತದ ಭಾಗಗಳೆಂದು ತಿಳಿಯಬೇಕಾಗಿ ಹಿಂದುಸ್ತಾನ ಸರಕಾರವು ನಿರ್ಧರಿಸಿರುವದೆಂದು ಹಿಂದುಸ್ತಾನ ಸರಕಾರದ ಪ್ರಕಟನೆ ಹೊರಟಿದೆ.

ಮುಂಬಯಿ ಸರಕಾರದವರು ಶಿಕ್ಷಣ ಸಂಸ್ಥೆಗಳಿಗೆ ಒಂದು ಪರಿಪತ್ರಕಳಿಸಿ ಪ್ರಾಥಮಿಕ ಶಾಲಾಶಿಕ್ಷಕರಿಗೆ ಇನ್ನು ಮೇಲೆ ಗುರೂಜಿ ಎಂದು ಸಂಬೋಧಿಸಬೇಕೆಂದೂ ಸಭೆಗಳಲ್ಲಿ ಅವರಿಗೆ ಪ್ರಥಮ ಪಂಕ್ತಿಯಲ್ಲಿ ಸ್ಥಾನ ಕೊಡಬೇಕೆಂದೂ ತಿಳಿಸಿರುತ್ತಾರೆ.

ಮುಂಬಯಿ ಸರಕಾರದವರು ಠಾಣೆ, ಕುಲಾಬಾ, ರತ್ನಾಗಿರಿ, ಕಾರವಾರ, ಧಾರವಾಡ, ಬೆಳಗಾವ, ವಿಜಾಪುರ, ಸಾತಾರಾ, ಕೊಲ್ಹಾಪುರ, ಪುಣೆ, ನಾಸಿಕ, ಅಹಮ್ಮದನಗರ, ಪೂರ್ವಖಾನದೇಶ ಮತ್ತು ಈ ಜಿಲ್ಹೆಗಳಲ್ಲಿ ಲೀನವಾದ ಸಂಸ್ಥಾನ ಭಾಗಗಳಿಂದ ಕೆಜ್ಜಿಯ ನಿರ್ಯಾತವನ್ನು ಪ್ರತಿಬಂಧಿಸಿದ್ದಾರೆ. ಈ ನಿರ್ಬಂಧವು ಸಾಂಗಲಿ ಅಕ್ಕಲಕೋಟೆ ಭಾಗಗಳಿಗೂ ಅನ್ವಯಿಸುವದು.

ಮುಂಬಯಿ ಧಕ್ಕೆಯಲ್ಲಿ ಹಡಗದಿಂದ ಇಳಿಸಿದ ಆಹಾರ ಧಾನ್ಯ ಬಟಾಟೆ ಮೊದಲಾದ ಪದಾರ್ಥಗಳು ಸಾರಿಗೆಯ ಕೊರತೆಯ ಮೂಲಕ ಹುಳಿತು ಕೊಳೆತು ಕೆಟ್ಟು ಹೋಗುತ್ತಿರುವದಾಗಿ ತಿಳಿಯುತ್ತದೆ. ಇದಲ್ಲದೆ ಸಾವಿರಾರು ಎಣ್ಣೆಯ ಡ್ರಮ್ಮುಗಳು, ಕಾಸ್ಟಿಕ್‌ಸೋಡಾದ ಅಸಂಖ್ಯಾತ ಚೀಲಗಳು, ಯಂತ್ರ ಸಾಮುಗ್ರಿಗಳು ಅತಿ ಇಡಲು ಬಾರದಹಾಗೆ ಕಿಕ್ಕಿರಿದು ಬಿದ್ದಿವೆ.

ಭಾಷಾನುಗುಣ ಪ್ರಾಂತ ಸಮಿತಿಯವರು ಮುಂಬಯಿಯಲ್ಲಿ ತಮ್ಮ ಕಾರ್ಯ ಮುಗಿಸಿದ್ದು ಅವರು ದಿಲ್ಲಿಯಲ್ಲಿ ಇದೇ ತಾ. ೧೯, ೨೦ ಕ್ಕೆ ಸಭೆಸೇರಿ ತಮ್ಮ ವರದಿಯನ್ನು ಸಿದ್ಧಗೊಳಿಸುವರೆಂದು ತಿಳಿಯುತ್ತದೆ. ಈ ವರೆಗೆ ಅವರು ಒಟ್ಟು ೭೦೦೦ ಸಾಕ್ಷ ತೆಗೆದುಕೊಂಡಿರುವರು.

ಅಹಮದಾಬಾದದ ಈಗಿನ ವಿಮಾನ ನಿಲ್ದಾಣವನ್ನು ಬೆಳೆಸಿ ವಿದೇಶ ವಿಮಾನಗಳಿಗೂ ಇಳಿಯಲು ಅನುಕೂಲವಾಗುವಂತೆ ಕಟ್ಟಿಸಬೇಕೆಂದು ನಿರ್ಧರಿಸಲಾಗಿದ್ದು ಇದಕ್ಕೆ ೧೪ ಲಕ್ಷ ರೂ. ಗಳ ವೆಚ್ಚ ತಗಲಬಹುದೆಂದು ಅಂದಾಜ ಮಾಡಲಾಗಿದೆ. ಈ ವಿಮಾನ ನಿಲ್ದಾಣದಲ್ಲಿ ಒಂದು ವಾಯರಲೆಸ್ ಯಂತ್ರವನ್ನೂ ನಿಲ್ಲಿಸಲಾಗುವದೆಂದು ತಿಳಿಯುತ್ತದೆ.

ಶ್ರೀ ಕೆ. ಎಂ. ಮುನಶಿಯವರು ತಮ್ಮ ಗೌರವಾರ್ಥ ಮುಂಬಯಿ ಹಿಂದೀ ವಣಿಕ ಸಂಘದವರು ಏರ್ಪಡಿಸಿದ ಸಮಾರಂಭದಲ್ಲಿ ಮಾತನಾಡುತ್ತ, ಹಿಟ್ಲರನನ್ನೂ ರಜವಿಯನ್ನೂ ಫ್ಯಾಸಿಝಂವನ್ನೂ ನಾವು ಹೊಡೆದೋಡಿಸಿದಂತೆ ಭಾಷಾಮೋಹವನ್ನೂ. ತೊರೆಯಬೇಕೆಂದೂ ಇಲ್ಲದಿದ್ದರೆ ನಮ್ಮ ಸ್ವಾತಂತ್ರ್ಯಕ್ಕೆ ಅದೊಂದು ಗಂಡಾಂತರವಾಗಿ ಪರಿಣಮಿಸುವದೆಂದೂ ಹೇಳಿದರು.

ಶ್ರೀ ಕೆ. ಎಂ. ಮುನಶಿಯವರು ಹೈದರಾಬಾದದಲ್ಲಿದ್ದಾಗ ಬಂದ ತಮ್ಮ ಮೊಗಲಾಯಿಯ ಅನುಭವವನ್ನು ಗ್ರಂಥರೂಪವಾಗಿ ಬರೆಯುತ್ತಿರುವರೆಂದು ತಿಳಿದು ಬಂದಿದೆ.

ಯು. ರಾ. ಸಂಘದ ಆಹಾರ ಮತ್ತು ಒಕ್ಕಲತನ ಸಂಸ್ಥೆಯ ೪ ನೆಯ ಪರಿಷತ್ತಿಗಾಗಿ ನೇಮಿಸಲ್ಪಟ್ಟ ಹಿಂದೀ ಶಿಷ್ಟಮಂಡಲದ ಐವರು ಸದಸ್ಯರು ಧುರೀಣರಾದ ಶ್ರೀ ದಿನಕರರಾವ ದೇಸಾಯಿ ಇವರನ್ನೊಳಗೊಂಡು ತಾ. ೮ ರಂದು ರಾತ್ರಿ ವಿಮಾನಮಾರ್ಗವಾಗಿ ಲಂಡನ್ನಿಗೆ ತೆರಳಿದರು.

ಕೊಲ್ಹಾಪುರದ ಮಹಾರಾಜರು ತಮ್ಮ ಸಂಸ್ಥಾನವನ್ನು ಮುಂಬಯಿ ಪ್ರಾಂತದಲ್ಲಿ ವಿಲೀನಗೊಳಿಸಲು ಒಪ್ಪಿರುವರೆಂದೂ ಆದರೆ ಅದು ಎಂದು ಮೂರ್ತಸ್ವರೂಪಕ್ಕೆ ಬರುವದೆಂಬುದು ಮಾತ್ರ ಇನ್ನೂ ಗೊತ್ತಾಗಿಲ್ಲವೆಂದೂ ತಿಳಿಯುತ್ತದೆ ಆದರೆ ಶ್ರೀ ಲಠ್ಠೆಯವರು ಇದು ಅನಿಶ್ಚಿತವೆಂದು ಹೇಳುತ್ತಾರೆ.

ಹೈದರಾಬಾದ ಸಂಸ್ಥಾನದ ಸಾರ್ವತ್ರಿಕ ಚುನಾವಣೆಯ ಪ್ರಾರಂಭಿಕ ಸಿದ್ಧತೆಗಳನ್ನು ನಡೆಸಲು ಚುನಾವಣೆ ಕಮಿಶನರರಾದ ಶ್ರೀ ಶೇಷಾದ್ರಿಯವರು ಸಂಸ್ಥಾನದಲ್ಲಿ ಸಂಚರಿಸುತ್ತಿದ್ದಾರೆ. ಇವರು ತಮ್ಮ ಸಂಚಾರದಲ್ಲಿ ಜನರಿಗೆ ಅವರ ಮತಾಧಿಕಾರದ ಜ್ಞಾನ ಮಾಡಿಕೊಡುತ್ತಿರುವದಲ್ಲದೆ ಗ್ರಾಮಾಧಿಕಾರಿಗಳ ಕೂಡ ಈ ಬಗ್ಗೆ ಚರ್ಚಿಸಿ ಅವರ ಸಂಶಯಗಳನ್ನು ನಿವಾರಿಸುತ್ತಿದ್ದಾರೆ.

ಹೊಸದಿಲ್ಲಿ

ಡಾ. ರಾಜೇಂದ್ರ ಪ್ರಸಾದರ ಪ್ರಕೃತಿಗೆ ಬಗ್ಗಿದರೆ ಅವರನ್ನು ಪುನಃ ಕೇಂದ್ರ ಸರಕಾರದ ಮಂತ್ರಿ ಮಂಡಲದಲ್ಲಿ ಸೇರಿಸಿಕೊಳ್ಳುವ ಸಂಭವವಿದೆಯೆಂದು ನಮ್ಮ ಸ್ವಂತ ಸುದ್ದಿಗಾರರು ತಿಳಿಸುತ್ತಾರೆ. ಪಂ. ನೆಹರು ಅವರು ವಿದೇಶ ಶಾಖೆಯನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರರಿಗೆ ಬಿಟ್ಟು ಕೊಡಬಹುದೆಂದೂ ಹೀಗಾದರೆ ಶ್ರೀ ಸಂತಾನಂರ ಹುದ್ದೆಯು ಬರುವಲ್ಲಿ ಸಂದೇಹವಿಲ್ಲವೆಂದೂ ಊಹಿಸಲಾಗಿದೆ.

ಅ. ಭಾ. ಹಿಂದು ಮಹಾಸಭೆಯ ಕಾರ್ಯಕಾರಿ ಸಮಿತಿಯ ಸಭೆಸೇರಿ ಸದ್ಯದ ಘಟನಾಸಮಿತಿಯು ಪ್ರೌಢಮತದಾನ ಪದ್ಧತಿಯಿಂದ ಚುನಿತವಾಗಿಲ್ಲವಾದ್ದರಿಂದ ಅದಕ್ಕೆ ಘಟನೆಯನ್ನು ಸಿದ್ಧಪಡಿಸುವ ಅಧಿಕಾರವಿಲ್ಲವೆಂದೂ ಈಗ ಸಿದ್ಧಪಡಿಸಿದ ಘಟನೆಯು ಅತೃಪ್ತಿಕರವಾಗಿದೆಯೆಂದೂ ನಿರ್ಣಯಿಸಿತು. ಅಲ್ಲದೆ ದೇವನಾಗರಿ ಲಿಪಿಯುಳ್ಳ ಹಿಂದಿ ಭಾಷೆಯೇ ರಾಷ್ಟ್ರ ಭಾಷೆಯಾಗಿರಬೇಕೆಂದೂ ಸರಕಾರದವರು ಮುಸಲ್ಮಾನರನ್ನು ಸಾಂತ್ವನಗೊಳಿಸುವ ಧೋರಣವನ್ನು ಬಿಟ್ಟುಕೊಡಬೇಕೆಂದೂ ಅಭಿಪ್ರಾಯ ವ್ಯಕ್ತಗೊಳಿಸಿತು.

ಶ್ರೀ. ದಿವಾಕರ ರಂಗರಾಯರು ಸಾಂಗಲಿ ಅಧ್ಯಾತ್ಮ ವಿದ್ಯಾಮಂದಿರದ ಪರವಾಗಿ ತಾ ೧೦ ರಂದು ಅಲಹಾಬಾದ ಹಿಂದು ಹಾಸ್ಟೆಲಿನಲ್ಲಿ 'ಧರ್ಮಜಾಗ್ರತಿ' ಎಂಬ ಬಗ್ಗೆ ಹಿಂದಿಯಲ್ಲಿ ಭಾಷಣಮಾಡಿದರು. ನ್ಯಾಯಮೂರ್ತಿ, ಪಿ. ಎಸ್. ಸಪ್ರು ಅವರು ಅಧ್ಯಕ್ಷತೆ ವಹಿಸಿದ್ದರು.

ಅಡ್ ಹಾಕ್ ಸಮಿತಿಯ ವರದಿಗನುಗುಣವಾಗಿ ದಿಲ್ಲಿಯನ್ನು ಸ್ವಾಯತ್ತ ಘಟಕವಾಗಿ ಮಾಡಬೇಕೆಂಬ ಗೊತ್ತುವಳಿಯನ್ನು ದಿಲ್ಲಿ ನಗರ ಸಭೆಯು ತಾ. ೧೦ ರ ಸಭೆಯಲ್ಲಿ ಸ್ವೀಕರಿಸಿತು.

ಹಿಂದುಸ್ತಾನ ಸರಕಾರದವರು ಸಾರ್ವಜನಿಕರ ಬೇಡಿಕೆಯನ್ನು ಅನುಲಕ್ಷಿಸಿ ಗಾಂಧಿ ಸ್ಮಾರಕ ಅಂಚೆ ತಿಕೀಟುಗಳ ಮಾರಾಟದ ಅವಧಿಯನ್ನು ನವೆಂಬರ ೩೦ ರ ವರೆಗೆ ಹೆಚ್ಚಿಸಲಾಗಿದೆಯೆಂದು ಪ್ರಕಟನೆ ಹೊರಡಿಸಿರುವರು.

ರಾಷ್ಟ್ರದ ಚಿನ್ಹ ಮತ್ತು ಮುದ್ರೆಯ ಆಕಾರದಲ್ಲಿ ಭಾರತ ಸರಕಾರದವರು ತುಸು ಬದಲಾವಣೆ ಮಾಡಿ ಕಾಟಕೋನಾಕಾರದ ಜೋಡು ಗೆರೆಗಳ ಬದಲು ಕತ್ತಿಯ ಆಕಾರದ ಒಂದೇ ಗೆರೆ ಕಟ್ಟಿ ಅದರಲ್ಲಿ ಮುದ್ರೆಯ ಚಿನ್ಹವನ್ನು ಇಡುವಂತೆ ಮಾಡಿದ್ದಾರೆ.

ಗವರ್ನರ ಜನರಲ ಶ್ರೀ ರಾಜಗೋಪಾಲಾಚಾರ್ಯರು ತಾ. ೧೧ ರಂದು ದಿಲ್ಲಿಯ ರೋಟರಿ ಕ್ಲಬ್ಬಿನಲ್ಲಿ ಮಾತನಾಡುತ್ತ, ಹಿಂದುಸ್ತಾನದ ಎಲ್ಲ ಸಮಸ್ಯೆಗಳನ್ನೂ ನಾವು ಬಗೆ ಹರಿಸಿಕೊಂಡರೆ ಜಗತ್ತಿಗೆ ಒಂದು ಆದರ್ಶ ಪ್ರಯೋಗವನ್ನು ತೋರಿಸಬಹುದು. ಕೆಲ ಸಮಸ್ಯೆ ಭ್ರಾಮಕವಾಗಿದ್ದು ನಾವೊಮ್ಮೆ ಸತ್ಯನಿಷ್ಠರಾದರೆ ಅನೇಕ ಸಮಸ್ಯೆ ತಮ್ಮಿಂದ ತಾವೇ ಬಿಟ್ಟು ಹೋಗುವವೆಂದೂ ಧೈರ್ಯಕ್ಕಿಂತಹೆಚ್ಚಿನ ಆನಂದವಿಲ್ಲವೆಂದೂ ಸತ್ಯವನ್ನು ಎಷ್ಟುಸಲ ಉಚ್ಚರಿಸಿದರೂ ಕಡಿಮೆಯೇ ಎಂದೂ ಹೇಳಿದರು.

ದಿಲ್ಲಿಯಲ್ಲಿ ಟೆಲಿಫೋನ ತಂತಿಗಳನ್ನು ಕದಿಯುವ ನಾಲ್ವರು ಕಳ್ಳರನ್ನು ಬಂಧಿಸಿದ್ದಾರೆ. ಅಂಚೆ ಶಾಖೆಯ ಟೆಲಿಫೋನ ತಂತಿಗಳನ್ನು ಕತ್ತರಿಸಿ ಉದ್ಯೋಗ ಮಾಡುವ ಒಂದು ತಂಡವೇ ಇದೆಯೆಂದು ತಿಳಿದಿದೆ. ಈ ಕಳ್ಳರ ಹೇಳಿಕೆಯ ಮೇಲೆ ಕೆಲ ಮನೆಗಳ ಶೋಧ ಮಾಡಲಾಗಿ ೩॥ ಮಣದಷ್ಟು ತಾಮ್ರದ ತಂತಿಗಳು ಸಿಕ್ಕಿವೆ.

ಹಿಂದುಸ್ತಾನ ಸರಕಾರವು ಸುಮಾರು ೩ ಕೋಟಿ ೯೦ ಲಕ್ಷ ರೂ. ಬೆಲೆಯ ೧೦೦ ರೇಲ್ವೆ ಎಂಜಿನುಗಳ ಪೂರೈಕೆಗಾಗಿ ಕಾನಡಾದ ರೇಲ್ವೆ ಎಂಜಿನು ಕಾರಖಾನೆಗೆ ಕೇಳಿಕೊಂಡಿದೆ. ಈ ಮೊದಲು ೧೦೦ ರೇಲ್ವೆ ಎಂಜಿನುಗಳ ಬಗ್ಗೆ ಕೇಳಿಕೊಳ್ಳಲಾಗಿತ್ತಾದ್ದರಿಂದ ಒಟ್ಟು ೨೦೦ ಎಂಜಿನ್ನುಗಳಿಗೆ ಬೇಡಿಕೆ ಕಳಿಸಿದಂತಾಯ್ತು.

ಇಂಗ್ಲಂಡದ ರಾಜಕುಮಾರಿ ಎಲಿಜಾಬೆಥಳಿಗೆ ತಾ ೧೪ ರಂದು ಪುತ್ರೋತ್ಸವ ವಾದೊಡನೆ ಭಾರತದ ಗ. ಜ. ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಬಕಿಂಗಹ್ಯಾಮ ಅರಮನೆಗೆ ಒಂದು ಜಲತಂತಿ ಕಳಿಸಿ ಶುಭ ಕೋರಿದ್ದಾರೆ. ಈ ಪುತ್ರೋತ್ಸವದ ನಿಮಿತ್ತ ಹಿಂದುಸ್ತಾನದ ಎಲ್ಲ ಸರಕಾರಿ ಕಟ್ಟಡಗಳ ಮೇಲೂ ರಾಷ್ಟ್ರಧ್ವಜ ಹಾರಿಸಲಾಯಿತು. ಈ ಬಗ್ಗೆ ಎಲ್ಲ ಪ್ರಾಂತಿಕ ಸರಕಾರಗಳ ಪರವಾಗಿಯೂ ಶುಭಸಂದೇಶಗಳನ್ನು ರಾಜಮನೆತನಕ್ಕೆ ಕಳುಹಲಾಗಿದೆ.

ಸಂಸ್ಥಾನ ಶಾಖೆಯ ಕಾರ್ಯದರ್ಶಿಗಳಾದ ಶ್ರೀ. ವಿ. ಪಿ, ಮೆನನರ ಕುಮಾರಿ ಮೀನಾಕ್ಷಿಯ ವಿವಾಹವು ತಾ. ೧೪ ರಂದು ಸಂರಕ್ಷಣ ಶಾಖೆಯ ಉಪಕಾರ್ಯದರ್ಶಿಗಳಾದ ದಿನೇಶ ಚಂದ್ರ ಮಿಶ್ರರೊಡನೆ ಸಾಂಗವಾಯಿತು. ಗ. ಜ. ರಾಜಾಜಿ ಮುಖ್ಯ ಮಂತ್ರಿ ಪಂ. ನೆಹರು, ಸರದಾರ ವಲ್ಲಭಬಾಯಿ, ಸರೋಜಿನಿ ನಾಯುಡು ಇವರೇ ಮೊದಲಾದ ಪ್ರತಿಷ್ಠಿತರು ಅನೇಕ ಮಹಾರಾಜರೂ ಉಚ್ಚ ಸೈನ್ಯಾಧಿಕಾರಿಗಳು ಮದುವೆಗೂ ಸಂಜೆಯ ಸತ್ಕಾರ ಕೂಟಕ್ಕೂ ಉಪಸ್ಥಿತರಿದ್ದರು.

ಮುಂಬಯಿ ಟಾಯಿಮ್ಸ ಆಫ್ ಇಂಡಿಯಾ ಪತ್ರಿಕೆಯಲ್ಲಿ ಶ್ರೀ ರಂಗರಾವ ದಿವಾಕರರು ಘಟನಾ ಸಮಿತಿಯಲ್ಲಿ ತಾ ೬ ರಂದು ಭಾಷಾವಾರ ಪ್ರಾಂತರಚನೆಯ ಬಗ್ಗೆ ಮಾಡಿದ ಭಾಷಣದ ವರದಿಯು ವಿಪರ್ಯಸ್ತವಾಗಿ ಪ್ರಕಟಿಸಲ್ಪಟ್ಟಿತ್ತು. ಈ ಬಗ್ಗೆ ಆ ಪತ್ರಿಕೆಯು ವಿಷಾದ ವ್ಯಕ್ತಪಡಿಸಿ ತಪ್ಪು ಒಪ್ಪಿ ಕೊಂಡಿದೆ.

ಹಿಂದುಸ್ತಾನ ಸರಕಾರದ ೫ ವರುಷದ ಪ್ರಾಯಜ ಬಾಂಡುಗಳನ್ನು ೧೯೪೮ ಡಿಸೆಂಬರ ೧ ನೇ ತಾ. ದಿನ ೧೧ ಗಂಟೆಗೆ ಮುಂಬಯಿ ಕಾವಸಜಿ ಜಹಾಂಗೀರ ಭವನದಲ್ಲಿ ಒಡೆಯಲಾಗುವದು. ಇವುಗಳನ್ನು ೬ ತಿಂಗಳಿಗೊಮ್ಮೆ ತೆಗೆಯುವ ಪದ್ಧತಿಯಿದ್ದು ಇದು ೧೦ ನೇಯ ಸಲವೂ ಕೊನೆಯದೂ ಆಗಿರುತ್ತದೆ.

ಮದ್ರಾಸ

ಹೈದರಾಬಾದ-ಮದ್ರಾಸ ಗಡಿಗಳಲ್ಲಿರುವ ಕೃಷ್ಣಾ ಪೆನ್ನಾರ ಒಡ್ಡಿನ ಯೋಜನೆಯನ್ನು ಕೈಕೊಳ್ಳಬೇಕೆಂದು ನಿರ್ಧರಿಸಲಾಗಿದ್ದು ಇದಕ್ಕೆ ೭೮ ಕೋಟಿ ರೂ. ಗಳಷ್ಟು ವೆಚ್ಚ ತಗಲಬಹುದೆಂದು ಅಂದಾಜ ಮಾಡಲಾಗಿದೆ. ಇದರಿಂದ ಮದ್ರಾಸ ಪ್ರಾಂತದ ೩೫ ಲಕ್ಷ ಎಕರೆ ಭೂಮಿ ನೀರುಣ್ಣುವದಲ್ಲದೆ ಮದ್ರಾಸ ಮೊದಲಾದ ಕೆಲ ಮುಖ್ಯ ಪಟ್ಟಣಗಳಿಗೆ ಕುಡಿಯುವ ನೀರಿನ ನಿರಂತರ ಪೂರೈಕೆಯಾಗುವದು.

ಇಡೀಹಿಂದುಸ್ತಾನದಲ್ಲಿ ಕೇಂದ್ರ, ಪ್ರಾಂತಗಳೆಂಬ ಭೇದವಿಲ್ಲದೆ ಒಂದೇ ಭಾಷೆ ಸರಕಾರಿ ಕೋರ್ಟ ಕಚೇರಿಗಳಲ್ಲಿ ಉಪಯೋಗಿಸಲ್ಪಡಬೇಕೆಂದು ಹಿಂದುಸ್ತಾನ ರಾಷ್ಟ್ರೀಯ ಉದಾರ ಮತವಾದಿಗಳ ಮಹಾಮಂಡಲದ ಅಧ್ಯಕ್ಷರಾದ ಶ್ರೀ ಟಿ ಆರ್. ವೆಂಕಟರಾಮ ಶಾಸ್ತ್ರಿಯವರು ತಾ. ೯ ರಂದು ಒಂದು ಹೇಳಿಕೆ ಹೊರಡಿಸಿದ್ದಾರೆ.

ಮದ್ರಾಸ ಶಾಸನ ಸಭೆಯ ಕಮ್ಯುನಿಸ್ಟ ಸದಸ್ಯರಾದ ಶ್ರೀ ಪಿ ವೆಂಕಟೇಶ್ವರಲು ಅವರು ಕಳೆದ ೭ ತಿಂಗಳಿಂದ ಫರಾರಿಯಾಗಿದ್ದು ತಾ. ೮ ರಂದು ವಿಜಯವಾಡ ಪೋಲೀಸರಿಂದ ಬಂಧಿಸಲ್ಪಟ್ಟಿರುವರೆಂದು ವರದಿಯಾಗಿದೆ. ಗನ್ನಾವರವ್ ಎಂಬಲ್ಲಿ ಅವರಿಗೆ ಆಶ್ರಯ ಕೊಟ್ಟವರನ್ನೂ ಬಂಧಿಸಲಾಗಿದೆ.

ಮದ್ರಾಸ ಸರಕಾರದವರು ಆಹಾರದ ಉತ್ಪಾದನವನ್ನು ಹೆಚ್ಚಿಸುವದಕ್ಕಾಗಿ ಪ್ರತಿ ಜಿಲ್ಹೆಯಲ್ಲಿಯೂ ಒಂದು ಹಣ್ಣಿನ ತೋಟ ಮಾಡಲಿದ್ದಾರೆಂದು ಒಕ್ಕಲತನ ಮಂತ್ರಿ ಶ್ರೀ ಕೆ. ಮಾಧವ ಮೆನನ್ನರು ಪತ್ರಿಕಾ ಕರ್ತರಿಗೆ ಅರುಹಿದರು.

ದಕ್ಷಿಣ ಭಾರತದಿಂದ ಜಯಪುರ ಕಾಂಗ್ರೆಸಿಗೆ ಹೋಗುವವರ ಅನುಕೂಲತೆಗಾಗಿ ಮದ್ರಾಸದಿಂದ ಎರಡು ಸ್ಪೇಶಲ ಉಗಿಬಂಡಿಗಳು ಹೊರಡುವವು. ಈ ಸ್ಪೇಶಲ ಗಾಡಿಗಳು ವಿಜಯವಾಡ ಹಾಗು ಬಾಲಹರ್ಷ ಮಾರ್ಗವಾಗಿ ಹೋಗುವವು ನಿಶ್ಚಿತ ತಾರೀಖು ಇನ್ನೂ ತಿಳಿದಿಲ್ಲ.

ಪಂ. ಜವಾಹರಲಾಲರ ವರ್ಧಂತಿಯ ಉತ್ಸವದ ನಿಮಿತ್ತ ಮದ್ರಾಸ ನಗರದಲ್ಲಿ ಬಡವರಿಗೆ ಬಟ್ಟೆಬರೆ ಹಂಚಿದ್ದಲ್ಲದೆ ಅನ್ನಸಂತರ್ಪಣೆ ನಡೆದಿತು. ಸಂಜೆಗೆ ನಗರದ ಬೇರೆ ಬೇರೆ ಭಾಗಗಳಲ್ಲಿ ನಡೆದ ಸಭೆಗಳಲ್ಲಿ ಪಂ. ನೆಹರೂರ ಧುರೀಣತ್ವದಲ್ಲಿ ವಿಶ್ವಾಸ ವ್ಯಕ್ತಗೊಳಿಸುವ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ವಿಲಾಸ ವಸ್ತುಗಳ ಮೇಲೆ ಹೆಚ್ಚಿನ ಕರ

ಅತಿ ಪ್ರಸರಣವನ್ನು ತಡೆಯುವ ಮುಂದಿನ ಹೆಜ್ಜೆಯೆಂದು ಭಾರತ ಸರಕಾರವು ತಾ ೯ ರಂದು ಒಂದು ಘೋಷಣೆ ಹೊರಡಿಸಿ ವಿಲಾಸ ವಸ್ತುಗಳ ಮೇಲಿನ ಕರ ಹೆಚ್ಚಿಸಿದೆಯೆಂದು ಸಾರಿದೆ. ಈ ಘೋಷಣೆಯಲ್ಲಿ ಹತ್ತಿ ಮತ್ತು ಜವಳಿಗಳ ಮೇಲಿನ ನಿರ್ಯಾತಕರವನ್ನು ೧೦೦ ಕ್ಕೆ ೨೫ ರಿಂದ ೨೦ ರಷ್ಟು ಕಡಿಮೆ ಮಾಡುವದು, ಔಡಲ ಎಣ್ಣೆ ಮತ್ತು ಔಡಲ ಬೀಜಗಳ ಮೇಲಿನ ನಿರ್ಯಾತಕರವನ್ನು ಕೂಡಲೇ ರದ್ದುಗೊಳಿಸುವದು ಇವೇ ಮೊದಲಾದ ಅಂಶಗಳು ಅಡಕವಾಗಿವೆ.

ಬೀಡಿ, ಬ್ರ್ಯಾಂಡಿ, ವಿಸ್ಕಿ, ಇತರ ಮಾದಕ ಪೇಯಗಳು, ಕಚ್ಚಾ ಮತ್ತು ಪಕ್ಕಾ ತಂಬಾಕು, ಸಿಗರೇಟು, ಬಂಗಾರ ಬೆಳ್ಳಿಗಳ ಕಲಪು ಮಾಡಿದ ಗೊಂಬೆ ಮೊದಲಾದ ವಸ್ತುಗಳು ಇಂತಹ ವಿಲಾಸ ಪದಾರ್ಥಗಳ ಮೇಲೆ ಆಯಾತ ಕರವನ್ನು ಹೆಚ್ಚಿಸಲಾಗಿದೆ. ಮೋಟಾರುಗಳು, ಕಾರುಗಳು, ಟ್ಯಾಕ್ಸಿಗಳು ಇವುಗಳ ಮೇಲಿದ್ದ ಕರವನ್ನು ೧೦೦ ಕ್ಕೆ ೫೦ ರಿಂದ ೬೦ ಕ್ಕೆ ಏರಿಸಲಾಗುವದು. ಆದರೆ ಸಾರಿಗೆಯ ಅವಶ್ಯಕತೆಯ ದೃಷ್ಟಿಯಿಂದ ಮೋಟಾರ ಸೈಕಲ, ಬಸ್ಸುಗಳು, ಸಾರಿಗೆ ವಾಹನಗಳು ಮೊದಲಾದವುಗಳ ಮೇಲಿನ ಕರವನ್ನು ಹೆಚ್ಚಿಸಿಲ್ಲ.

ಮುಂಬಯಿ ನಗರದಲ್ಲಿ ಮೇಲ್ಕಾಣಿಸಿದ ಘೋಷಣೆಯಿಂದ ಉದ್ದಿಮೆದಾರರಿಗೂ ಅರ್ಥಶಾಸ್ತ್ರಿಗಳಿಗೂ ಅಷ್ಟೊಂದು ಹುರುಪುಂಟಾಗಿಲ್ಲವೆಂದು ತಿಳಿಯುತ್ತದೆ. ಆದರೂ ಇವರು ಬಟ್ಟೆಯ ಮತ್ತು ಔಡಲ ಬೀಜ, ಔಡಲ ಎಣ್ಣೆ ಇವುಗಳ ಮೇಲಿನ ನಿರ್ಯಾತಕರವನ್ನು ಇಳಿಸಿದ್ದನ್ನು ಸಂತೋಷದಿಂದ ಸ್ವಾಗತಿಸಿದ್ದಾರೆ. ದೇಶದಲ್ಲಿ ಸಾರಿಗೆಯ ತೊಂದರೆ ಇರುವಾಗ ಮೋಟಾರ ಕಾರುಗಳನ್ನು ವಿಲಾಸ ವಸ್ತುಗಳೆಂದು ಪರಿಗಣಿಸಿ ಅವುಗಳ ಮೇಲೆ ಹೆಚ್ಚಿಗ ಕರ ಹೇರುವದು ಸರಿಯಲ್ಲವೆಂದು ಮುಂಬಯಿ ವಣಿಕ್ ಸಂಘದ ಅಧ್ಯಕ್ಷರಾದ ಶ್ರೀ ಎ.ಡಿ. ಫಿನ್ನೆಯವರು ಹೇಳಿದ್ದಾರೆಂದು ತಿಳಿಯುತ್ತದೆ.

ಮಧ್ಯಪ್ರಾಂತ

ಬಟ್ಟೆಯ ಉತ್ಪಾದನೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಎಲ್ಲ ಜವಳಿ ಗಿರಣಿಗಳು ಎರಡು ಪಾಳಿಯ ಕೆಲಸವನ್ನು ಪ್ರಾರಂಭಿಸಬೇಕೆಂದು ಮಧ್ಯಪ್ರಾಂತ ಸರಕಾರದ ಆದೇಶ ಹೊರಟಿರುದದಾಗಿ ತಿಳಿಯುತ್ತದೆ.

ರಾ. ಸ್ವ. ಸೇ. ಸಂಘದ ಸಂಚಾಲಕರಾದ ಶ್ರೀ ಎಂ. ಎಸ್. ಗೋಳವಲಕರರನ್ನು ದಿಲ್ಲಿಯ ಪೋಲೀಸರು ವಿಮಾನದಿಂದ ನಾಗಪುರಕ್ಕೆ ತಂದು ನಾಗಪುರ ಕೇಂದ್ರ ಕಾರಾಗಾರದಲ್ಲಿ ಸ್ಥಾನಬದ್ಧತೆಯಲ್ಲಿಟ್ಟಿದ್ದಾರೆಂದು ತಿಳಿಯುತ್ತದೆ.

ನಿರಾಶ್ರಿತರ ಪರಿಹಾರ ಮತ್ತು ಪುನರ್ನಿವೇಶನದ ಕೇಂದ್ರ ಸರಕಾರದ ಮಂತ್ರಿ ಶ್ರೀ ಮೋಹನಲಾಲ ಸೆಕ್ಸೇನಾರವರು ದಿಲ್ಲಿಯಿಂದ ತಾ. ೧೩ ರಂದು ವಿಮಾನದಿಂದ ನಾಗಪುರಕ್ಕೆ ಆಗಮಿಸಿ ಇಲ್ಲಿಯ ನಿರಾಶ್ರಿತರ ಪರಿಹಾರ ಕಾರ್ಯವನ್ನು ಪರಿಶೀಲಿಸಿದರು.

ಹೈದರಾಬಾದ

ರಸ್ತೆ ಸಾರಿಗೆ ಶಾಖೆಗಾಗಿ ತರಿಸಿದ್ದ ಮತ್ತು ಈ ವರೆಗೆ ಮುಂಬಯಿ ಧಕ್ಕೆಯಲ್ಲಿ ಬಿದ್ದ ೧೯೦ ಬಸ್ಸುಗಳನ್ನು ಹೈದರಾಬಾದಕ್ಕೆ ತರುವದು ನಡೆದಿದ್ದು ಈಗಾಗಲೇ ೮೮ ಬಸ್ಸುಗಳು ಬಂದಿವೆಯೆಂದೂ ಇದಕ್ಕಾಗಿ ಒಂದು ಕೋಟಿ ರೂ. ವೆಚ್ಚ ಮಾಡಲಾಗಿದೆಯೆಂದೂ ತಿಳಿಯುತ್ತದೆ.

ಹೈದರಾಬಾದ ಕಾಂಗ್ರೆಸಸದಸ್ಯರ ಪ್ರತಿಜ್ಞಾಪತ್ರಿಕೆಗಳು ಸಿದ್ಧವಾಗಿದ್ದು ಅವುಗಳಲ್ಲಿ "ನಿಜಾಮರ ಕೃಪಾಛತ್ರದಲ್ಲಿ ಹೊಣೆಗಾರ ಸರಕಾರ ಸ್ಥಾಪಿಸಲು ಪ್ರಯತ್ನಿಸುವೆ" ಎಂಬ ವಾಕ್ಯವನ್ನು ತೆತ್ತು ಹಾಕಲಾಗಿದೆಯೆಂದು ತಿಳಿಯುತ್ತದೆ.

ಲಂಡನದಲ್ಲಿಯ ಹೈದರಾಬಾದ ಏಜಂಟ ಜನರಲರ ಕಚೇರಿಯನ್ನು ಮುಚ್ಚಿ ಬಿಡಲಾಗುವದೆಂದು ಸರಕಾರಿ ವಕ್ತಾರರು ಹೇಳಿದರಾಗಿ ತಿಳಿಯುತ್ತದೆ.

ಮುಂಬರುವ ಹೈದರಾಬಾದ ಘಟನಾ ಸಮಿತಿಯ ಚುನಾವಣೆಯಲ್ಲಿ ಹೈದರಾಬಾದವನ್ನು ಭಾಷಾನುಗುಣವಾಗಿ ವಿಭಜಿಸಿ ಆಯಾ ಪ್ರಾಂತಗಳಲ್ಲಿ ವಿಲೀನಗೊಳಿಸಬೇಕೆಂಬುದೇ ಕೆಲವು ರಾಜಕೀಯ ಪಕ್ಷಗಳ ಚುನಾವಣ ಘೋಷಣೆಯಾಗಬಹುದೆಂದು ತಿಳಿದು ಬರುತ್ತದೆ.

ನಾರದ ಭವಿಷ್ಯ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಭಡೆ ಭವಿಷ್ಯಕಥನ ಅಫೀಸ ಖಡೇಬಜಾರ, ಬೆಳಗಾವಿ

ನವಂಬರ ೨೨ ರಿಂದ ೨೮ ರ ವರೆಗೆ

ಮೇಷ

ಸ್ವತಃ ನಿಮಗೆ ಮತ್ತು ಹೆಂಡತಿಗೆ ಒಳ್ಳೆ ಆರೋಗ್ಯಭಾಗ್ಯ. ಆದರೆ ಮಕ್ಕಳಲ್ಲಿ ಒಬ್ಬಿಬ್ಬರಿಗೆ ಬಹಳ ಕ್ಲೇಶ ಅಲ್ಲದೆ ಅವರೆಲ್ಲರ ವೃತ್ತಿ ಚಮತ್ಕಾರಿಕ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಬಂಧುವರ್ಗದವರಲ್ಲಿ ಉತ್ಕರ್ಷ ಅವರ ವರ್ತನವೂ ಮಿತ್ರತ್ವದ್ದೆ. ಉದ್ಯೋಗದಲ್ಲಿ ಒಳ್ಳೆ ಪ್ರಗತಿ, ತುಂಬ ಲಾಭ ಮತ್ತು ಒಳ್ಳೆ ಪ್ರತಿಷ್ಠೆ ಆದರೆ ಮನಸ್ಸಿನಲ್ಲಿ ತಿರುವು ಮರುವು ವಿಚಾರಗಳಿಂದ ಒಳ್ಳೆ ಗೊಂದಲ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ನ್ಯಾಯಕರ್ತರ ದೃಷ್ಟಿ ನಿಮ್ಮ ವಿರುದ್ಧವೇ ಆದರೆ ಪುರಾವೆಗಳು ಬಹಳಿರುವದರಿಂದ ತೀರ್ಪು ಯಶಪ್ರದವೇ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರವೇ ಅನುಕೂಲ. ಅಶ್ವಿನಿಯ ೪ ಮತ್ತು ಭರಣಿಯ ೩ ಚರಣಗಳಿಗೆ ಮಾತ್ರ ತೊಂದರೆಯಿಂದಲೆ ಯಶಸ್ಸು. ತಾ. ೨೨, ೨೫, ೨೮ ಅನುಕೂಲ.

ವೃಷಭ

ನಿಮ್ಮ ಹಾಗು ನಿಮ್ಮ ಹೆಂಡತಿಯ ಪ್ರಕೃತಿಯ ಬಗ್ಗೆ ದಿನವೂ ಕುರಕುರಿ. ಮಕ್ಕಳಿಂದ ಲೋಕಾಪವಾದ ಬರುವಂತಹ ವರ್ತನೆ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಕಡಮೆ. ನೆರೆಯವರಿಂದ ಕಿರಕುಳ ವಿರೋಧ. ಉದ್ಯೋಗದಲ್ಲಿ ಪ್ರಗತಿ ಕಡಮೆಯೇ. ಆದರೆ ಪ್ರತಿಷ್ಠೆ ಮತ್ತು ಲಾಭ ಅನುಕೂಲ. ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಒಬ್ಬ ಅಪ್ತಸ್ತ್ರೀ ಬಗ್ಗೆ ಪಾಪಬುದ್ಧಿ ಉಂಟಾಗುವ ಸಂಭವ. ಸ್ಥಾವರದಲ್ಲಿ ಹೊಸ ಹೆಚ್ಚಳ. ಆದರೆ ಬರುವ ವಾರ್ಷಿಕ ಉತ್ಪನ್ನದಲ್ಲಿ ಸ್ವಲ್ಪ ಹಾನಿ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಕೃತ್ತಿಕೆಯ ೪ ನೆ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೨, ೨೬, ೨೭ ಅನುಕೂಲ.

ಮಿಥುನ

ನಿಮ್ಮ ಸಹಿತ ಎಲ್ಲರ ಪ್ರಕೃತಿ ಉತ್ತಮ. ಆದರೆ ಪ್ರತಿಯೊಂದರಲ್ಲಿ ಲೋಕಚರ್ಚೆಯಾಗುವಂತಹ ಸ್ತ್ರೀ ವರ್ಚಸ್ಸು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹು ಮೂಲ್ಯ. ಮಿತ್ರ ಸುಖ ವಿಶೇಷ ಹಿತಕಾರಕ ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸುಯಶಸ್ಸು. ಅತಿ ಸಾಹಸದ ಕೆಲ ಕೃತ್ಯಗಳು ಮಾಡಲ್ಪಡುವದರಿಂದ ಜನರಲ್ಲಿ ಗೌರವ ಮತ್ತು ಪ್ರವಾಸಾದಿ ಕೆಲಸ ಹಿತದ್ದು. ಆದರೆ ಮೃಗಾದ ೪ ನೆ ಮತ್ತು ಆರಿದ್ರೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೨, ೨೩, ೨೫, ೨೮ ಅನುಕೂಲ.

ಕರ್ಕ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳ ಪ್ರಕೃತಿಯಲ್ಲಿ ಸ್ವಲ್ಪ ಕುರಕುರಿ. ಉದ್ಯೋಗದಲ್ಲಿ ಪ್ರತಿಷ್ಠೆ ಅನುಕೂಲ. ಆದರೆ ಪ್ರಗತಿ ಮತ್ತು ಲಾಭ ಅತ್ಯಲ್ಪ. ಪ್ರಾಪಂಚಿಕ ತೊಂದರೆ ನಭೂತೋನ ಭವಿಷ್ಯ ಮಾಡಿಬಿಡುವಂತಹದು ಮತ್ತು ಹಿಡಿಯಬೇಕೋ ಬಿಡಬೇಕೋ ಎನ್ನುವಷ್ಟು ಮನಸ್ಸಿನಲ್ಲಿ ಉದ್ವೇಗವನ್ನು ಹುಟ್ಟಿಸುವಂಥ ಅನೇಕ ಸಂಗತಿಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಪುಷ್ಯದ ೪ ನೆ ಆಶ್ಲೇಷಾದ ಮೊದಲನೆ ೩ ಚರಣಗಳಿಗೆ ಹೆಚ್ಚು ತೊಂದರೆ. ತಾ. ೨೨, ೨೬, ೨೭ ಅನುಕೂಲ.

ಸಿಂಹ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸಾಧಾರಣವೇ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಮಕ್ಕಳಲ್ಲಿ ಒಬ್ಬರ ಭಾಗ್ಯ ಅನಪೇಕ್ಷಿತವಾಗಿ ಉದಯವಾಗುವ ಸಂಭವ. ಉದ್ಯೋಗದಲ್ಲಿ ಪ್ರತಿಷ್ಠೆ ಅಷ್ಟಕ್ಕಷ್ಟೆ. ಆದರೆ ಪ್ರಗತಿ ಜೋರಿನದು ಮತ್ತು ಲಾಭವೂ ತುಂಬ ಖರ್ಚು ಹೆಚ್ಚು. ಮಿತ್ರಸುಖ ಉತ್ತಮ. ಪೂಜ್ಯ ಜನರ ಭೆಟ್ಟಿ ಸಹವಾಸ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆದರೆ ಮಘೆಯ ೪ ನೆ ಮತ್ತು ಪೂರ್ವಾದ ಮೊದಲಿನ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೬, ೨೭, ೨೮ ಅನುಕೂಲ.

ಕನ್ಯಾ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ, ಆದರೆ ಮಕ್ಕಳ ಪ್ರಕೃತಿ ಕೆಡುವದು ಅಲ್ಲದೆ ನಿಮಗೆ ಕೀರ್ತಿ ಬರುವಂತೆ ಅವರು ವರ್ತಿಸುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿಪ್ರತಿಷ್ಠೆ ಮತ್ತು ಲಾಭ ತುಂಬ ಆದರೆ ಏನೇನೋ ಕೆಲಸ ಮಾಡುವದರಲ್ಲಿ ಹಣ ವೆಚ್ಚವಾಗುವದರಿಂದ ಮನಸ್ಸು ಉದ್ವಿಗ್ನಗೊಳ್ಳುವದು. ಅಪ್ತರಲ್ಲಿಯ ತಂಟೆಯನ್ನು ಬಗೆಹರಿಸಲು ಶಿಫಾರಸು ಮಾಡುವದರಲ್ಲಿ ಅದು ಮತ್ತಿಷ್ಟು ಹೆಚ್ಚು ತೊಂದರೆ ಫಜೀತಿಯಾಗುವ ಸಂಭವ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಡುವದು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರೆಯ ೪ ನ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೨, ೨೬, ೨೭ ಅನುಕೂಲ.

ತುಲಾ

ಪ್ರಕೃತಿ ಉತ್ತಮ. ಎಲ್ಲದರಲ್ಲಿಯೂ ಬಹಳ ಉತ್ಕರ್ಷವಾಗುವಂಥ ಒಂದೆರಡು ಸಂಗತಿ ಸಂಭವಿಸುವ ಯೋಗ. ಆದರೆ ಅದರಲ್ಲಿಯ ನ್ಯೂನಾಧಿಕ್ಯದ ಬಗ್ಗೆ ನಿಮ್ಮ ನಿಮ್ಮಲ್ಲಿಯ ಮತಭೇದದಿಂದ ಬಹಳ ಗದ್ದಲವೇಳುವ ಅಂಜಿಕೆ. ಉದ್ಯೋಗದಲ್ಲಿ ಪ್ರಗತಿ. ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಆ ಬಗ್ಗೆ ಹಿತಶತ್ರುಗಳು ಸುಳ್ಳೊಂದು ಸೊಟ್ಟೊಂದು ಸುದ್ದಿ ಎಬ್ಬಿಸಿ ಜನರಲ್ಲಿ ತಪ್ಪು ತಿಳುವಳಿಕೆಯನ್ನು ಹಬ್ಬಿಸುವ ದುಷ್ಟ ಪ್ರಯತ್ನ ಮಾಡುವದು. ವಾದದಲ್ಲಿಮತ್ತು ಸ್ಪರ್ಧೆಯಲ್ಲಿ ಒಳ್ಳೆಯಶಸ್ಸು. ಆದರೆ ತಲೆಕತ್ತರಿಸಿದರೂ ಬಾಲದಿಂದ ಹೊಡೆಯುವ ಹಾವಿನ ಹಾಗೆ ಶತ್ರುಗಳನ್ನು ಬಗ್ಗು [illegible] ಇದರಿಂದ ಮನಸ್ಸಿನಲ್ಲಿ ದಗದಗಿ. [illegible] ಮತ್ತು ಸುಖದ ಪ್ರವಾಸ ಭೆಟ್ಟಿ ಮತ್ತು ಪತ್ರವ್ಯವಹಾರ ಸಹ ಅನುಕೂಲವೆ. ಆದರೆ ಚಿತ್ತಾದ ೪ ನೆ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೨, ೨೩, ೨೫, ೨೮ ಅನುಕೂಲ.

ವೃಶ್ಚಿಕ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯ ಪ್ರಕೃತಿಯಲ್ಲಿ ಮಾತ್ರ ಸ್ವಲ್ಪ ಕುರಕುರಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭದ ಆಶೆ ನಿಮ್ಮ ಕಲ್ಪನೆ ಮೀರಿ ಏರಿಹೋದರೂ ಪ್ರತ್ಯಕ್ಷವಾಗಿ ಅದು ಪದರಿನಲ್ಲಿ ಬೀಳದೇಹಾದರೆ ಹದಿನೆಂಟು ಅಡಚಣಿಗಳು. ಪ್ರಾಪಂಚಿಕ ಸುಖವೂ ಕೆಲ ಮಾತಿನಲ್ಲಿ ವಿಷಣ್ಣ ಆದರೆ ಕೆಲ ಮಾತಿನಲ್ಲಿ ಆನಂದವುಂಟಾಗುವಂತಹದು. ಮಿತ್ರತ್ವದ ವಿರೋಧ ನಿಮ್ಮ ಮಾತು ಎರಡನೆಯವರ ಮನಸ್ಸಿಗೆ ಹತ್ತುವಂತಹದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯಪಕ್ಷಗಳಲ್ಲಿ ಸಮಾನಸ್ಥಿತಿ. ಆದರೆ ಶತ್ರುವಿಗೆ ಕೆಲ ದುಃಖದ ಪ್ರಸಂಗಗಳು ಬರುವ ಸಂಭವ. ಮಕ್ಕಳಿಂದ ಕೆಲ ಅತ್ಯಂತ ಧೈರ್ಯದ ಕಾರ್ಯಗಳನ್ನು ಮಾಡುವದು. ಪ್ರವಾಸ ದೂರಿನದು ಮತ್ತು ಸುಖದ್ದು ಭೆಟ್ಟಿ ಮಧ್ಯಮ. ಆದರೆ ಪತ್ರವ್ಯವಹಾರ ತೊಂದರೆಯದು. ಅನುರಾಧೆಯ ೪ ನೆ ಮತ್ತು ಜೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಮೆ. ತಾ. ೨೨, ೨೬, ೨೭ ಅನುಕೂಲ.

ಧನು

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳ ಬಗ್ಗೆ ಕೆಲ ಮಟ್ಟಿಗೆ ಕುರಕುರಿ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ತುಂಬ. ಮಿತ್ರ ಸುಖ ಉತ್ತಮ. ಸ್ಥಾವರದಲ್ಲಿ ಹೆಚ್ಚಳ ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ದಗದಗಿ ಬಹಳ ಆದರೆ ಯಶಸ್ಸು ನಿಶ್ಚಿತ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮೂಲೆಯ ೪ ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೨೫, ೨೬, ೨೭, ೨೮ ಅನುಕೂಲ.

ಮಕರ

ನಿಮ್ಮ ಪ್ರಕೃತಿ [illegible] ತೊಂದರೆಯುಂಟಾದೀತು. [illegible] ಪ್ರಕೃತಿ ಮತ್ತು ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ [illegible]. ಸ್ಥಾವರದಲ್ಲಿ [illegible]. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ [illegible] ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಬಹಳ. ಆದರೆ [illegible] ಮತ್ತು ತೊಂದರೆಯೂ [illegible]. [illegible] ಮತ್ತು ಮಿತ್ರರಿಂದ [illegible]. ಪ್ರವಾಸಾದಿ ಕೆಲಸ ಬಹಳ ಉತ್ತಮ. ಉತ್ತರಾಷಾಢದ ೪ ನೆ ಮತ್ತು ಶ್ರವಣದ ಮೊದಲನೆ ೩ ಚರಣಗಳಿಗೆ ತೊಂದರೆ ಹೆಚ್ಚು. ತಾ. ೨೩, ೨೫, ೨೭ ಅನುಕೂಲ.

ಕುಂಭ

ಪ್ರಕೃತಿ ಉತ್ತಮ ಹೆಂಡತಿ ಕೂಡ [illegible] ಮೇಲೆ ವಿರೋಧ ಅಲ್ಲದೆ ಅವಳ [illegible] ಬಂಧುವರ್ಗದಲ್ಲಿ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಬಹಳ ಪ್ರಗತಿ ಉತ್ತಮ ಪ್ರತಿಷ್ಠೆ ಮತ್ತು ತುಂಬ ಲಾಭ. ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಪ್ರತಿಪಕ್ಷದವರದೆ ಹೆಚ್ಚು ಜೋರು. ಪ್ರವಾಸಾದಿ ಕೆಲಸ ಹಿತದ್ದು. ಧನಿಷ್ಠೆಯ ೪ ನೆ ಮತ್ತು ಶತತಾರಕೆಯ ಮೊದಲನೆ. ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೪, ೨೫, ೨೮ ಅನುಕೂಲ.

ಮೀನ

ನಿಮ್ಮ ಪ್ರಕೃತಿ ಉತ್ತಮ ಹೆಂಡತಿಯದೂ ಅನುಕೂಲ. ಆದರೆ ನಿಮ್ಮ ನಿಮ್ಮಲ್ಲಿ ಬಹಳ ಮತಭೇದ ಮಕ್ಕಳಲ್ಲಿ ಉನ್ನತಿ ಅವರೂ ಪ್ರಾಪಂಚಿಕ ಸುಖ ದಗೆದಗಿಯದು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬಹಳ ಉತ್ತಮ. ಆದರೆ ಬಹಳ ಅವಚಿತ ಲಾಭದ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಮಿತ್ರತ್ವದಲ್ಲಿ ವಿರೋಧ. ದೈವೀ ದೃಷ್ಟಾಂತವಾಗುವ ಸಂಭವ. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಹೆಚ್ಚು ಉತ್ತಮ. ಉತ್ತರಾಭಾದ್ರಪದದ ೪ ನೇ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೨, ೨೬, ೨೭ ಉತ್ತಮ.

Reg. No. B. 5148

ಒಂದು ವಿಮರ್ಶೆ

ಮುಂಬಯಿ ಕನ್ನಡ ವಾಚನಮಾಲೆಯ "ಮೊದಲ ಓದು"

(ಲೇ:- ವೀ. ವಿ. ಗುಗ್ರಿ, ಶಿಕ್ಷಕ, ರಕೀಸೂರ)

ನವಯುಗದ ಕ್ರಾಂತಿಪಥದಲ್ಲಿ ಅಡಿಯಿಟ್ಟ ಸ್ವತಂತ್ರ ಭಾರತದ ಧ್ಯೇಯಕ್ಕನುಗುಣವಾಗಿ ಸ್ವತಂತ್ರ ಭಾರತಕ್ಕೆ ತಕ್ಕ ವ್ಯಕ್ತಿಗಳನ್ನು ಸಿದ್ಧಪಡಿಸಲು ನಮ್ಮ ವಿದ್ಯಾಖಾತೆಯವರು ಪಠ್ಯಪುಸ್ತಕಗಳ ಪುನರ್ರಚನೆಯನ್ನು ಪ್ರಾರಂಭಿಸಿರುವದು ಸ್ತುತ್ಯವಷ್ಟೆ? ಅದರ ಅವರಿಂದು ೧ ನೆಯ ಇಯತ್ತೆಯ ಬಾಲಕರಿಗಾಗಿ "ಮೊದಲ ಓದು" ಎಂಬ ತಮ್ಮ ಪಠ್ಯದ ಪ್ರಥಮ ಪುಸ್ತಕವನ್ನು ಇದೀಗ ನಮ್ಮ ಮುಂದೆ ಇಟ್ಟಿರುವರು. ಈ ಹಿಂದೆ ಎರಡು ವರ್ಷಗಳಲ್ಲಿ ಆಗಬೇಕಾದ ವಿಷಯವನ್ನು ಒಂದೇ ವರ್ಷದಲ್ಲಿ ಮಾಡಿಸಲು ಯೋಗ್ಯವಾದಂಥ ಮೊದಲ ಪುಸ್ತಕವನ್ನು ಅವು ಹೇಗೆ ರಚಿಸುವರೋ ಎಂದು ಹಾತೊರೆದು ನಿರೀಕ್ಷಿಸುತ್ತಿದ್ದ ಶಿಕ್ಷಕವೃಂದಕ್ಕೆ ಕಣ್ಣು ಕಟ್ಟಿ ಕತ್ತಲೆಯ ಕಾಡಡವಿಯಲ್ಲಿ ಕೈಬಿಟ್ಟಂತಾಗಿದೆ. ಮಾನ್ಯ ಸಂಪಾದಕ ಮಂಡಲದವರು ಈ ಪುಸ್ತಕದಲ್ಲಿ ತಾವು ಅನುಸರಿಸಿದ ಧೋರಣ, ಕಲಿಸುವ ಕ್ರಮ ಮುಂತಾದವುಗಳನ್ನು ಪ್ರಸ್ತಾವನೆಯಲ್ಲಿ ಸವಿಸ್ತಾರವಾಗಿ ಕೊಟ್ಟಿದ್ದರೆ ಶಿಕ್ಷಕರಿಗೆ ವಿಚಾರಮಾಡಲು ಯೋಗ್ಯವಾಗುತ್ತಿತ್ತು. ಆದರೆ ಅದರಲ್ಲಿ ಸೂಚನೆಗಳೇ ಇಲ್ಲದಿರುವದರಿಂದ ಪುಸ್ತಕದ ಯತದ ಬಗೆಗೆ ಸಂಶಯಗೊಂಡ ನಾನು ಇಲ್ಲಿ ನನಗೆ ತಿಳಿದ ಕೆಲವು ಮಾತುಗಳನ್ನು ಶಿಕ್ಷಣಾಭಿಮಾನಿಗಳ ಮುಂದೆ ಇಡಲು ಪ್ರಯತ್ನಿಸಿರುವೆ.

ಇಂದು ನಮ್ಮ ಬಾಲಕರು ಒಂದು ಹಳೆಯ ಕಾಡಡವಿಯ ದಾರಿಯಲ್ಲಿ ಮಂದಗತಿಯಿಂದ ಸಾಗುತ್ತಿದ್ದಾರೆ. ಅವರನ್ನು ಒಂದು ನೂತನ, ಸುಗಮ ರಾಜಮಾರ್ಗದಲ್ಲಿ ತೀವ್ರಗತಿಯಿಂದ ಸಾಗಿಸಬೇಕೆಂದು ಹಂಬಲಿಸುತ್ತಿದ್ದ ಶಿಕ್ಷಣತಜ್ಞರು ಕನ್ನಡ ವಾಚನಮಾಲೆಯ "ಮೊದಲ ಓದು" ಎಂಬ ಪುಸ್ತಕವನ್ನು ರಚಿಸಿ ಬಾಲಕರ ಬದಲಾಗಿ ಶಿಕ್ಷಕರನ್ನು ಕತ್ತಲೆಯಲ್ಲಿ ನಡೆಯಿಸಹತ್ತಿದ್ದಾರೆ. ಇಂದು ಯಾವ ಶಾಲೆಯಲ್ಲಿಯೇ ಹೋಗಿ ವಿಚಾರಿಸಲಿ, ಎಲ್ಲೆಡೆ "ಏನು ಪುಸ್ತಕ! ಹೇಗೆ ಕಲಿಸಬೇಕು?" ಎಂಬೀ ಉದ್ಗಾರಗಳೇ ಹೊರಡುವವು. ಇದಕ್ಕೆ ಕಾರಣವೆಂದರೆ ಪುಸ್ತಕದಲ್ಲಿ ಅನುಸರಿಸಿದ ಕ್ರಮ. ಇಂದಿನ ಶಿಕ್ಷಕರು ಈ ಕ್ರಮದಿಂದ ಕಲಿತಿರುವದೂ ಇಲ್ಲ, ಕಲಿಸಿರುವದೂ ಇಲ್ಲ.

ರಚನೆಯ ಪದ್ಧತಿ

ಈ ಪುಸ್ತಕದಲ್ಲಿ ಅನುಸರಿಸಿದ ಪದ್ಧತಿಯು ಕಥಾ ಪದ್ಧತಿ ಎಂದು ತಿಳಿಯುತ್ತದೆ. ಇಂದಿನವರೆಗಿದ್ದ ಅಕ್ಷರ ಶಬ್ದ–ವಾಕ್ಯ–ಪದ್ಧತಿಗಳನ್ನು ತಿರಸ್ಕರಿಸಿ ಈ ಪದ್ಧತಿಯನ್ನು ಸ್ವೀಕರಿಸಲಾಗಿದೆ. ಆದರೆ ಈ ಪದ್ಧತಿಯು ಬಾಲಕರ ಮಟ್ಟಕ್ಕೆ ಹೊಂದಿಕೆ ಹೋಲಿಕೆಯಾಗಿರುವುದೇ ಎಂಬುದನ್ನೂ ನೋಡಬೇಕಷ್ಟೇ? "ಬಾಲಕರು ಕಲ್ಪನಾ ಸಾಮ್ರಾಜ್ಯ ವಿಹಾರಿಗಳು" ಎಂದು ಮಾನಸ ಶಾಸ್ತ್ರಜ್ಞರು ಹೇಳುತ್ತಿರುವರು. ಆದರೆ ಇಲ್ಲಿ ಬಾಲಕರ ಕಲ್ಪನಾ ಶಕ್ತಿಗೆ, ಮನೋರಂಜನೆಗೆ, ಆಕರ್ಷಣೆಗೆ ಪ್ರಚೋದನೆ ಕೊಡುವ ಪಾಠಗಳೇ ಇಲ್ಲ "ಶಾಲೆಗೆ ಹೋಗುವನು, ಹೋಗುವರು, ಚೆಂಡು, ಗುಂಡು, ಕುಂಟಲಪಿ ಆಡುವನು, ಆಡುವರು" ಎಂಬೀ ಬಗೆಯ ಪಾಠಗಳು ಕಥೆಗಳೆಂದು ಯಾರು ಹೇಳುವರು? ಈ ಪದ್ಧತಿ ಕಥಾಪದ್ಧತಿ ಎಂದು ಹೇಗೆ ಹೇಳಬೇಕು? ಕಥೆಗೆ ಒಂದು ವಿಷಯವಿದೆ. ಕಲ್ಪನೆ ಇದೆ, ಮನೋರಂಜನೆ ಇದೆ. ಅದಕ್ಕೆ ಒಂದು ಆದಿ ಇದೆ, ಅಂತ್ಯವಿದೆ. ಈ ಪುಸ್ತಕದ ಕಥೆಗಳ ಆದಿ–ಅಂತ್ಯಗಳೆಂದರೆ ಒಂದೇ ವಾಕ್ಯದ ಕರ್ತೃ, ಕ್ರಿಯಾಪದಗಳನ್ನು ಬೇರೆ ಶಬ್ದಗಳಲ್ಲಿಡುವದು. ಇದರಿಂದ ಬಾಲಕರ ಮನರಂಜನೆಮಾಡಿ, ಹರಿಯುವ ಅವರ ಚಿತ್ತವನ್ನು ಒಂದೆಡೆ ಸೆಳೆದು ವಿಷಯಗ್ರಹಣ ಮಾಡಿಸಲು ಎಂದೂ ಸಾಧ್ಯವಿಲ್ಲ. ಬಾಲಕರ ಮನವನ್ನು ಸೆಳೆಯುವಲ್ಲಿ ನಾವು ತಪ್ಪಿದರೆ ನಮ್ಮ ಕರ್ತವ್ಯದ ಸೋಲನ್ನು ಒಪ್ಪಿದಂತೆಯೇ ಸರಿ. "ಒಮ್ಮೆ ಕಂಡ ವಸ್ತು ಮತ್ತೊಮ್ಮೆ ಆಕರ್ಷಕತೆಯನ್ನು ಹೊಂದದು" ಈ ತತ್ವವು ಸಹಜವಷ್ಟೆ? ಓದಿನಲ್ಲಿಯ ಮೊದಲಿನ ಒಂದೆರಡು ಪಾಠಗಳು ಕೆಲವು ವಾರಗಳ ವರೆಗಾದರೂ ಸಾಗಬಹುದು. ಅವುಗಳಲ್ಲಿ ಬರುವ ಚಿತ್ರಗಳು ಒಂದೇ ಬಗೆಯ ನಾಲ್ಕೆರಡು ಚಿತ್ರಗಳು. ಈ ಚಿತ್ರಗಳನ್ನು ಬಾಲಕರು ಒಂದೆರಡು ಸಲ ನೋಡಿ ಉಳಿದ ದಿವಸಗಳೆಲ್ಲವನ್ನು ಶಿಕ್ಷಕನು ಹೇಳಿದಂತೆ ಅಥವಾ ಒಬ್ಬ ಬಾಲಕನು ಓದಿದಂತೆ ಕೇವಲ ಗಿಳಿಯಂತೆ ಯಾವ ಕಡೆಗಾದರೂ ಮುಖದಿರುವಿ ಇಲ್ಲವೆ ಬೇರೊಂದು ವಸ್ತುವಿನೊಡನೆ ಆಡುತ್ತ ಅನ್ನಬಹುದು. ಈ ಸಂಗತಿ ಬಾಲಕವರ್ಗದ ಶಿಕ್ಷಕರಿಗೆ ಹೊಸದೇನಲ್ಲ. ಈ ರೀತಿಯಾಗಿ ನಮ್ಮ ಕಲ್ಪನಾಯೋಜನೆಯ ಕುದುರೆಯು ಆಕಾಶದಲ್ಲಿಯೇ ವಿಹರಿಸುತ್ತ ಹೋಗುವದು.

ಕಲಿಸುವ ಕ್ರಮ

ಈ ಹಿಂದೆ ನೈಸರ್ಗಿಕವಾದ ಸ್ವರಾನುಕ್ರಮ ವರ್ಣಸಾದೃಶ್ಯವಾದ 'ರಠಈಕ' ಈ ಕ್ರಮದಿಂದ ಇಲ್ಲವೆ ಚಿತ್ರ ಮುಖಾಂತರ ಮೂಲಾಕ್ಷರಗಳನ್ನು ಕಲಿಸಿ ನಂತರ ಗುಣಿತಾಕ್ಷರಗಳನ್ನು ಕಲಿಸಲಾಗುತ್ತಿತ್ತು. ಇದರಲ್ಲಿ ದೋಷವಿದೆಯೆಂದು ಒಪ್ಪಿದರೂ ಇಲ್ಲಿ ಬಾಲಕರಿಗೂ, ಶಿಕ್ಷಕರಿಗೂ ತಾವು ಕಲಿತ ಕಲಿಸಿದ ವಿಷಯವೆಷ್ಟೆಂಬದನ್ನು ಅರಿಯಲು ಸಾಧ್ಯವಿತ್ತು, ಧೈರ್ಯವಿತ್ತು. ಆದರೆ ಇದರಲ್ಲಿ ಈ ಯಾವ ಮೇಲಿನ ಧೋರಣ ಧೈರ್ಯಗಳು ಇರುವದಿಲ್ಲ ಶಾಲೆಯನ್ನು ಪ್ರವೇಶಿಸಿದ ಕೂಡಲೇ ಮಗುವು ಮೊದಲ ಪಾಠದಲ್ಲಿಯೇ ೮ ಅಕ್ಷರಗಳನ್ನೂ ೩ ಗುರುತುಗಳನ್ನೂ ನೋಡಬೇಕು ೨ ನೇ ಪಾಠದಲ್ಲಿ ಹೋ. ಗು. ಅಕ್ಷರ ಹೊಸದಾಗಿ ಬರುವವು ಒಟ್ಟು ೧೦ ಅಕ್ಷರ ೪ ಗುರುತುಗಳಲ್ಲಿ ಕಲಿಸಿರುವದು ಕೇವಲ ೫ ಮೂಲಾಕ್ಷರಗಳನ್ನು ೩ ನೇ ಪಾಠದಲ್ಲಿ ಅದೇ ಬಸವ ಕನಕರು. ಇದರಲ್ಲಿ 'ರ' ಹೊಸ ಅಕ್ಷರ ಬಂದಿದೆ ಇಲ್ಲಿಯತನಕ ಚಿತ್ರಗಳು ೩ ಬಂದಿರುವವು ಅಕ್ಷರಗಳು ೧೦ ಕಲಿಸುವ ಅಕ್ಷರಗಳು ೯ ಗುರುತುಗಳನ್ನು ಉಪಯೋಗಿಸಿರುವದು ಮೂರು ಕಲಿಸಿರುವುದು ಒಂದೇ 'ಉ'ದ ಗುರುತು. ೪ನೇ ಪಾಠದಲ್ಲಿ ಅದೇ ಶಾಲೆಯಲ್ಲಿ ಕಮಲೆ ಸರಲೆಯರ ಚಿತ್ರ "ಳ—ಮ—ಯ" ಈ ಮೂರು ಹೊಸ ಅಕ್ಷರಗಳನ್ನು ಕಲಿಸಲಾಗಿದ್ದು 'ಎ'ದ ಗುರುತು ಹೇಳಿಕೊಡಲಾಗಿದೆ. ಒಟ್ಟು ಇಬ್ಬರು ಹುಡುಗರು, ಇಬ್ಬರು ಹುಡುಗಿಯರು, ಒಂದು ಶಾಲೆ ಹೀಗೆ ಐದು ಚಿತ್ರಗಳಿಂದ ಹದಿನಾಲ್ಕು ಅಕ್ಷರಗಳನ್ನು, ನಾಲ್ಕು ಗುರುತುಗಳನ್ನು ಉಪಯೋಗಿಸಿ ಗುರುತಿನಲ್ಲಿ ಎರಡನ್ನು ಮಾತ್ರ ಕಲಿಸಲಾಗಿದೆ. ಇಷ್ಟೆಲ್ಲ ಎತ್ತಿ ಹೇಳುವ ಕಾರಣವೆಂದರೆ ಸ್ವಲ್ಪವೇ ಚಿತ್ರಗಳಿಂದ ಹೆಚ್ಚು ಅಕ್ಷರ, ಗುರುತುಗಳನ್ನು ಕಲಿಸಲಾಗಿದೆ. ಮತ್ತು ೨-೩ ಪಾಠಗಳಲ್ಲಿಯೇ ಅರ್ಥಕ್ಕೆ ಸಮೀಪದಷ್ಟು ಅಕ್ಷರಗಳನ್ನು ಕಲಿಸಲಾಗಿದೆ. ಮಕ್ಕಳು ಚಿತ್ರವನ್ನು ನೋಡಿ ಅದನ್ನು ಹೆಸರಿಸಿ ಅದರ ಅಕ್ಷರಗಳನ್ನು ಗುರ್ತಿಸಿ ನೆನಪಿನಲ್ಲಿಡಬಹುದೇ ವಿನಾ ಚಿತ್ರರಹಿತ ವಾಕ್ಯಗಳಲ್ಲಿಯ ಅಕ್ಷರ ಚಿಹ್ನೆಗಳನ್ನು ಸ್ಮರಣೆಯಲ್ಲಿಟ್ಟುಕೊಳ್ಳಲಾರರೆಂಬದನ್ನು ನಾವು ಮರೆಯಬಾರದು. ಇಲ್ಲಿ ಕಲಿಸಲಾದ ೫ ಚಿತ್ರಗಳಿಂದ ೧೪ ಅಕ್ಷರ ೪ ಗುರುತುಗಳು ಬಾಲಕರ ಸ್ಮರಣೆಯಲ್ಲಿ ನಿಲ್ಲಲು ಸಾಧ್ಯವಾಗಲಾರದು.

ಇನ್ನು ಮೊದಲ ಓದಿನಲ್ಲಿ ಅನೇಕ ಅಕ್ಷರ ಅನೇಕಗುರುತುಗಳನ್ನು ಉಪಯೋಗಿಸಿ ಅವುಗಳಲ್ಲಿ ಕೆಲವೇ ಅಕ್ಷರ ಕೆಲವೇ ಗುರುತುಗಳನ್ನು ಕಲಿಸಲಾಗಿದೆ. ಇಲ್ಲಿ ನಾವು ಕಲಿಸಲಾರದ ಅಕ್ಷರ ಗುರುತುಗಳನ್ನು ಉಪಯೋಗಿಸುವುದರ ಅವಶ್ಯಕತೆ ಏನು? ನಾವು ಕಲಿಸದೆ ಬಿಟ್ಟರೆ ಮಗುವು ಅದನ್ನು ನೋಡಿ ಓದಿದವನು ಕಲಿಯದೆ ಬಿಡುವನೇ ಹೇಗೆ? "ಇಂಥ ಅಕ್ಷರವನ್ನು ನಾನು ಕಲಿಸುತ್ತೇನೆ" ಎಂದು ನಿಶ್ಚಯಿಸಿ ಕಲಿಸಿದಾಗಲೇ ಮಗುವು ಕಲಿಯುತ್ತಾನೆಂಬ ವಿಚಾರವೇ? ಮಗುವಿನ ಪಂಚೇಂದ್ರಿಯಗಳ ಮೇಲೆ ಆದ ಸಂಸ್ಕಾರವೆಲ್ಲ ಕಲಿಯುವಿಕೆಯೇ ಆಗಿರುವಾಗ ಅವನು ನೋಡಿ ಓದಿದ್ದನ್ನು "ಬಾಲಕನು ಕಲಿತಿಲ್ಲ ನಾನೀಗ ಕಲಿಸುವೆ" ಎಂಬ ಕಲ್ಪನೆ ಶಿಕ್ಷಣತಜ್ಞರಿಗೆ ಒಪ್ಪಿಗೆಯಾಗಬಹುದೇ? ಪಾಠದಲ್ಲಿ ಬಂದ ಹೊಸ ಅಕ್ಷರ ಗುರುತುಗಳನ್ನು ನಾವು ಕಲಿಸದೇ ಸಾಗಿದಲ್ಲಿ ಮಕ್ಕಳಿಗೆ ಅವುಗಳ ಬಗೆಗೆ ಅಜ್ಞಾನವೂ, ಸಂಶಯವೂ ಉಂಟಾಗುವವಲ್ಲದೆ ಅವರೊಂದು ಯಂತ್ರವಾಗಿ, ನಾವು ಜಗ್ಗಿದಲ್ಲಿಗೆ ಬಂದು ನಿಲ್ಲುವ ಗೊಂಬೆಯಾಗಿ ಪರಿಣಮಿಸುತ್ತಾರೆ.

ಗುಣಿತಾಕ್ಷರಗಳನ್ನು ಕಲಿಸದೆ ಸಾಗುವಾಗ ಆ ಗುಣಿತಾಕ್ಷರಗಳೂ ಹೊಸ ಮೂಲ ಅಕ್ಷರಗಳಾಗಿಯೇ ಪರಿಣಮಿಸಿ ನೆನಪಿನಲ್ಲಿಡಲ್ಪಡುವವು. ಉದಾ:— ೩ನೆಯ ಪಾಠದವರೆಗೆ 'ಅ ಉ ಎ ಓ' ದ ಗುರ್ತಿನ ಅಕ್ಷರಗಳೂ, ೪ನೇ ಪಾಠದವರೆಗೆ 'ಎ'ದ ಗುರ್ತಿನ ೭ ನೇ ಪಾಠದವರೆಗೆ 'ಆ'ದ ಗುರ್ತಿನ ೮ ನೇ ಪಾಠದವರೆಗೆ 'ಔ'ದ ಗುರ್ತಿನ ಅಕ್ಷರಗಳು.

೩ನೆಯ ಪಾಠದಲ್ಲಿ 'ಉ' ದ ಗುರ್ತನ್ನು ಕಲಿಸಲಾಗಿದೆ. ಇಲ್ಲಿ 'ದು.ದ', 'ನು.ನ', 'ರು.ರ' ಎಂದು ಮೂಲಾಕ್ಷರ ಗುಣಿತಾಕ್ಷರಗಳನ್ನು ವಿಂಗಡಿಸಿ ತೋರಿಸಲಾಗಿದೆ. ಈ ವೇಳೆಯಲ್ಲಿ 'ದು-ದ' ಗಳಲ್ಲಿ-ವ್ಯತ್ಯಾಸವೇನು? ಆ ವ್ಯತ್ಯಾಸವಿದ್ದಾಗ ಹೇಗೆ ಅನ್ನಬೇಕು? ಯಾವುದರಂತೆ ಅನ್ನಬೇಕು? ಎಂಬದನ್ನು ಶಿಕ್ಷಕನು ಹೇಳಿಕೊಡಬೇಕಷ್ಟೇ? ಇಲ್ಲಿ 'ು' ಈ ಗುರುತು 'ದ' ಅಥವಾ ಇನ್ನುಳಿದ ಅಕ್ಷರಗಳಿಗೆ ಸೇರಿದಾಗ 'ಉ' ಕಾರ ಗೂಡಿದಂತೆ ಅದರ ಉಚ್ಚಾರವಾಗುವದೆಂದು ಶಿಕ್ಷಕನು ಹೇಳಬೇಕಾಗುವದಲ್ಲವೇ? ಈಗ ಶಿಕ್ಷಕನು 'ಉ' ಅಕ್ಷರದ ಕಲ್ಪನೆ ಮಾಡಿಕೊಡಬೇಕೆ ಕೊಡಬಾರದೇ? ಅಥವಾ ಬಾಲಕರೇ "ಉ ಅಂದರೇನು, ಎಂಥದು?" ಎಂದು ಕೇಳುವದು ಅಸ್ವಾಭಾವಿಕವೇ ಹೇಗೆ? (ಈ ಮಾತು ಎಲ್ಲ ಗುರ್ತುಗಳಿಗೂ ಸಮವಾಗಿದೆ.) ಆಯಾ ಗುರ್ತುಗಳನ್ನು ಕಲಿಸುವಾಗ ಆಯಾ ಪಾಠ ಪಾಠಗಳಲ್ಲಿ ಆ ಆ ಸ್ವರಗಳು ಬಂದಿರುವ ಪಾಠಗಳನ್ನು ಕಲ್ಪಿಸಿಕೊಂಡು ಈ ಗುಣಿತಾಕ್ಷರಗಳ ಕಲ್ಪನೆ ಮಾಡಿಕೊಟ್ಟಿದ್ದರೆ ಬಾಲಕರಿಗೆ ಎಷ್ಟು ಸುಗಮವಾಗುತ್ತಿತ್ತು! ಅಲ್ಲದೆ ಸವರ್ಣ ಸ್ವರಗಳನ್ನು ಒಂದೇ ಪಾಠದಲ್ಲಿ ಅಥವಾ ಒಂದೆಡೆಗೆ ಕಲಿಸುವ ವಿಚಾರವೂ ಇಲ್ಲ. ೩ನೆಯ ಪಾಠದಲ್ಲಿ 'ಉ'ದ ಗುರ್ತು ಕಲಿಸಿದ್ದರೆ ೧೩ ನೆಯ ಪಾಠದಲ್ಲಿ 'ಊ' ದ ಗುರುತು 'ಇ' ದ ಗುರುತು ೬ನೇ ಪಾಠದಲ್ಲಿ 'ಈ' ದ ಗುರುತು ೮ ನೆಯ ಪಾಠದಲ್ಲಿ, 'ಎ'ದ ಗುರುತು ೪ ನೆಯ ಪಾಠದಲ್ಲಿ 'ಏ'ದ ಗುರುತು ೮ ನೆಯ ಪಾಠದಲ್ಲಿ ಹೀಗೆ ಒಂದು ಕ್ರಮವಿಲ್ಲದೆ ಅಕ್ರಮವಾಗಿ ಕಲಿಸುವಿಕೆ ಸಾಗಿದೆ. ೮ ನ್ನೆಯ ಪಾಠದಲ್ಲಿ 'ಒ-ಓ' ಅಕ್ಷರಗಳು ಬಂದಿದ್ದು ಅವುಗಳ ಗುರ್ತಿನ ಅಕ್ಷರಗಳನ್ನು ಅದೇ ಪಾಠದಲ್ಲಿ ಕಲಿಸಲಾಗಿದೆ. ಈ ಕ್ರಮವನ್ನು ಎಲ್ಲಕಡೆಗೆ ಅನುಸರಿಸಿದ್ದರೆ ನೆಟ್ಟಗಿತ್ತು. ಇದೇ ಪಾಠದಲ್ಲಿ 'ಈ–ಏ' ಗುರ್ತಿನ ಅಕ್ಷರಗಳನ್ನು ಕಲಿಸಿದ್ದು ಕೇವಲ ದೀರ್ಘವನ್ನಷ್ಟೇ ಎಳೆದು ಕಲ್ಪನೆ ಮಾಡಿಕೊಡಲಾಗಿದೆ. ಇದನ್ನೆ ಹಿಂದೆ 'ಇ' 'ಎ' ಗಳ ಗುರುತುಗಳನ್ನು ಕಲಿಸುವಾಗ ಮಾಡಿದ್ದರೆ ಎಷ್ಟು ಹಿತವಾಗುತ್ತಿತ್ತು! ಇಲ್ಲಿಯ ಕ್ರಮವೂ ಉಳಿಯುತಿತ್ತು; ಇಲ್ಲಿಯತನಕ ಬಾಲಕರು ಕತ್ತಲೆಯಲ್ಲಿಯೂ ಬರುತ್ತಿದ್ದಿಲ್ಲ. ೬ ನೆಯ ಪಾಠದಲ್ಲಿ 'ನೀಲೆ' ಶಬ್ದ ಬಂದಿದೆ. ಇದರಲ್ಲಿ 'ಇ'ದ ಗುರುತು ಕಲಿಸಿದೆ. ಅಲ್ಲಿಯೇ 'ಈ'ದ ಗುರ್ತೂ ಕಲಿಸಿದ್ದರೆ ನೆಟ್ಟಗಿತ್ತು. ಅಲ್ಲಿ ಬಿಟ್ಟು ಇಷ್ಟು ದೂರ ಬರಲಾಗಿದೆ. 'ಊ' 'ಔ'ದ ಗುರ್ತುಗಳನ್ನು ಒತ್ತಕ್ಷರದ ಪಾಠಗಳಾತನಂತರ ಕಲಿಸಲಾಗಿದೆ. 'ಏ ಉ, ಊ, ಶ, ಷ' ಗಳನ್ನೂ ಸಹ ಒತ್ತಕ್ಷರ ಕಲಿಸಿ ವರ್ಷದ ಕೊನೆ ಗಳಿಗೆಯಲ್ಲಿ ಬಾಲಕರಿಗೆ ಪರಿಚಯ ಮಾಡಿಕೊಡಲಾಗಿದೆ. ವರ್ಷಾಂತ್ಯದವರೆಗೆ ಬಾಲಕರು ಮೇಲೆ ಹೇಳಿದ ಗುರುತು ಸ್ವರಗಳು ಕೂಡಿದ ಶಬ್ದ ವಾಕ್ಯಗಳನ್ನು ಕಲಿಯುವಂತೆಯೇ ಇಲ್ಲ. ಶಿಕ್ಷಕರು ಇಂಥ ಅಕ್ಷರಗಳಿಲ್ಲದ ಶಬ್ದಗಳನ್ನೇ ಹುಡುಕಿ ಅಭ್ಯಾಸ ಸಾಗಿಸಬೇಕು. ಅವನ ವಿಷಯದ ಪೂರ್ಣತೆಯಾಗುವ ಕಾಲವೇ ಅವನಿಗೆ ತಿಳಿಯದು. ಇದಿಂಥ ಯೋಜನೆ.

ಒತ್ತಕ್ಷರದ ಪಾಠಗಳು

ಈ ಮೊದಲು ಹೇಳಿದಂತೆ ಮೂಲಾಕ್ಷರ ಗುಣಿತಾಕ್ಷರಗಳನ್ನು ಕಲಿಸುವಲ್ಲಿ ಹೊಂದಿಕೆ ಇಲ್ಲದಿರುವಂತೆ ಒತ್ತಕ್ಷರಗಳನ್ನು ಕಲಿಸುವಲ್ಲಿಯೂ ಒಂದು ನಿರ್ದಿಷ್ಟ ವಿಚಾರಯೋಜನೆಯಿಂದ ಸಾಗಿರುವದಿಲ್ಲ. ಒತ್ತಕ್ಷರದ ಪಾಠವು ೯ ನೆಯ ಪಾಠಕ್ಕೇ ಪ್ರಾರಂಭವಾಗಿದೆ. ಅಲ್ಲಿ 'ಗ'ದ ಒತ್ತನ್ನೊಂದೇ ಕಲಿಸಲಾಗಿದೆ. ೧೦ನೆಯ ಪಾಠದಲ್ಲಿ 'ನ-ಣ-ಟ-'ಗಳ ಒತ್ತಕ್ಷರಗಳನ್ನು ಉಪಯೋಗಿಸಲಾಗಿದ್ದು ಅವುಗಳಲ್ಲಿ 'ಣ'ದ ಒತ್ತನ್ನೊಂದೇ ಕಲಿಸಲಾಗಿದೆ. ಹಿಂದೆ ಕಲಿತ 'ಗ'ದ ಪೃಥಿಕರಣದ ಸುದ್ದಿಯೇ ಇಲ್ಲ. ಇದರ ಮುಂದೆ ಕೇವಲ 'ಣ'ದ ಒತ್ತಿನದೇ ಒಂದು ಪಾಠ ಕೊಡಲಾಗಿದೆ. ಒತ್ತುಗಳ ಕಲ್ಪನೆ ಮಾಡಿಕೊಡುವ ಪದ್ಧತಿಯೂ ಸರಿಯಾದುದಲ್ಲ. 'ಗ್ಗ-ಣ್ಣ' ಇಂಥ ಅರ್ಥವಿಹೀನ, ಉಚ್ಚಾರಕಠಿಣ, ಒಂಟಿ ಅಕ್ಷರಗಳನ್ನು ಕಲಿಸದೆ ಅವುಗಳನ್ನೇ 'ಮಗ-ಮಗ್ಗ' 'ಬಣ-ಬಣ್ಣ' ಹೀಗೆ ಹೋಲಿಕೆಯ ಶಬ್ದಗಳಿಂದ ಒತ್ತಕ್ಷರಗಳ ಜ್ಞಾನ ಮಾಡಿಕೊಟ್ಟಿದ್ದರೆ ವಿಹಿತವಾಗುತ್ತಿತ್ತು. ನಮ್ಮ ಕನ್ನಡ ಒತ್ತಕ್ಷರಗಳನ್ನು ನಾವು (೧) ಮೂಲಾಕ್ಷರದಂತಿರುವ, (೨) ತಲೆಕೆಟ್ಟು ಹೋಗುವ, (೩) ವಿಕಾರಹೊಂದುವ ಒತ್ತುಗಳೆಂದು ಮೂರು ವಿಧವಾಗಿ ವಿಂಗಡಿಸಬಹುದು. ಅವುಗಳಲ್ಲಿ ಒಂದೊಂದನ್ನು ಒಂದು ಅಥವಾ ಎರಡೆರಡು ಪಾಠಗಳಲ್ಲಿ ಕೊಟ್ಟಿದ್ದರೆ ಎಲ್ಲ ಒತ್ತಕ್ಷರಗಳ ಸರಿಯಾದ ಕಲ್ಪನೆಯಾಗುತ್ತಿತ್ತು. ಹಾಗೆ ಮಾಡದೆ ಇಡೀ ಪುಸ್ತಕದಲ್ಲಿ 'ಗ-ಣ-ಟ-ಕ-ಮ-ನ-ದ-ಜ' ಈ ಎಂಟೇ ಒತ್ತುಗಳ ಕಲ್ಪನೆಯಾಗಿದೆ. ಒಟ್ಟಿನ ಮೇಲೆ ಮೂಲಾಕ್ಷರಗಳನ್ನು ಕಲಿಸುವಲ್ಲಿಯೂ ಹೊಂದಿಕೆ ಇಲ್ಲ; ಗುಣಿತಾಕ್ಷರಗಳನ್ನು ಹೇಳುವಲ್ಲಿಯೂ ಮೇಳವಿಲ್ಲ; ಒತ್ತಕ್ಷರಗಳನ್ನು ತಿಳಿಸುವಲ್ಲಿಯೂ ಕ್ರಮ-ಪೂರ್ಣತೆಗಳಿಲ್ಲ.

ಚಿತ್ರ, ಕವಿತೆ

ಪಾಠಗಳಲ್ಲಿ ಬಿಟ್ಟ ಜಾಗೆಯನ್ನು ತುಂಬಲಿಕ್ಕೆ ಕೆಲವು ಚಿತ್ರಗಳನ್ನು ಕೊಟ್ಟಿರುವದು ಯೋಗ್ಯ. ಆದರೆ ಅಂಥವುಗಳಲ್ಲಿ ೨೧ ನೆಯ ಪುಟದಲ್ಲಿಯ ಚಿತ್ರಗಳಲ್ಲಿ ೩ ನೆಯ "ಇವ ನಮ್ಮ....." ಈ ಚಿತ್ರಕ್ಕೆ ಬಾಲಕರಿಂದ ಇಚ್ಛಿಸಬಹುದಾದ ನಿರ್ದಿಷ್ಟ ಉತ್ತರವೇನು? ಬಾಲಕರು ಅದಕ್ಕೆ ಏನೆಂದು ಉತ್ತರಿಸಬೇಕು? 'ಅಪ್ಪ-ಅಜ್ಜ' ಎನ್ನುವರೇ ಶಕ್ಯವಿಲ್ಲ. ಮೌನ. ಬಾಲಕರ ವರ್ಗಕ್ಕೆ ಹಾಡು ಹೆಚ್ಚಿಗೆ ಬೇಕು ಅವು ಅತ್ಯಲ್ಪವಾಗಿವೆ. ಗಣಿತ ಪಾಠಗಳೇ ಇರುವದಿಲ್ಲ. ಗಣಿತ ಪಾಠಗಳಿಲ್ಲದೆ ಪುಸ್ತಕ ಪೂರ್ಣವಾಗಲಾರದು.

ಈ ನನ್ನ ಬರೆಹವು 'ಹೊಸದೆಲ್ಲ ಕಸ' ಎಂಬ ಹಳೆಯ ಧೋರಣೆಯದಲ್ಲ. ಆದರೆ ಇದು ಪಠ್ಯವಾಗಿ, ಶಿಕ್ಷಕರಿಗೆ ಅರಿಯದ ಕ್ರಮವಾಗಿ ಅವರು ಪಡುತ್ತಿರುವ ಎದೆಗುದಿಯ ದ್ಯೋತಕ!

ನಮ್ಮ ಸರಕಾರಕ್ಕೆ ನಮ್ಮ ಬಾಲಕರ ಶಿಕ್ಷಣವು ಹೇಗೆ ಸುಗಮವಾಗಿ, ಸರಸವಾಗಿ, ತೀವ್ರ ಗತಿಯಿಂದ ಸಾಗೀತೆಂಬ ಆಶೆ–ಆಕಾಂಕ್ಷೆಗಳಿವೆ. ಅಂತೇ ಮಾನ್ಯ ಸರಕಾರವು ಕೇವಲ ಶಿಕ್ಷಣಶಾಸ್ತ್ರ ಬಲ್ಲಿದರನ್ನು ಈ ಕಾರ್ಯಕ್ಕೆ ನೇಮಿಸಿದೆ, ಆದರೆ ಪ್ರವಾಹದ ಆಳವನ್ನು ಅದರ ನಡು-ಕಡೆ-ಮೊದಲುಗಳ ಸರಾಸರಿಯಿಂದ ಅಳೆದು ದಾಟಲೆತ್ನಿಸಿ ಹಾನಿಗೊಳಗಾದ ತಾರ್ಕಿಕನಂತೆ, ರೈತರ ಇಚ್ಛೆ ಅನುಭವಗಳನ್ನು ಲಕ್ಷಿಸದೆ ತಮ್ಮ ಕಲ್ಪನಾಯೋಜನೆಯ ಕುದುರೆಯನ್ನು ಕಾರ್ಯರಂಗದ ಪಣಕ್ಕೆ ಹಚ್ಚಿ ಸೋಲನ್ನೊಪ್ಪಿದ "ಡೊಂಕ ಒಡ್ಡು"ಗಳ ಸಾಹಸದಂತೆ, ಈ ಮೊದಲ ಓದಿನ ಪ್ರಯತ್ನವಾಗಿದೆ.

ಮಾನ್ಯ ಸಂಪಾದಕ ಮಂಡಲದವರು ತಮ್ಮ ಯೋಜನೆ ಕ್ರಮಗಳು ಶಿಕ್ಷಣ ತತ್ವ ಮಾನಸಶಾಸ್ತ್ರಗಳಿಗೆ ಹೇಗೆ ಸುಸಂಗತ ಸುಸಂಬದ್ಧವಾಗಿವೆ ಎಂಬದನ್ನು ಸಕಲ ಜನರ ಅವಗಾಹನೆಗಾಗಿದಯವಿಟ್ಟು ಪ್ರಕಟಪಡಿಸಲಿ ಮತ್ತು ಅದನ್ನು ಸರಕಾರವು ಪ್ರತಿಯೊಬ್ಬ ಶಿಕ್ಷಕನಿಗೆ ಮುಟ್ಟುವಂಥ ಯೋಜನೆ ಮಾಡುವ ಕೃಪೆ ಮಾಡಲಿ.

ಅಣುಭೇದಕ ಯಂತ್ರ

೨೦ ಕೋಟಿ ವ್ಹೋಲ್ಟ್ ಶಕ್ತಿಯ ಅಣುಭೇದಕ ಯಂತ್ರವೊಂದನ್ನು ದರ್ಬಾನಿನ ಹೋವರ್ಡ ಕಾಲೇಜಿನಲ್ಲಿ ಕಟ್ಟಲಾಗುತ್ತಿದೆ. ಅದರ ನಡುದೊಲೆ ೬ ಅಂಗುಲಗಳ ವರೆಗೆ ಗಟ್ಟಿ ಉಕ್ಕಿನಲ್ಲಿ ನುಗ್ಗಬಲ್ಲುದು. ಜೋಹಾನ್ಸ್ ಬರ್ಗಿನ ತರುಣ ಗಣಿತಶಾಸ್ತ್ರಜ್ಞನು ಅದನ್ನು ಯೋಜಿಸಿದ್ದು, ಯಂತ್ರವು ಸಾಮಾನ್ಯ ಕ್ಷ ಕಿರಣಯಂತ್ರಕ್ಕಿಂತ ೫೦ ಪಟ್ಟು ದೊಡ್ಡದಾಗಿದೆ. ಅದನ್ನು ತಯಾರಿಸಲು ಕೂಡ ಅದಕ್ಕಿಂತ ಕಡಿಮೆ ಖರ್ಚು ಬಿದ್ದಿತಂತೆ. ಪ್ರಯೋಗವು ಯಶಸ್ವಿಯಾದರೆ ಈ ಯಂತ್ರದ ಚಿಕ್ಕ ಮಾದರಿಗಳು ಅಲ್ಲಿಯ ೧೬ ಆಸ್ಪತ್ರೆಗಳಿಗಲ್ಲದೆ ಉಸ್ತುವಿಗಳಿಗೂ ದೊರಕಬಹುದೆಂದು ಹೇಳಲಾಗಿದೆ.

ಈ ಪತ್ರಿಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.